ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಆಗಸ್ಟ್ 26 ಶನಿವಾರ 2023

ಸಂಪುಟ: 44 | ಸಂಚಿಕೆ: 131 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮಳೆ ಕೊರತೆಯಾದರೂ ಆಹಾರ ಧಾನ್ಯ ಉತ್ಪಾದನೆಯಲ್ಲಿ ದೊಡ್ಡ ವ್ಯತ್ಯಾಸವಾಗದು

● ಕೃಷಿ ಸಚಿವ ಚಲುವರಾಯಸ್ವಾಮಿ ವಿಶ್ವಾಸ ● ರಾಜ್ಯದ 130 ತಾಲೂಕಲ್ಲಿ ಬರದ ಛಾಯೆ; ವಾರದಲ್ಲಿ ಅಧಿಕೃತ ಘೋಷಣೆ ● ಗ್ಯಾರಂಟಿ ಕೈಹಿಡಿಯುವುದರಿಂದ ಗ್ರಾಮೀಣ ಜನತೆಗೇನೂ ತೊಂದರೆ ಇಲ್ಲ



ಬೆಂಗಳೂರು, ಆ.25(ಕೆಎಂಶಿ)–ಮಳೆ ಕೊರತೆಯಿಂದ ರಾಜ್ಯದ ಬಹುಭಾಗ ಬರದ ಮುಷ್ಠಿಯಲ್ಲಿದ್ದರೂ ಆಹಾರ ಧಾನ್ಯ ಉತ್ಪಾದನೆಯಲ್ಲಿ ಹೆಚ್ಚು ವ್ಯತ್ಯಾಸವಾಗದು ಎಂದು ಕೃಷಿ ಸಚಿವ ಚಲುವರಾಯಸ್ವಾಮಿ ಇಂದಿಲ್ಲಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 130 ತಾಲೂಕುಗಳಲ್ಲಿ ಬರದ ಛಾಯೆ ಇದೆ. ಆದರೆ, ಕೇಂದ್ರ ಸರ್ಕಾರದ ಮಾರ್ಗಸೂಚಿ ಪ್ರಕಾರ ಇವುಗಳನ್ನು ಇನ್ನೂ ಒಂದು ವಾರ ಕಾಲ ಅಧಿಕೃತವಾಗಿ ಘೋಷಣೆ ಮಾಡಲು ಸಾಧ್ಯವಿಲ್ಲ ಎಂದರು. ಜಲಾಶಯಗಳ ಕೆಳಭಾಗ, ಕೆರೆ–ಕಟ್ಟೆಗಳು ಹಾಗೂ ಬೋರ್‌ವೆಲ್ ವ್ಯಾಪ್ತಿಯಲ್ಲಿ ಬಿತ್ತನೆಯಾಗಿರುವ ಬೆಳೆಗಳಿಗೆ ನೀರಿನ ಕೊರತೆ ಇಲ್ಲ. ಉತ್ತರ ಕರ್ನಾಟಕ ಭಾಗದ ಬಹುತೇಕ ಜಲಾಶಯಗಳು ಭರ್ತಿಯಾಗಿವೆ. ಉಳಿದ ಭಾಗದಲ್ಲಿ ಒಂದು ಬೆಳೆಗಾಗುವಷ್ಟು ನೀರು ಸಂಗ್ರಹವಾಗಿರುವುದರಿಂದ ಆಹಾರಧಾನ್ಯ ಉತ್ಪಾದನೆಯಲ್ಲಿ ದೊಡ್ಡ ವ್ಯತ್ಯಾಸವಾಗುವುದಿಲ್ಲ ಎಂದು ಹೇಳಿದರು. ಮಳೆ ಇಲ್ಲದೆ ರೈತ ಕಂಗಾಲಾಗಿದ್ದರೂ, ಅವನ ಬೆನ್ನೆಲುಬಾಗಿ ಸರ್ಕಾರ ನಿಂತಿದೆ. ಒಂದೆಡೆ ವಿಮೆ ಮೂಲಕ ಪರಿಹಾರ ಕೊಡಿಸುವುದು. ಮತ್ತೊಂದೆಡೆ ಗ್ರಾಮೀಣ ಭಾಗದ ಶೇ.90ರಷ್ಟು ಕುಟುಂಬಗಳಿಗೆ ಸರ್ಕಾರದ ನಾಲ್ಕು ಗ್ಯಾರಂಟಿ ಯೋಜನೆಗಳು ಅವರ ಮನೆ ಬಾಗಿಲಿಗೆ ತಲುಪುತ್ತವೆ. ಇದರಿಂದ ದೃತಿಗೆಡುವ ಅಗತ್ಯವಿಲ್ಲ. ರೈತರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಕೇಂದ್ರದ ಮಾರ್ಗಸೂಚಿ ಮುಂದಿಟ್ಟುಕೊಂಡು ಬರಪೀಡಿತ ಆಯ್ದ ಗ್ರಾಮಗಳಲ್ಲಿ ಬೆಳೆ ಸಮೀಕ್ಷೆ ಮಾಡಲಾಗುತ್ತಿದೆ. ಜಿಲ್ಲಾಧಿಕಾರಿಗಳು ಮತ್ತು ನಮ್ಮ ಇಲಾಖಾಧಿಕಾರಿಗಳು ಮಾಸಾಂತ್ಯದೊಳಗೆ ವಾಸ್ತವ ಸ್ಥಿತಿಯ ವರದಿ ನೀಡಲಿದ್ದಾರೆ. ಆ ವರದಿಯನ್ನು ಸಚಿವ ಸಂಪುಟದ ಉಪ ಸಮಿತಿಯಲ್ಲಿ ಚರ್ಚಿಸಿ ನಂತರ ಬರ ಘೋಷಣೆ ಮಾಡಲಾಗುವುದು.



ಮುಂಗಾರು ಹಂಗಾಮಿನಲ್ಲಿ ಶೇ.79ರಷ್ಟು ಅಂದರೆ, 64.84 ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಬಿತ್ತನೆಯಾಗಿದೆ. ಆದರೆ, ಮೊಳಕೆಯೊಡೆದಿದ್ದರೂ ಮಳೆ ಇಲ್ಲದೆ, ರೈತರಿಗೆ ಧಕ್ಕಬಹುದಾದ ಆಹಾರ ಧಾನ್ಯ ಸಿಗುತ್ತಿಲ್ಲ. ಇನ್ನೊಂದು ವಾರದಲ್ಲಿ ಮಳೆಯಾದರೂ ಶೇ.50ರಿಂದ 60ರಷ್ಟು ಬೆಳೆ ಉಳಿಯುತ್ತದೆ. ಆದರೆ, ಹವಾಮಾನ ಇಲಾಖೆ ನೀಡಿರುವ ವರದಿ ಪ್ರಕಾರ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ವಾಡಿಕೆ ಮಳೆಯಾಗುವ ಮುನ್ಸೂಚನೆಗಳಿಲ್ಲ. ● 9ನೇ ಪುಟಕ್ಕೆ

ವಿಜ್ಞಾನಿಗಳ ಅಭಿನಂದಿಸಲು ಪ್ರಧಾನಿ ಮೋದಿ ಇಂದು ಇಸ್ರೊಗೆ ಭೇಟಿ



ಬೆಂಗಳೂರು, ಆ.25– ಚಂದ್ರಯಾನ–3ರ ಯಶಸ್ಸಿನ ಅಲೆಯಲ್ಲಿ ಇಸ್ರೊ ಬಾಹ್ಯಾಕಾಶ ಸಂಸ್ಥೆ ಮತ್ತು ಇಡೀ ಭಾರತೀಯರು ತೇಲುತ್ತಿದ್ದಾರೆ. ಮೊನ್ನೆ ಚಂದ್ರನ ಅಂಗಳದಲ್ಲಿ ಲ್ಯಾಂಡರ್ ಇಳಿಕೆಯಾದ ಸಂದರ್ಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗವಹಿಸಲು ದಕ್ಷಿಣ ಆಫ್ರಿಕಾದಲ್ಲಿದ್ದರು.

ಅಲ್ಲಿಂದ ದೂರವಾಣಿ ಕರೆ ಮಾಡಿ ಇಸ್ರೊ ಅಧ್ಯಕ್ಷ ಎಸ್.ಸೋಮನಾಥ್ ಜೊತೆ ಮಾತನಾಡಿದ್ದ ಪ್ರಧಾನ ಮಂತ್ರಿಗಳು, ನಾಳೆ (ಶನಿವಾರ) ಖುದ್ದು ಬೆಂಗಳೂರಿನ ಇಸ್ರೋ ಕಚೇರಿಗೆ ಬಂದು ವಿಜ್ಞಾನಿಗಳನ್ನು ಅಭಿನಂದಿಸಲಿದ್ದಾರೆ. ದಕ್ಷಿಣ ಆಫ್ರಿಕಾದ ಜೋಹಾನ್ಸ್‌ಬರ್ಗ್‌ನಲ್ಲಿ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಿರುವ ಪ್ರಧಾನಿ ಮೋದಿ ಅಲ್ಲಿಂದ ನೇರವಾಗಿ ನಾಳೆ ಬೆಳಗ್ಗೆ ಬೆಂಗಳೂರಿನ ಎಚ್‌ಎಎಲ್ ವಿಮಾನ ನಿಲ್ದಾಣಕ್ಕೆ ಬಂದಿಳಿಯಲಿದ್ದಾರೆ. ಹೀಗಾಗಿ ನಗರದ ಕೆಲ ರಸ್ತೆಗಳ ಸಂಚಾರ ಮಾರ್ಗ ಬದಲಾವಣೆ ಮಾಡಲಾಗಿದೆ. ಓಲ್ಡ್ ಏರ್‌ಪೋರ್ಟ್ ರಸ್ತೆ, ಓಲ್ಡ್ ಮದ್ರಾಸ್ ರಸ್ತೆ, ಎಂ.ಜಿ.ರಸ್ತೆ, ಕಬ್ಬನ್ ರಸ್ತೆ, ರಾಜಭವನ ರಸ್ತೆ, ಬಳ್ಳಾರಿ ರಸ್ತೆ (ಮೇಖ್ರಿ ಸರ್ಕಲ್), ಸಿವಿ ರಾಮನ್ ರಸ್ತೆ, ಯಶವಂತಪುರ ಫ್ಲೈ ಓವರ್, ತುಮಕೂರು ರಸ್ತೆ (ಯಶವಂತಪುರದಿಂದ ನಾಗಸಂದ್ರದವರೆಗೆ) ಮಾಗಡಿ ರಸ್ತೆ, ಹೊರವರ್ತುಲ ರಸ್ತೆ (ಗೊರ ಗುಂಟೆ ಪಾಳ್ಯ ಜಂಕ್ಷನ್‌ನಿಂದ ● 9ನೇ ಪುಟಕ್ಕೆ

ಚಂದ್ರನ ಮೇಲ್ಮೈನಲ್ಲಿ 8 ಮೀಟರ್ ಕ್ರಮಿಸಿದ ಪ್ರಗ್ಯಾನ್ ರೋವರ್



ಬೆಂಗಳೂರು: ಚಂದ್ರನ ಮೇಲ್ಮೈನಲ್ಲಿ ಇಳಿದಿರುವ ಪ್ರಗ್ಯಾನ್ ರೋವರ್ 8 ಮೀಟರ್ ಕ್ರಮಿಸಿದೆ ಎಂದು ಇಸ್ರೋ ಮಾಹಿತಿ ನೀಡಿದೆ.

ಪ್ರಗ್ಯಾನ್ ರೋವರ್‌ನ ಪೇಲೋಡ್ ಸಹ ಕಾರ್ಯನಿರ್ವಹಣೆ ಮಾಡಲು ಪ್ರಾರಂಭಿಸಿದೆ. ರೋವರ್‌ನ ಯೋಜಿತ ಚಟುವಟಿಕೆಗಳನ್ನು ದೃಢೀಕರಿಸಲಾಗಿದೆ. ರೋವರ್ 8 ಮೀಟರ್‌ಗಳಷ್ಟು ಕ್ರಮಿಸಿದ್ದು, ಪೇಲೋಡ್‌ಗಳಾದ ಎಲ್‌ಐಬಿಎಸ್ ಹಾಗೂ ಎಪಿಎಕ್ಸ್‌ಎಸ್‌ಗಳನ್ನೂ ಚಾಲೂ ಮಾಡಲಾಗಿದೆ ಎಂದು ಬಾಹ್ಯಾಕಾಶ ಸಂಸ್ಥೆ ಟ್ವಿಟರ್‌ನಲ್ಲಿ ತಿಳಿಸಿದೆ. ಪ್ರೊಪಲ್ಷನ್ ಮಾಡ್ಯೂಲ್, ● 9ನೇ ಪುಟಕ್ಕೆ

ಪ್ರಧಾನಿ ಮೋದಿಗೆ ಗ್ರೀಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರದಾನ



■ ಪುಟ–10

ಅಂಬಾನಿ–ಅದಾನಿ ಜೇಬಲ್ಲಿ ಹಣ ಇದ್ದರೇನು ಫಲ; ತಿಮ್ಮ, ಬೋರ, ಕಾಳನ ಕೈಲಿ ಹಣವಿದ್ದರಷ್ಟೇ ಆರ್ಥಿಕ ಬೆಳವಣಿಗೆ

● ಮುಖ್ಯಮಂತ್ರಿ ಸಿದ್ದರಾಮಯ್ಯ ವಿಶ್ಲೇಷಣೆ
● ದಿ.ಡಾ.ಸಿದ್ದಲಿಂಗಯ್ಯ ಸ್ಮರಣೆ; ಪುತ್ಥಳಿ ಅನಾವರಣ



ಬೆಂಗಳೂರು, ಆ.25(ಕೆಎಂಶಿ)– ಬರೀ ಅಂಬಾನಿ–ಅದಾನಿ ಜೇಬಿನಲ್ಲಿ ಹಣ ಇದ್ದರೆ ಬಡವರಿಗೆ, ಮಧ್ಯಮ ವರ್ಗದವರ ಉದ್ಧಾರ ಸಾಧ್ಯವಿಲ್ಲ. ತಿಮ್ಮ–ಬೋರ–ಕಾಳನ ಜೇಬಿನಲ್ಲಿ ಹಣ ಇದ್ದರೆ ಮಾತ್ರ ಆರ್ಥಿಕತೆ ಬೆಳವಣಿಗೆ ಆಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ನುಡಿದರು.

ಕರ್ನಾಟಕ ಆದಿಜಾಂಬವರ ಸಾಂಸ್ಕೃತಿಕ ಸಮಿತಿ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ದಿ. ಡಾ.ಸಿದ್ದಲಿಂಗಯ್ಯ ಸ್ಮರಣೆ ಕಾರ್ಯಕ್ರಮವನ್ನು ಉದ್ಘಾಟಿಸಿ, ಸಿದ್ದಲಿಂಗಯ್ಯ ಅವರ ಪುತ್ಥಳಿಯನ್ನು ಅನಾವರಣಗೊಳಿಸಿ ಮಾತನಾಡಿದ ಅವರು, ದುಡಿಯುವವರ, ಶ್ರಮಿಕರ ಜೇಬಿನಲ್ಲಿ ಹಣ ಇದ್ದರೆ ಅವರು ದೇಶದ ಆರ್ಥಿಕತೆಯ ಬೆಳವಣಿಗೆಗೆ ಕಾರಣರಾಗುತ್ತಾರೆ. ಕೇವಲ ಅಂಬಾನಿ, ಅದಾನಿ ಜೇಬು ತುಂಬಿಸುವವರ ಕೈಗೆ ಅಧಿಕಾರ ಕೊಟ್ಟು ಇಡೀ ದೇಶ ಪರಿತಪಿಸುವಂತಾಗಿದೆ ಎಂದರು. ಈ ಕಾರಣಕ್ಕೆ ನಮ್ಮ ಸರ್ಕಾರ ತಿಮ್ಮ–ಬೋರ–ಕಾಳನ ಶ್ರಮಿಕ ವರ್ಗದ ಜೇಬಿಗೆ ಹಣ ಹಾಕುವ ಅನ್ನ ಭಾಗ್ಯ, ಶಕ್ತಿ, ● 9ನೇ ಪುಟಕ್ಕೆ

ಜನರಲ್ ಕೆ.ಎಸ್.ತಿಮ್ಮಯ್ಯ ಪ್ರತಿಮೆ ಆಯ್ತು, ಈಗ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತಕ್ಕೆ ಸಾರಿಗೆ ಬಸ್ ಡಿಕ್ಕಿ

● ಸಾರಿಗೆ ಸಂಸ್ಥೆ ವಿರುದ್ಧ ಸಾರ್ವಜನಿಕರ ಪ್ರತಿಭಟನೆ
● ಸ್ಥಳಕ್ಕೆ ಶಾಸಕ ಎ.ಎಸ್. ಪೊನ್ನಣ್ಣ ಭೇಟಿ
● ಕೆಎಸ್‌ಆರ್‌ಟಿಸಿ ವತಿಯಿಂದ ವೃತ್ತ ದುರಸ್ತಿಗೆ ಸೂಚನೆ

ವೃತ್ತದ ಒಂದು ಭಾಗಕ್ಕೆ ಹಾನಿ ಪ್ರತಿಮೆಗೆ ಯಾವುದೇ ಅಪಾಯವಿಲ್ಲ

ಮಡಿಕೇರಿ, ಆ.25– ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದು ಪಟ್ಟಣದ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪ್ರತಿಮೆ ಧರೆಗುರುಳಿದ ಘಟನೆ ಜನರ ಮನಸ್ಸಿನಿಂದ ಮಾಸುವ ಮುನ್ನವೇ ಇಂತಹುದ್ದೇ ಮತ್ತೊಂದು ಘಟನೆ ಶುಕ್ರವಾರ ಸಂಜೆ ಸಂಭವಿಸಿದೆ. ಮಡಿಕೇರಿಯ ಹಳೆಯ ಖಾಸಗಿ ಬಸ್ ನಿಲ್ದಾಣದಲ್ಲಿರುವ ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ವೃತ್ತಕ್ಕೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದಿದ್ದು, ವೃತ್ತದ ಒಂದು ಭಾಗಕ್ಕೆ ಹಾನಿಯಾಗಿದೆ. ಅದೃಷ್ಟವಶಾತ್ ಪ್ರತಿಮೆ ಸುರಕ್ಷಿತವಾಗಿದೆ.

ಮಡಿಕೇರಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಮೈಸೂರಿನತ್ತ ತೆರಳುತ್ತಿದ್ದ ಬಸ್, ಸ್ಕ್ವಾ.ಲೀ.ಅಜ್ಜಮಾಡ ದೇವಯ್ಯ ವೃತ್ತದ ಎಡಭಾಗಕ್ಕೆ ಡಿಕ್ಕಿಯಾಗಿದೆ. ಇದರಿಂದ ವೃತ್ತಕ್ಕೆ ಅಳವಡಿಸಲಾಗಿದ್ದ ಗ್ರಾನೈಟ್, ಇಟ್ಟಿಗೆಗಳು ಧ್ವಂಸಗೊಂಡಿವೆ. ಕೆಲ ದಿನಗಳ ಹಿಂದೆಯಷ್ಟೇ ನಗರದ ಜನರಲ್ ಕೆ.ಎಸ್. ತಿಮ್ಮಯ್ಯ ವೃತ್ತಕ್ಕೆ ಬಸ್ ಡಿಕ್ಕಿಯಾಗಿ, ಪ್ರತಿಮೆ ಧರೆಗುರುಳಿ ವೃತ್ತ ಧ್ವಂಸಗೊಂಡಿತ್ತು ಇಂದಿನ ಘಟನೆಯಿಂದ ಸಾರಿಗೆ ಸಂಸ್ಥೆ ಸಿಬ್ಬಂದಿಯ ಕಾರ್ಯ ವೈಖರಿಗೆ ಜನ ಅತೀವ ಬೇಸರ ವ್ಯಕ್ತಪಡಿಸಿದ್ದಾರೆ. ಸ್ಕ್ವಾ.ಲೀ. ಅಜ್ಜಮಾಡ ದೇವಯ್ಯ ಪ್ರತಿಮೆ ಸ್ಥಾಪನೆಗೆ ಶ್ರಮಿಸಿದ್ದ ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

> **“** ಅಜ್ಜಮಾಡ ದೇವಯ್ಯನವರ ವೃತ್ತಕ್ಕೆ ಡಿಕ್ಕಿ ಹೊಡೆದ ಬಸ್ ಮೈಸೂರು ಡಿಪೋಗೆ ಸೇರಿದ್ದಾಗಿದ್ದು, ಪ್ರತಿನಿತ್ಯ ಧರ್ಮಸ್ಥಳ–ಸುಬ್ರಹ್ಮಣ್ಯ–ಮಡಿಕೇರಿ ಮತ್ತು ಮೈಸೂರು ನಡುವೆ ಸಂಚರಿಸುತ್ತಿತ್ತು. ಇಂದು ಈ ಬಸ್ ಅನ್ನು ಮಧು ಎಂಬುವವರು ಚಾಲನೆ ಮಾಡುತ್ತಿದ್ದರು.

ರಸ್ತೆ ತಡೆ: ವಿಷಯ ತಿಳಿಯುತ್ತಿದ್ದಂತೆಯೇ ಸಾರ್ವಜನಿಕರು, ಟ್ಯಾಕ್ಸಿ ಚಾಲಕರು, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಸ್ಕ್ವಾ.ಲೀ. ಅಜ್ಜಮಾಡ ದೇವಯ್ಯ ವೃತ್ತದ ಬಳಿ ಜಮಾಯಿಸಿ ರಸ್ತೆ ತಡೆ ನಡೆಸಿ, ಕೆ.ಎಸ್.ಆರ್.ಟಿ.ಸಿ. ಸಂಸ್ಥೆಯ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿದರು.

ಘಟನೆಗೆ ಕಾರಣನಾದ ಬಸ್ ಚಾಲಕನ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಸೆ.7ರಂದು ಸ್ಕ್ವಾಡ್ರನ್ ಲೀಡರ್ ಅಜ್ಜಮಾಡ ದೇವಯ್ಯ ಅವರ 58ನೇ ಸ್ಮರಣೆ ಕಾರ್ಯಕ್ರಮ ನಡೆಯಲಿದ್ದು, ● 9ನೇ ಪುಟಕ್ಕೆ





ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ಜನವರಿಯಲ್ಲಿ ಭೂಮಿ ಪೂಜೆ

● ಅಂಡರ್ ಪಾಸ್ ನಿರ್ಮಾಣ ಪ್ರಸ್ತಾಪ ಇಲ್ಲ ● ಭವಿಷ್ಯದ ದೃಷ್ಟಿಯಿಂದ 3.5 ಕಿಲೋಮೀಟರ್ ರನ್ ವೇ ನಿರ್ಮಾಣ ● ಇದಕ್ಕಾಗಿ ಹೆದ್ದಾರಿ ಮಾರ್ಗ ಬದಲಾವಣೆ; 6 ಪಥದ ನೂತನ ಹೆದ್ದಾರಿ ● ಶಾಸಕ ಜಿ.ಟಿ.ದೇವೇಗೌಡರ ಮನವಿಗೆ ಸಕರಾತ್ಮಕ ಸ್ಪಂದನೆ

ಮೈಸೂರು ವಿಮಾನ ನಿಲ್ದಾಣ ಸಲಹಾ ಸಮಿತಿ ಸಭೆ ಸಮ್ಮತಿ

ಮೈಸೂರು, ಆ.25(ಬಿಎಲ್‌ಯು)– ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಕಾಮಗಾರಿಗೆ ಜನವರಿಯಲ್ಲಿ ಭೂಮಿ ಪೂಜೆ ನೆರವೇರಿಸಲು ಮೈಸೂರು ವಿಮಾನ ನಿಲ್ದಾಣದ ಸಲಹಾ ಸಮಿತಿ ಸಮ್ಮತಿಸಿದೆ.

ಮೈಸೂರು ವಿಮಾನ ನಿಲ್ದಾಣದ ವಿಐಪಿ ಲಾಂಜ್‌ನಲ್ಲಿ ಸಂಸದ ಪ್ರತಾಪ್ ಸಿಂಹ ಅಧ್ಯಕ್ಷತೆಯಲ್ಲಿ ನಡೆದ ಸಲಹಾ ಸಮಿತಿ ಸಭೆಯಲ್ಲಿ ರನ್ ವೇ ವಿಸ್ತರಣೆ ಸೇರಿದಂತೆ ವಿಮಾನ ನಿಲ್ದಾಣದ ಅಭಿವೃದ್ಧಿ ಕುರಿತಂತೆ ಸುದೀರ್ಘ ಕಾಲ ಚರ್ಚಿಸಲಾಯಿತು. ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆ ಮಾಡುವ ಕಾಮಗಾರಿಗೆ ಜನವರಿಯಲ್ಲಿ ಭೂಮಿ ಪೂಜೆ ನೆರವೇರಿಸುವ ಪ್ರತಾಪ್ ಸಿಂಹ ಪ್ರಸ್ತಾಪಕ್ಕೆ ಸಭೆ ಸಮ್ಮತಿಸಿತು. ಮೈಸೂರು ವಿಮಾನ ನಿಲ್ದಾಣದ ರನ್ ವೇ ವಿಸ್ತರಣೆಗೆ ನಂಜನಗೂಡು ರಸ್ತೆಯಲ್ಲಿ ಅಂಡರ್ ಪಾಸ್ ನಿರ್ಮಿಸುವ ಪ್ರಸ್ತಾಪವನ್ನು ಕೈಬಿಡಲಾಯಿತು. ಅಂಡರ್ ಪಾಸ್ ಬದಲು ಮೈಸೂರು ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ಮಾರ್ಗ ಬದಲಾವಣೆಗೆ ಇದೇ ವೇಳೆ ನಿರ್ಧಾರ ಕೈಗೊಳ್ಳಲಾಯಿತು. ● 6ನೇ ಪುಟಕ್ಕೆ



ಕಾರ್ಗೋ ವಿಮಾನ ಹಾರಾಟಕ್ಕೆ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಸಲಹೆ





ಮೈಸೂರು ಸುತ್ತಮುತ್ತ ಹೂವು, ಹಣ್ಣುಗಳನ್ನು ಯಥೇಚ್ಛವಾಗಿ ಬೆಳೆಯಲಾಗುತ್ತಿದೆ. ಅದನ್ನು ರಫ್ತು ಮಾಡಲು ಅನುಕೂಲವಾಗುವಂತೆ ಮೈಸೂರು ವಿಮಾನ ನಿಲ್ದಾಣದಿಂದ ಕಾರ್ಗೋ ವಿಮಾನಗಳ ಹಾರಾಟ ಆರಂಭಿಸುವಂತೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಜೆ.ಆರ್.ಅನೂಪ್ ಅವರಿಗೆ ಸಲಹೆ ನೀಡಿದರು. ಹೂವು, ಹಣ್ಣುಗಳನ್ನು ರಫ್ತು ಮಾಡಲು ಅನುಕೂಲವಾಗುವಂತೆ ಮೈಸೂರು ವಿಮಾನ ನಿಲ್ದಾಣದಲ್ಲೆ ಕೋಲ್ಡ್ ಸ್ಟೋರೇಜ್ ಸಹ ನಿರ್ಮಿಸಬೇಕು. ಈ ಮೂಲಕ ಮೈಸೂರನ್ನು ಎಕ್ಸ್‌ಪೋರ್ಟ್ ಹಬ್ ಆಗಿಯೂ ಮಾಡಬಹುದು ಎಂದು ಹೇಳಿದರು. ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣ, ನಗರ ಪಾಲಿಕೆ ವ್ಯಾಪ್ತಿಗೆ ಹೊಂದಿಕೊಂಡಂತೆ ಇದೆ. ಈಗಿರುವ ಸ್ಥಳವನ್ನು ಬಳಸಿಕೊಂಡು ಈಗಲೇ ವಿಮಾನ ನಿಲ್ದಾಣವನ್ನು ಅಭಿವೃದ್ಧಿ ಮಾಡಬೇಕು. ನಗರ ಬೆಳವಣಿಗೆ ಹೊಂದಿದರೆ ಮುಂದೆ ವಿಮಾನ ನಿಲ್ದಾಣ ಅಭಿವೃದ್ಧಿ ಸಾಧ್ಯವಾಗದು. ಈ ಕಾರಣದಿಂದ ಭವಿಷ್ಯದ ದೃಷ್ಟಿಯಿಂದ ಈಗಲೇ ವಿಮಾನ ನಿಲ್ದಾಣದ ಅಭಿವೃದ್ಧಿ ಮಾಡಬೇಕು ಎಂದು ತಿಳಿಸಿದರು. ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮನ ಹಾಗೂ ನಿರ್ಗಮಿಸಲು ಪ್ರಯಾಣಿಕರಿಗೆ ಅನುಕೂಲವಾಗುವಂತೆ ಪ್ರಿ ಪೇಯ್ಡ್ ವಾಹನದ ವ್ಯವಸ್ಥೆ ಮಾಡಬೇಕು. ಜೊತೆಗೆ ವಿಮಾನ ನಿಲ್ದಾಣದ ಹೊರಗೆ ಬಸ್ ನಿಲ್ದಾಣ ಕೂಡ ನಿರ್ಮಿಸುವ ಅಗತ್ಯವಿದೆ ಎಂದು ಏರ್‌ಪೋರ್ಟ್ ಅಥಾರಿಟಿ ಅಧಿಕಾರಿಗಳು ಹಾಗೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಡಾ.ರಾಜೇಂದ್ರ ಸೂಚನೆ ನೀಡಿದರು.

ಮೈಸೂರಲ್ಲಿ ಮೆಟ್ರೊ ಇಲ್ಲವೇ ಮೊನೊ ರೈಲು ಯೋಜನೆ



ಇದಕ್ಕೆ ಪೆರಿಫೆರಲ್ ರಿಂಗ್ ರಸ್ತೆ ಮಧ್ಯೆ 15 ಮೀಟರ್ ಜಾಗ ಮೀಸಲು; ಪ್ರತಾಪ್‌ಸಿಂಹ

ಮೈಸೂರು, ಆ.25(ಬಿಎಲ್‌ಯು)– ಮೈಸೂರಿನಲ್ಲಿ ನಿರ್ಮಿಸಲುದ್ದೇಶಿಸಿರುವ ಪೆರಿಫೆರಲ್ ರಿಂಗ್ ರಸ್ತೆಯಲ್ಲಿ ಮೆಟ್ರೊ ಅಥವಾ ಮೊನೊ ರೈಲು ಯೋಜನೆ ರೂಪಿಸಲು ಅನುಕೂಲವಾಗುವಂತೆ ಗುಜರಾತ್‌ನ ಸೂರತ್ ಹಾಗೂ ಹೈದರಾಬಾದ್ ಮಾದರಿಯಲ್ಲಿ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು. ಪೆರಿಫೆರಲ್ ರಿಂಗ್ ರಸ್ತೆ ಮಾಡುವಾಗಲೇ ಮೆಟ್ರೊ ಅಥವಾ ಮೊನೊ ರೈಲಿಗೆ ಜಾಗ ಬಿಡದಿದ್ದರೆ ಮುಂದೆ ರಸ್ತೆ ಅಗೆದು, ಕಟ್ಟಡ ಒಡೆಯುವ ಪರಿಸ್ಥಿತಿ ಬರುತ್ತದೆ. ಆದ ಕಾರಣ ಈಗಲೇ ಮೆಟ್ರೊ ಹಾಗೂ ಮೊನೊ ರೈಲು ಸಂಚಾರಕ್ಕೆ ಸ್ಥಳಾವಕಾಶ ಮೀಸಲಿರಿಸುವ ಯೋಜನೆ ಸಿದ್ಧಪಡಿಸಲಾಗುತ್ತಿದೆ ಎಂದು ಹೇಳಿದರು.

ಮೈಸೂರು ಸುತ್ತ 102 ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಪೆರಿಫೆರಲ್ ರಿಂಗ್ ರಸ್ತೆ ನಿರ್ಮಾಣ ಮಾಡಲಾಗುತ್ತಿದೆ. ಆಗಮನದಲ್ಲಿ 4 ಪಥ ಹಾಗೂ ನಿರ್ಗಮನದಲ್ಲಿ 4 ಪಥವಿರುತ್ತದೆ. ಮಧ್ಯೆ 15 ಮೀಟರ್ ಸ್ಥಳಾವಕಾಶವಿರುತ್ತದೆ. ಈ ಜಾಗದಲ್ಲಿ ಮೆಟ್ರೊ ಅಥವಾ ಮೊನೊ ರೈಲು ಸಂಚಾರಕ್ಕೆ ಯೋಜನೆ ರೂಪಿಸಬಹುದು. ನಗರದ ಭವಿಷ್ಯದ ಬೆಳವಣಿಗೆಯ ದೃಷ್ಟಿಯಿಂದ ಈಗಲೇ ಯೋಜನೆ ರೂಪಿಸಲಾಗುತ್ತಿದೆ ಎಂದು ಪ್ರತಾಪ್ ಸಿಂಹ ತಿಳಿಸಿದರು.

ಈಗಾಗಲೇ ಗುಜರಾತ್‌ನ ಸೂರತ್ ಹಾಗೂ ಹೈದರಾಬಾದ್‌ನಲ್ಲಿ ಇದೇ ಮಾದರಿಯಲ್ಲಿ ಹೆದ್ದಾರಿ ನಿರ್ಮಾಣ ಮಾಡಲಾಗಿದೆ. ಮೈಸೂರಿನ ಉದ್ದೇಶಿತ ಪೆರಿಫೆರಲ್ ರಿಂಗ್ ರಸ್ತೆಯನ್ನು ಅದೇ ಮಾದರಿಯಲ್ಲಿ ನಿರ್ಮಾಣ ಮಾಡಲಾಗುವುದು ಎಂದು ಪ್ರತಾಪ್‌ಸಿಂಹ ಹೇಳಿದರು.

ನಾಳೆ ನವಜಾತ ಶಿಶುಗಳ ಕೃತಕ ಉಸಿರಾಟ ಕುರಿತು ಕಾರ್ಯಾಗಾರ

ಮೈಸೂರು, ಆ. 25– ಬೆಂಗಳೂರು ಓವಮ್ ಆಸ್ಪತ್ರೆ ಮತ್ತು ಇಂಡಿಯನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್ ಸಹಯೋಗದೊಂದಿಗೆ ಮೈಸೂರಿನ ಸಿಗ್ಮಾ ಆಸ್ಪತ್ರೆಯಲ್ಲಿ ಆ. 27 ರಂದು ಬೆಳಗ್ಗೆ 8.30 ರಿಂದ ಸಂಜೆ 4.30 ರವರೆಗೆ ನವಜಾತ ಶಿಶುಗಳ ಕೃತಕ ಉಸಿರಾಟ ಕುರಿತು ಕಾರ್ಯಾಗಾರ ಆಯೋಜಿಸಲಾಗಿದೆ.

ಶಿಶುವೈದ್ಯರು, ನವಜಾತ ಶಾಸ್ತ್ರಜ್ಞರು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ನವಜಾತಶಾಸ್ತ್ರ ತರಬೇತಿಯನ್ನು ನವೀಕರಿಸುವ ನಿಟ್ಟಿನಲ್ಲಿ ಈ ಕ್ಷೇತ್ರದ ಹಿರಿಯ ಪರಿಣಿತರ ಪ್ರಯತ್ನವಾಗಿದೆ. ಕಾರ್ಯಕ್ರಮಕ್ಕೆ 40 ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ. ಹೆಚ್ಚಿನ ಮಾಹಿತಿಗೆ ಡಾ. ರಾಜೇಶ್ವರಿ ಮಾದಪ್ಪ, ನಿರ್ದೇಶಕರು, ಸಿಗ್ಮಾ ಆಸ್ಪತ್ರೆ, ಮೊ. 9845600050 ಮೂಲಕ ಸಂಪರ್ಕಿಸಬಹುದು.



ಮೈಸೂರಿನ ರಾಮಕೃಷ್ಣನಗರದಲ್ಲಿರುವ ಸ್ವರಾಲಯ ಸಂಗೀತ ಸಂಸ್ಥೆ ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಸಹಯೋಗದೊಂದಿಗೆ ಇತ್ತೀಚೆಗೆ ರಮಾಗೋವಿಂದ ರಂಗಮಂದಿರದಲ್ಲಿ 'ಸ್ವರಾಲಯ ಸಾಂಸ್ಕೃತಿಕ ಹಬ್ಬ–2023 (ಭಾಗ–2) ಹಮ್ಮಿಕೊಳ್ಳಲಾಗಿತ್ತು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶಾಸ್ತ್ರೀಯ ಸಂಗೀತ ದ್ವಂದ್ವ ಗಾಯನವನ್ನು ಕು. ಅಖಿಲ ಜಿ ಹಾಗೂ ಕು.ವಿಭುದ ಆರ್. ನಡೆಸಿಕೊಟ್ಟರು. ಪಕ್ಕವಾದ್ಯದಲ್ಲಿ ವಯೋಲಿನ್‌ನಲ್ಲಿ ವಿದ್ವಾನ್ ಎಂ.ಆರ್.ಶ್ರೀಕಾಂತ್ ಹಾಗೂ ಮೃದಂಗದಲ್ಲಿ ವಿದ್ವಾನ್ ಎಂ.ಆರ್.ಉದಯಕುಮಾರ್ ಸಹಕಾರ ನೀಡಿದರು.

'ಅಧಿನಾಯಕಿ' ನಾಟಕ ಪ್ರದರ್ಶನ

ಮೈಸೂರು, ಆ. 25– ಮೈಸೂರಿನ ಚಾರು ಸಾಂಸ್ಕೃತಿಕ ಪ್ರತಿಷ್ಠಾನದ ವತಿಯಿಂದ ಆ.27 ರಂದು ಸಂಜೆ 6.30ಕ್ಕೆ ರಾಮಕೃಷ್ಣನಗರದಲ್ಲಿರುವ ರಮಾಗೋವಿಂದ ರಂಗಮಂದಿರದಲ್ಲಿ ಬೆಂಗಳೂರಿನ ಅದಮ್ಯ ರಂಗ ತಂಡದ ಕಲಾವಿದರು 'ಅಧಿನಾಯಕಿ' ನಾಟಕ ಪ್ರದರ್ಶಿಸಲಿದ್ದಾರೆ. ನಾಟಕದ ರಚನೆ, ವಿನ್ಯಾಸ ಮತ್ತು ನಿರ್ದೇಶನ ಡಾ. ಬೇಲೂರು ರಘುನಂದನ್ ಅವರದು. ಬಿ.ಎಸ್. ವೈಷ್ಣವ ರಾವ್ ಗಾಯನದೊಂದಿಗೆ ಸಂಗೀತ ನಿರ್ದೇಶನ ಮಾಡಿದ್ದಾರೆ. ಬೆಳಕಿನ ವಿನ್ಯಾಸ ರವಿಶಂಕರ್ ಅವರದಾಗಿದೆ.



ಮೈಸೂರಿನ ಎನ್.ಆರ್. ಮೊಹಲ್ಲಾದ ಮೆಸ್ಕೋ ಶಿಕ್ಷಣ ಸಂಸ್ಥೆಯಲ್ಲಿ ಕ್ಲಸ್ಟರ್ ವಲಯ ಮಟ್ಟದ ವಿವಿಧ ಸ್ಪರ್ಧೆ ನಡೆಯಿತು. ಮೆಸ್ಕೋ ಶಿಕ್ಷಣ ಸಂಸ್ಥೆಯ ವಿದ್ಯಾರ್ಥಿಗಳು 18 ಸ್ಪರ್ಧೆಗಳಲ್ಲಿ ಭಾಗವಹಿಸಿ ಟ್ರೋಫಿ ಪಡೆದುಕೊಂಡಿದ್ದಾರೆ. ಈ ವೇಳೆ ಮೆಸ್ಕೋ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯ ಕಲೀಂ ಅಹಮದ್, ಕಾರ್ಯದರ್ಶಿ ಪ್ರೊ. ಶಬ್ಬೀರ್ ಅಹಮದ್ ಮತ್ತಿತರರು ಹಾಜರಿದ್ದರು.

ಕಳ್ಳತನ, ದರೋಡೆ ನಿಯಂತ್ರಣಕ್ಕೆ ಮತ್ತಷ್ಟು ಕಠಿಣ ಕ್ರಮ ಕೈಗೊಳ್ಳುತ್ತೇವೆ

ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್ ದೃಢ ವಿಶ್ವಾಸ



ಮೈಸೂರು, ಆ. 25– ಕಾನೂನು ಮತ್ತು ಸುವ್ಯವಸ್ಥೆ ಪಾಲನೆ ಕುರಿತು ಮೈಸೂರಿನ ಜೆಎಸ್‌ಎಸ್ ರೇಡಿಯೋ 91.2 ಎಫ್.ಎಂ. ಕೇಂದ್ರವು ಆಯೋಜಿಸಿದ್ದ ನೇರ ಸಂದರ್ಶನ ಫೋನ್–ಇನ್ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಮೈಸೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸೀಮಾ ಲಾಟ್ಕರ್, ಪೊಲೀಸ್ ಇಲಾಖೆಯ ಸೇವೆಗಳು, ಎಫ್.ಐ.ಆರ್. ದಾಖಲಿಸುವ ನಿಯಮಗಳು, ಕಾನೂನು–ಸುವ್ಯವಸ್ಥೆ ನಿರ್ವಹಣೆಯಲ್ಲಿ ಇಲಾಖೆ ಮತ್ತು ಸಾರ್ವಜನಿಕರ ಪಾತ್ರ ತಮ್ಮ ಪೊಲೀಸ್ ಇಲಾಖೆಯ ಕಾರ್ಯಚಟುವಟಿಕೆಗಳ ಕುರಿತು ಕೇಳುಗರ ಪ್ರಶ್ನೆಗಳಿಗೆ ಉತ್ತರಿಸಿದರು.

ದರೋಡೆಕೋರರಿಗೆ ಕಡಿವಾಣ ಹಾಕಿ: ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕಿನ ವ್ಯಾಪ್ತಿಯಲ್ಲಿ ಇತ್ತೀಚೆಗೆ ಹೆಚ್ಚು ಕಳ್ಳತನ ಪ್ರಕರಣಗಳು ವರದಿಯಾಗುತ್ತಿದ್ದು, ಇದರ ನಿಯಂತ್ರಣಕ್ಕೆ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಕರೆ ಮಾಡಿ ಮನವಿ ಮಾಡಿದರು.

ಮಕ್ಕಳು ವಾಹನ ಚಲಾಯಿಸುವುದನ್ನು ನಿಯಂತ್ರಿಸಿ: ಅಪ್ರಾಪ್ತರು ವಾಹನ ಚಲಾಯಿಸುವುದರಿಂದ ಹಾಗೂ ವ್ಹೀಲಿಂಗ್ ಕ್ರೇಜ್‌ನಿಂದ ಸಂಭವಿಸುತ್ತಿರುವ ದುರ್ಘಟನೆಗಳ ಬಗ್ಗೆ ಆತಂಕ ವ್ಯಕ್ತಪಡಿಸಿದ ಸಾರ್ವಜನಿಕರು ಇದನ್ನು ನಿಯಂತ್ರಿಸುವ ಕುರಿತು ಕ್ರಮ ಕೈಗೊಳ್ಳಲು ಹಾಗೂ ಸುರಕ್ಷಿತ ವಾಹನ ಚಾಲನೆಗೆ ಶಾಲಾ–ಕಾಲೇಜುಗಳಲ್ಲಿ ಜಾಗೃತಿ ಮೂಡಿಸಲು ಹಲವರು ಕರೆಮಾಡಿ ಸಲಹೆ ನೀಡಿದರು.

ಹೆಚ್.ಡಿ.ಕೋಟೆ ಮತ್ತು ಸರಗೂರು ತಾಲೂಕು ವ್ಯಾಪ್ತಿಯ ಹಳ್ಳಿಗಳು ಮತ್ತು ಹಾಡಿಗಳಲ್ಲಿ ಅಕ್ರಮ ಮದ್ಯ ಮಾರಾಟ ಹೆಚ್ಚಾಗಿದ್ದು, ಇದರಿಂದ ಬಡಕುಟುಂಬಗಳು ಬೀದಿಗೆ ಬರುತ್ತಿವೆ. ಹಾಗಾಗಿ ಇದನ್ನು ನಿಯಂತ್ರಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಾರ್ವಜನಿಕರು ಮನವಿ ಮಾಡಿದರು.

ಕಾರ್ಯಕ್ರಮದಲ್ಲಿ, ಅನೈತಿಕ ಲೈಂಗಿಕ ಚಟುವಟಿಕೆಗಳು, ಕ್ಯೂ.ಆರ್.ಕೋಡ್, ಸೈಬರ್ ಕ್ರೈಮ್, ಕೌಟುಂಬಿಕ ದೌರ್ಜನ್ಯ, ಸಂಚಾರಿ ನಿಯಮ, ಅಕ್ರಮ ಮದ್ಯ ಮಾರಾಟ ಹಾಗೂ ಸುಳ್ಳು ದೂರು ದಾಖಲು ಒಳಗೊಂಡಂತೆ ಹಲವು ಕರೆಗಳಿಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಪ್ರತಿಕ್ರಿಯಿಸಿ, ಈ ಸಮಸ್ಯೆಗಳಿಗೆ ಪೂರಕ ಕ್ರಮ ಕೈಗೊಳ್ಳುವುದಾಗಿ ಸಾರ್ವಜನಿಕರಿಗೆ ಭರವಸೆ ನೀಡಿದರು. ಕೆ.ಆರ್.ನಗರದಿಂದ ಹರೀಶ್, ಮೈಸೂರಿನಿಂದ ಸುರೇಶ್, ರಾಮಚಂದ್ರ, ನಂಜನಗೂಡಿನಿಂದ ಯೋಗೇಂದ್ರಪ್ರಸಾದ್, ಟಿ.ನರಸಿಪುರದಿಂದ ಎಸ್. ಮಹದೇವಶೆಟ್ಟರು, ಹೆಚ್.ಡಿ.ಕೋಟೆ ತಾಲೂಕಿನಿಂದ ಜಯಶೀಲ, ಶಿವರಾಜು, ಸರಗೂರು ತಾಲೂಕಿನಿಂದ ವರದನಾಯಕ, ಚಿನ್ನಸ್ವಾಮಿ ಹಾಗೂ ಇತರರು ಕರೆಮಾಡಿ ತಮ್ಮ ಪೊಲೀಸ್ ಠಾಣೆಯ ವ್ಯಾಪ್ತಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಹಂಚಿಕೊಂಡರು. ಕಾರ್ಯಕ್ರಮವನ್ನು ಸಂಯೋಜಕ ಶಿವಕುಮಾರ್ ನಡೆಸಿಕೊಟ್ಟರು. ಜೆಎಸ್‌ಎಸ್ ರೇಡಿಯೋ ಕೇಂದ್ರದ ಕಾರ್ಯಕ್ರಮ ನಿರ್ವಾಣ ಸಹಾಯಕ ರಮೇಶ್ ಹಾಜರಿದ್ದರು.


ನಿಧನ



ಡಾ.ಬಿ.ರಮಾನಂದ ಕುಮಾರ್

ಮೈಸೂರು, ಆ. 25– ಮೈಸೂರಿನ ವಿ.ವಿ.ಪುರಂ ನಿವಾಸಿ ಹಾಗೂ ಚರ್ಮರೋಗ ತಜ್ಞರಾದ ಡಾ.ಬಿ.ರಮಾನಂದ ಕುಮಾರ್ (79) ಗುರುವಾರ ನಿಧನರಾದರು. ಶ್ರೀಯುತರು ಕೊಳ್ಳೇಗಾಲ ಮತ್ತು ಕೊಡಗು ಜಿಲ್ಲೆಯ ಸರ್ಕಾರಿ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸಿದ್ದರು. ಅಲ್ಲದೆ ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟಿಸ್ (ಪಿಯುಸಿಎಲ್)ನ ಸದಸ್ಯರಾಗಿದ್ದರು. ಅವಿವಾಹಿತರಾದ ಇವರು ಇಬ್ಬರು ಸಹೋದರಿಯರು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿ ಧಾಮದಲ್ಲಿ ಗುರುವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪ್ರೊ. ತಿಬ್ಬಣ್ಣ ಶಂಕರ್



ಮೈಸೂರಿನ ಮಹಾರಾಣಿ ಕಲಾ ಕಾಲೇಜಿನ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕರು ಹಾಗೂ ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಶಂಕರಾನಂದ ರೈಸ್‌ಮಿಲ್ ಮಾಲೀಕರಾದ ಪ್ರೊ. ತಿಬ್ಬಣ್ಣ ಶಂಕರ್ (ಟೈಗರ್ ಶಂಕರ್) ಆ. 23 ರಂದು ನಿಧನರಾದರು. ಅವರಿಗೆ 85 ವರ್ಷ ವಯಸ್ಸಾಗಿತ್ತು. ಗೋಕುಲಂ ನಿವಾಸಿಯಾದ ಇವರು ಪತ್ನಿ, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಶುಕ್ರವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೇಟಗಳ್ಳಿ ಅಂಚೆ ಕಚೇರಿಯಲ್ಲಿ 3ನೇ ಪಾಸ್‌ಪೋರ್ಟ್ ಸೇವಾ ಕೇಂದ್ರ; ಸಂಸದ ಪ್ರತಾಪ್‌ಸಿಂಹ ಉದ್ಘಾಟನೆ

ಪತ್ರಕರ್ತರಿಗೆ ಪಾಸ್‌ಪೋರ್ಟ್ ಮೇಳಕ್ಕೂ ಚಾಲನೆ

ಮೈಸೂರು, ಆ. 25 (ಆರ್‌ಕೆ)– ಮೈಸೂರಿನ ಮೇಟಗಳ್ಳಿ ಅಂಚೆ ಕಚೇರಿಯಲ್ಲಿ ಇಂದು 3ನೇ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಸಂಸದ ಪ್ರತಾಪ್ ಸಿಂಹ ಉದ್ಘಾಟಿಸಿದರು. ಇದೇ ವೇಳೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘ, ಪಾಸ್‌ಪೋರ್ಟ್ ಸೇವಾ ಕೇಂದ್ರದ ಸಹಯೋಗದಲ್ಲಿ ಪತ್ರಕರ್ತರು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ಆಯೋಜಿಸಿದ್ದ ಪಾಸ್‌ಪೋರ್ಟ್ ಮೇಳಕ್ಕೆ ಅವರು ಚಾಲನೆ ನೀಡಿದರು.

ಈ ಸಂದರ್ಭ ಮಾತನಾಡಿದ ಪ್ರತಾಪ್ ಸಿಂಹ ಅವರು, 2016ರ ಡಿಸೆಂಬರ್ 23 ರಂದು ಪ್ರಥಮ ಬಾರಿ ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ ಮೇಟಗಳ್ಳಿ ಅಂಚೆ ಕಚೇರಿಯಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಸ್ಥಾಪಿಸಲಾಯಿತಾದರೂ, 2017 ರಿಂದ ಪಾಸ್‌ಪೋರ್ಟ್ ನೋಂದಣಿ ಕಾರ್ಯ ಆರಂಭಗೊಂಡಿತು ಎಂದರು.

ಮೊದಲು ಒಂದೇ ಕೇಂದ್ರದಲ್ಲಿ ಪಾಸ್‌ಪೋರ್ಟ್ ಅರ್ಜಿ ಸ್ವೀಕರಿಸಿ, ಪ್ರಕ್ರಿಯೆ ನಡೆಯುತ್ತಿತ್ತು. ಬೇಡಿಕೆ ಜಾಸ್ತಿಯಾದ ಹಿನ್ನೆಲೆಯಲ್ಲಿ ಎರಡನೇ ಕೇಂದ್ರವನ್ನು ಆರಂಭಿಸಲಾಗಿತ್ತು. ಇದೀಗ ವಿದೇಶಕ್ಕೆ ತೆರಳಬಯಸುವವರ ಸಂಖ್ಯೆ ಹೆಚ್ಚಾದ ಕಾರಣ ಬೇಡಿಕೆಗೆ ಅನುಗುಣವಾಗಿ ಮತ್ತೊಂದು ಕೇಂದ್ರ ಸ್ಥಾಪಿಸಬೇಕೆಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಅವರು ಸಲಹೆ ನೀಡಿದ್ದರಿಂದಾಗಿ ಈಗ 3ನೇ ಕೇಂದ್ರ ಆರಂಭಿಸಿರುವುದಾಗಿಯೂ ತಿಳಿಸಿದರು.



ಮೈಸೂರಿನ ಮೇಟಗಳ್ಳಿ ಅಂಚೆ ಕಚೇರಿಯಲ್ಲಿ ಶುಕ್ರವಾರ ಆರಂಭವಾದ 3ನೇ ಪಾಸ್‌ಪೋರ್ಟ್ ಸೇವಾ ಕೇಂದ್ರದಲ್ಲಿ ಪತ್ರಕರ್ತರ ಪಾಸ್‌ಪೋರ್ಟ್ ಮೇಳಕ್ಕೆ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಪಾಲಿಕೆ ಸದಸ್ಯರಾದ ಎನ್.ಯು. ಸುಬ್ಬಯ್ಯ, ರವೀಂದ್ರ ಇತರರನ್ನು ಕಾಣಬಹುದು.

ಮೈಸೂರು ಕೇಂದ್ರದಲ್ಲಿ ಒಟ್ಟು 53,382 ಪಾಸ್‌ಪೋರ್ಟ್ ಅರ್ಜಿ ಪ್ರಕ್ರಿಯೆ ಪೂರ್ಣಗೊಳಿಸಲಾಗಿದೆ. ಈ ಹಿಂದೆ ಪಾಸ್‌ಪೋರ್ಟ್ ಪಡೆಯಬೇಕೆಂದರೆ, ಬೆಂಗಳೂರಿಗೆ ಹೋಗಿ ಮುಂಜಾನೆಯಿಂದಲೇ ಸಾಲುಗಟ್ಟಿ ನಿಂತು ಕಾಯಬೇಕಿತ್ತು. ಜನರು ಎದುರಿಸುತ್ತಿದ್ದ ಸಮಸ್ಯೆಗೆ ಪರಿಹಾರ ಕಲ್ಪಿಸಲು ತಾವು ಮಾಡಿದ ಪ್ರಯತ್ನದಿಂದಾಗಿ ಇಂದು ಮೈಸೂರು, ಕೊಡಗು, ಮಂಡ್ಯ, ಹಾಸನ ಜನರಿಗೆ ಮೈಸೂರಿನ ಪಾಸ್‌ಪೋರ್ಟ್ ಕೇಂದ್ರ ಸಹಕಾರಿಯಾಗಿದೆ ಎಂದರು.

ಹೊಸ ಕಟ್ಟಡಕ್ಕೆ ಸ್ಥಳಾಂತರ: ಮೇಟಗಳ್ಳಿ ಅಂಚೆ ಕಚೇರಿಯಲ್ಲಿ ಸ್ಥಳಾಭಾವವಿರುವುದರಿಂದ ಇಟ್ಟಿಗೆಗೂಡಿನಲ್ಲಿ ಮೃಗಾಲಯದ ಬಳಿ ಮುಡಾ ನಿರ್ಮಿಸಿರುವ ಹೊಸ ಕಟ್ಟಡಕ್ಕೆ ಪಾಸ್‌ಪೋರ್ಟ್ ಸೇವಾ ಕೇಂದ್ರವನ್ನು ಸ್ಥಳಾಂತರಿಸಲು ಉದ್ದೇಶಿಸಿದ್ದು, ಪ್ರಕ್ರಿಯೆ ಪೂರ್ಣಗೊಳಿಸಿದ ಬಳಿಕ ಶೀಘ್ರ ವಿಶಾಲ ಕಟ್ಟಡದಲ್ಲಿ ಪಾಸ್‌ಪೋರ್ಟ್ ಸೇವಾ ಕೇಂದ್ರ ಆರಂಭವಾಗಲಿದೆ. ಪೋಸ್ಟ್ ಆಫೀಸ್ ಸಿಬ್ಬಂದಿಗಳನ್ನೇ ಈ ಸೇವೆಗೆ ಬಳಸಿಕೊಳ್ಳಬೇಕಾಗಿರುವುದರಿಂದ ಇಲಾಖೆ ಅನುಮತಿ ಪಡೆದು ಹೊಸ ಕಟ್ಟಡಕ್ಕೆ ಕೇಂದ್ರ ಸ್ಥಳಾಂತರಿಸಲಾಗುವುದು ಎಂದು ಪ್ರತಾಪ್ ಸಿಂಹ ತಿಳಿಸಿದರು.

ಮೈಸೂರು ನಗರ ಮತ್ತು ಜಿಲ್ಲೆಯ ಪತ್ರಕರ್ತರು ಹಾಗೂ ಕುಟುಂಬದ ಸದಸ್ಯರಿಗಾಗಿ ಪಾಸ್‌ಪೋರ್ಟ್ ಮೇಳವನ್ನೂ ಆರಂಭಿಸಲಾಗಿದ್ದು, ಅಗತ್ಯ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದಲ್ಲಿ ಕೇವಲ ಒಂದು ವಾರದಲ್ಲಿ ಪಾಸ್‌ಪೋರ್ಟ್ ಪಡೆಯಲು ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ಅವರು ಇದೇ ವೇಳೆ ನುಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಎಂ. ಸುಬ್ರಹ್ಮಣ್ಯ, ಉಪಾಧ್ಯಕ್ಷ ಎಂ.ಎಸ್. ಬಸವಣ್ಣ, ಕಾರ್ಯಕಾರಿ ಸಮಿತಿ ಸದಸ್ಯರಾದ ಸುರೇಶ್, ಬೀರೇಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಬಿ. ರಾಘವೇಂದ್ರ, ಪಾಲಿಕೆ ಸದಸ್ಯರಾದ ಎನ್.ಯು. ಸುಬ್ಬಯ್ಯ, ರವೀಂದ್ರ, ಪಾಸ್‌ಪೋರ್ಟ್ ಸಹಾಯಕರಾದ ದರ್ಶನ್, ವಿನಯ್, ಸೂರ್ಯಪ್ರಕಾಶ್, ಪಾಸ್‌ಪೋರ್ಟ್ ಪರಿಶೀಲನಾ ಅಧಿಕಾರಿ ಎನ್. ಮೋಹನ್, ನಗರ ಬಿಜೆಪಿ ಯೂತ್ ಕಮಿಟಿ ಅಧ್ಯಕ್ಷ ಕಿರಣ್‌ಗೌಡ, ಮುಖಂಡರಾದ ದೇವರಾಜ್, ಅಪ್ಪಾಜಿಗೌಡ, ರಾಮೇಗೌಡ, ಸೋಮಶೇಖರರಾಜ್ ಹಾಗೂ ಇತರರು ಈ ಸಂದರ್ಭ ಉಪಸ್ಥಿತರಿದ್ದರು.

ಸಾರ್ವಜನಿಕ ಸ್ಥಳದಲ್ಲಿ ಡ್ರಗ್ ಸೇವನೆ; ಇಬ್ಬರ ಬಂಧನ

ಮೈಸೂರು, ಆ. 25– ಎಂಡಿಎಂಎ ಮಾದಕ ವಸ್ತು ಸೇವಿಸುತ್ತಿದ್ದ ಕೇರಳ ಮೂಲದ ಇಬ್ಬರನ್ನು ಮೈಸೂರು ನಗರ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಣ್ಣೂರು ಜಿಲ್ಲೆಯ ಶಾಹಿದ್(33) ಮತ್ತು ಫೈಸಲ್(44) ಬಂಧಿತರಾಗಿದ್ದು, ಸೆನ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಎಂ.ಎಲ್. ಸಿದ್ದೇಶ್ ಅವರು ಸಿಬ್ಬಂದಿಯೊಂದಿಗೆ ಆಗಸ್ಟ್ 23ರಂದು ಬೆಳಗ್ಗೆ 11.30ರಲ್ಲಿ ಗಸ್ತು ತಿರುಗುತ್ತಿದ್ದಾಗ ಇವರಿಬ್ಬರು ಬೆಂಗಳೂರು–ನೀಲಗಿರಿ ರಸ್ತೆಯಲ್ಲಿರುವ ಸಹಾಯಕ ತೋಟಗಾರಿಕೆ ನಿರ್ದೇಶಕರ ಕಚೇರಿ ಮುಂಭಾಗ ಫುಟ್‌ಪಾತ್‌ನಲ್ಲಿ ಕುಳಿತು ಎಂಡಿಎಂಎ ಮಾದಕ ವಸ್ತು ಸೇವಿಸುತ್ತಿರುವುದು ಕಂಡು ಬಂದಿದೆ. ಇವರಿಬ್ಬರನ್ನೂ ಬಂಧಿಸಿರುವ ಸೆನ್ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ನ್ಯಾಯಯುತ ಕೆಲಸಕ್ಕೆ ಕಾನೂನು ತೊಡಕು; ಮೈಸೂರು ಏರ್‌ಪೋರ್ಟ್‌ನಲ್ಲಿ ಚಿರತೆ ಕಾಟ: ಬ್ರ್ಯಾಂಡೇಡ್ ವಸ್ತುಗಳಿಗೆ ಶಾಪ್

ಮೈಸೂರು ವಿಮಾನ ನಿಲ್ದಾಣ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾಪವಾದ ಇನ್ನಿತರೆ ವಿಷಯಗಳು

ಮೈಸೂರು, ಆ.25(ಬಿಎಲ್‌ಯು)– ನ್ಯಾಯಯುತವಾಗಿ ಮಾಡುವ ಜನಪರ ಕೆಲಸ ಕಾರ್ಯಗಳಿಗೆ ಕಾನೂನು ತೊಡಕುಗಳು ಎದುರಾಗುತ್ತಲೇ ಇವೆ ಎಂದು ಸ್ವತಃ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅಸಮಾಧಾನ ವ್ಯಕ್ತಪಡಿಸಿದರು.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಇಂದು ನಡೆದ ಸಲಹಾ ಸಮಿತಿ ಸಭೆಯಲ್ಲಿ ಮಾತನಾಡಿದ ಕೆಲವು ಅಧಿಕಾರಿಗಳು ಕೆಲಸ ಮಾಡಲು ಕಾನೂನಿನ ಅಡ್ಡಿ ಬಗ್ಗೆ ವಿವರ ನೀಡಿದರು.

ಈ ಸಂದರ್ಭದಲ್ಲಿ ನಮ್ಮಲ್ಲಿ ಎಂತಹ ಪರಿಸ್ಥಿತಿ ಇದೆ ಅಂದರೆ, ನ್ಯಾಯಯುತವಾಗಿ ಮಾಡುವ ಜನಪರ ಕೆಲಸಗಳಿಗೆ ಕಾನೂನು ಸಮ್ಮತಿಸದು ಅಂತಾರೆ. ಅದೇ ಕಾನೂನು ವಿರೋಧಿ ಕೆಲಸಗಳಿಗೆ ಇದ್ಯಾವುದೇ ಅಡ್ಡಿ ಬರುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಮೈಸೂರು ಬ್ರ್ಯಾಂಡ್ ಪರಿಚಯ: ಮೈಸೂರಿನ ಬ್ರ್ಯಾಂಡೆಡ್ ವಸ್ತುಗಳನ್ನು ದೇಶ–ವಿದೇಶದಿಂದ ಬರುವ ಪ್ರವಾಸಿಗರಿಗೆ ಪರಿಚಯಿಸಲು ಅನುಕೂಲವಾಗುವಂತೆ ಏರ್‌ಪೋರ್ಟ್ ಒಳಗೆ ಶಾಪ್ ತೆರೆಯಬೇಕು. ಜೊತೆಗೆ ಮೈಸೂರಿನ ಪ್ರವಾಸಿ ತಾಣಗಳ ಬಗ್ಗೆ ಮಾಹಿತಿ ನೀಡುವ ಕೇಂದ್ರವನ್ನೂ ತೆರೆಯುವಂತೆ ಸಲಹೆ ನೀಡಿದರು.

ಚಿರತೆ ಹಾವಳಿ: ಮೈಸೂರು ವಿಮಾನ ನಿಲ್ದಾಣದ ಒಳಗೆ ಹಾಗೂ ಸಿಬ್ಬಂದಿಗಳ ವಸತಿ ಗೃಹಗಳ ಬಳಿ ಚಿರತೆಗಳು ಓಡಾಡುತ್ತಿವೆ. ಇದರಿಂದ ಭಯದ ವಾತಾವರಣ ನಿರ್ಮಾಣವಾಗಿದೆ. ಏನು ಮಾಡುವುದೋ ತಿಳಿಯುತ್ತಿಲ್ಲ ಎಂದು ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕ ಜೆ.ಆರ್.ಅನೂಪ್ ಅಸಹಾಯಕತೆ ವ್ಯಕ್ತಪಡಿಸಿದರು.

ಹೆಚ್ಚಿನ ವಿಮಾನ ಸೌಕರ್ಯ: ಮೈಸೂರಿನಿಂದ ಗೋವಾಗೆ ಹೋಗಲು ವಾರದಲ್ಲಿ ಮೂರು ದಿನಗಳು ಮಾತ್ರ ವಿಮಾನ ಹಾರಾಟವಿದೆ. ಆದರೆ ಈಗಿರುವ ಬೇಡಿಕೆಗೆ ಇನ್ನು ಹೆಚ್ಚಿನ ವಿಮಾನಗಳ ಅವಶ್ಯಕತೆ ಇದೆ. ಮುಂಬೈ, ತಿರುಪತಿಗೆ ಕೂಡ ಬೇಡಿಕೆ ಇರುವ ಕಾರಣ ಅಲ್ಲಿಗೂ ವಿಮಾನ ಹಾರಾಟದ ವ್ಯವಸ್ಥೆ ಮಾಡಬೇಕು ಎಂದು ಪ್ರಶಾಂತ್ ಹಾಗೂ ನಾರಾಯಣ ಗೌಡ ಏರ್ ಪೋರ್ಟ್ ಅಥಾರಿಟಿ ಆಫ್ ಇಂಡಿಯಾದ ಅಧಿಕಾರಿಗಳಿಗೆ ಮನವಿ ಮಾಡಿದರು. ಜೆಟ್ ಏರ್ ವೇಸ್ ಹಾಗೂ ಗೋ ಏರ್ ಈಗಾಗಲೇ ವಿಮಾನ ಹಾರಾಟ ನಿಲ್ಲಿಸಿವೆ. ಇಂಡಿಗೋ ವಿಮಾನಗಳು ಮಾತ್ರ ಹಾರಾಟ ನಡೆಸುತ್ತಿವೆ. ಆದರೆ ಇಂಡಿಗೋದಲ್ಲಿ ಏರ್ ಬಸ್ ಹಾಗೂ ಬೋಯಿಂಗ್ ವಿಮಾನಗಳು ಇದೆ. ಆದರೆ ಭಾರೀ ವಿಮಾನಗಳ ಹಾರಾಟಕ್ಕೆ ಮೈಸೂರಿನಲ್ಲಿ ರನ್ ವೇ ವಿಸ್ತರಣೆ ಇಲ್ಲದ ಕಾರಣ ಇಂಡಿಗೋ ವಿಮಾನಗಳ ಹಾರಾಟ ಸಾಧ್ಯವಾಗುತ್ತಿಲ್ಲ ಎಂದು ಸಂಸದ ಪ್ರತಾಪ್ ಸಿಂಹ ತಿಳಿಸಿದರು.

ರನ್ ವೇ ವಿಸ್ತರಣೆಯಾದರೆ ಭಾರೀ ಪ್ರಮಾಣದ ವಿಮಾನಗಳ ಹಾರಾಟಕ್ಕೆ ಅವಕಾಶ ಕಲ್ಪಿಸಬಹುದು ಎಂದು ಇದೇ ವೇಳೆ ಇಂಡಿಗೋ ವಿಮಾನ ಕಂಪನಿಯ ಪ್ರತಿನಿಧಿಯೊಬ್ಬರು ಮಾಹಿತಿ ನೀಡಿದರು.


ಅಂತರ ಕಾಲೇಜು ಕ್ರೀಡಾಕೂಟ

ಮೈಸೂರು, ಆ.25– 2023–24ನೇ ಸಾಲಿನ ರಾಷ್ಟ್ರೀಯ ಕ್ರೀಡಾ ದಿನ ಹಾಕಿ ಮಾಂತ್ರಿಕ ಮೇಜರ್ ಧ್ಯಾನ್ ಚಂದ್ ಅವರ ಜನ್ಮ ದಿನಾಚರಣೆ ಅಂಗವಾಗಿ ಮೈಸೂರು ನಗರ ಪುರುಷ ಮತ್ತು ಮಹಿಳೆಯರ ಅಂತರ ಕಾಲೇಜುಗಳ ಕ್ರೀಡಾಕೂಟ ಹಾಕಿ (ಪೆನಾಲ್ಟಿ ಶೂಟ್ ಔಟ್) ಬ್ಯಾಸ್ಕೆಟ್ ಬಾಲ್ ಹಾಗೂ ಟಗ್ ಆಫ್ ವಾರ್ ಕ್ರೀಡಾಕೂಟಗಳನ್ನು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಆಗಸ್ಟ್ 29ರಂದು ಹಮ್ಮಿಕೊಳ್ಳಲಾಗಿದೆ.

ಆಸಕ್ತ ಕಾಲೇಜಿನ ಕ್ರೀಡಾಪಟುಗಳು ಕಾಲೇಜಿನ ದೃಢೀಕರಣದೊಂದಿಗೆ ಪಾಲ್ಗೊಳ್ಳಬಹುದು. ಆಗಸ್ಟ್ 29 ರಂದು ಚಾಮುಂಡಿ ವಿಹಾರ ಕ್ರೀಡಾಂಗಣದಲ್ಲಿ ಬೆಳಗ್ಗೆ 9:30ಕ್ಕೆ ವರದಿ ಮಾಡಿಕೊಂಡು ಕಾರ್ಯಕ್ರಮದಲ್ಲಿ ಭಾಗವಹಿಸುವುದು.

ಹಾಕಿ ತಂಡದ ತರಬೇತುದಾರರಾದ ಸುಂದರೇಶ್ ಮೊ:9844487796, ಗಿರೀಶ್ ಮೊ:9964411709, ರಾಮಸ್ವಾಮಿ ಮೊ:9449300330 ಇವರನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ತಿಳಿಸಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

26.8.2023 ಶನಿವಾರ, ಮಳೆ ನಕ್ಷತ್ರ: ಮಖ 17.08.2023 ರಿಂದ 30.08.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ದಕ್ಷಿಣಾಯಣ, ವರ್ಷ ಋತು, ಶ್ರಾವಣ ಮಾಸ, ಶುಕ್ಲ ಪಕ್ಷ, ತಿಥಿ: ದಶಮಿ, ನಕ್ಷತ್ರ: ಮೂಲ, ರಾಹುಕಾಲ: ಬೆಳಗ್ಗೆ 9 ರಿಂದ 10.30ರವರೆಗೆ

■ **ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ :** ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಸ್ತ್ರ ಉತ್ಸವ–2023, ಸ್ಥಳ: ಅರ್ಬನ್ ಹಾತ್, ಹೆಬ್ಬಾಳು ಕೈಗಾರಿಕಾ ಪ್ರದೇಶ, ರಿಂಗ್ ರೋಡ್, ಬೆಳಗ್ಗೆ 10ರಿಂದ ರಾತ್ರಿ 9 ರವರೆಗೆ.

■ **ಸಹಜ ಸಮೃದ್ಧಿ ಸಂಸ್ಥೆ :** ಸಿರಿಧಾನ್ಯ ಮೇಳ, ಉದ್ಘಾಟನೆ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ರಾಗಿ ಪೋಸ್ಟರ್ ಬಿಡುಗಡೆ : ಚಲನಚಿತ್ರ ನಟಿ ಯಮುನಾ ಶ್ರೀನಿಧಿ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ಬೆಳಗ್ಗೆ 10 ರಿಂದ.

■ **ಭವಾನಿ ಅಸೋಸಿಯೇಟ್ಸ್ :** ವಕೀಲ ಮತ್ತು ಟ್ಯಾಕ್ಸ್ ಕನ್ಸಲ್ಟೆಂಟ್ ಬಿ.ಸಿ. ಭಟ್ ಅವರಿಂದ ಜಿಎಸ್‌ಟಿಯಲ್ಲಿ ತಿದ್ದುಪಡಿ ಕುರಿತು ಉಪನ್ಯಾಸ, ಸ್ಥಳ: ರೋಟರಿ ಚಿಲ್ಡ್ರನ್ಸ್ ಲೈಬ್ರರಿ–ಡಿ.ಜಿ. ಹಾಲ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10ಕ್ಕೆ.

■ **ಅಸ್ತಿತ್ವ ಸಾಂಸ್ಕೃತಿಕ ವೇದಿಕೆ :** ಡಾ. ಡಿ.ಕೆ. ರಾಜೇಂದ್ರ ಅವರ ಆತ್ಮಕಥೆ 'ನನ್ನ ಜೀವ ನನ್ನ ಭಾವ' ಕೃತಿ ಲೋಕಾರ್ಪಣೆ ಸಮಾರಂಭ, ಕೃತಿ ಬಿಡುಗಡೆ : ಬರಹಗಾರ್ತಿ ಡಾ. ಧರಣಿದೇವಿ ಮಾಲಗತ್ತಿ, ಕೃತಿ ಕುರಿತು ಮಾತನಾಡುವವರು : ಸಾಹಿತಿ ಡಾ. ಸಿ. ನಾಗಣ್ಣ, ಅಧ್ಯಕ್ಷತೆ : ವಿಶ್ರಾಂತ ಕುಲಪತಿ ಡಾ. ಪದ್ಮಾಶೇಖರ್, ಉಪಸ್ಥಿತರು : ವಿದ್ವಾಂಸ ಡಾ. ಟಿ.ವಿ.ವೆಂಕಟಾಚಲ ಶಾಸ್ತ್ರಿ, ಸಾಹಿತಿ ಡಾ. ಸಿ.ಪಿ. ಕೃಷ್ಣಕುಮಾರ್, ಲೇಖಕ ಡಾ. ಡಿ.ಕೆ. ರಾಜೇಂದ್ರ, ಸ್ಥಳ: ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣ, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ನಗರ ಹಾಗೂ ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ :** ಗೃಹಲಕ್ಷ್ಮೀ ಯೋಜನೆಯ ಪೂರ್ವಭಾವಿ ಸಭೆ, ಉಪಸ್ಥಿತರು: ಎಐಸಿಸಿ ಕಾರ್ಯದರ್ಶಿ ರೋಜಿ ಜಾನ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವರಾದ ಕೆ. ವೆಂಕಟೇಶ್, ಶ್ರೀಮತಿ ಲಕ್ಷ್ಮಿ ಹೆಬ್ಬಾಳ್ಕರ್, ಸ್ಥಳ: ಕಾಂಗ್ರೆಸ್ ಭವನ, ಮಧ್ಯಾಹ್ನ 1ಕ್ಕೆ.

■ **ಕಲಾ ಸುರುಚಿ ರಂಗಮನೆ :** ಗಾಯಕ ಅಮ್ಮ ರಾಮಚಂದ್ರ ಅವರಿಂದ ಕಥೆ ಕೇಳೋಣ ಬನ್ನಿ ಕಾರ್ಯಕ್ರಮ, ಸ್ಥಳ: ಸುರುಚಿ ರಂಗಮನೆ, ಕುವೆಂಪುನಗರ, ಸಂಜೆ 4.30ಕ್ಕೆ.

■ **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಲಕ್ಕಣ್ಣ ದಂಡೇಶ ವಿರಚಿತ ಶಿವತತ್ತ್ವ ಚಿಂತಾಮಣಿ ಕುರಿತು ಪ್ರವಚನ, ವಾಚನ : ನಿವೃತ್ತ ಕಾರ್ಯಪಾಲಕ ಅಭಿಯಂತರ ವಿದ್ವಾನ್ ಕೃ. ರಾಮಚಂದ್ರ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಇಷ್ಟನಾಥಾನಂದ ಅವರಿಂದ ಆತ್ಮಬೋಧ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸ್ವಾಮಿ ಶಾಂಭವಾನಂದಜಿ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ :** ಶಿವಾನುಭವ ದಾಸೋಹ ಮಾಲಿಕೆ 304ನೇ ಕಾರ್ಯಕ್ರಮ, ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ. ಎ.ಆರ್. ವಸಂತಕುಮಾರ್ ಅವರಿಂದ ವಚನ ಸಾಹಿತ್ಯದಲ್ಲಿ ಜನಪರ ಚಿಂತನೆಗಳು ಕುರಿತು ಉಪನ್ಯಾಸ, ಅಧ್ಯಕ್ಷತೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಸಾಮಾನ್ಯ ಅಭಿವೃದ್ಧಿ ವಿಭಾಗದ ಪ್ರಭಾರ ನಿರ್ದೇಶಕ ಕೆ.ಎಲ್. ರೇವಣ್ಣಸ್ವಾಮಿ, ಸ್ಥಳ: ರಾಜೇಂದ್ರ ಭವನ, ಸಂಜೆ 6ಕ್ಕೆ.

■ **ಸನಾತನ ಸಭಾ, ಮೈಸೂರು :** ರಾಮಾಯಣ ಪ್ರವಚನ ಮಾಲಿಕೆ ಏಳನೇ ಸರಣಿ, ವಿದ್ವಾನ್ ಗ.ನಾ. ಭಟ್ಟ ಅವರಿಂದ ಶ್ರೀ ಮದ್ವಾಲ್ಮೀಕಿ ರಾಮಾಯಣದ ಕಿಷ್ಕಿಂಧಾಕಾಂಡ ಕುರಿತು ಪ್ರವಚನ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಕೆ. ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6.30ರಿಂದ 8ರವರೆಗೆ.

■ **ವ್ಯವಸ್ಥಾಪಕರು :** ಖ್ಯಾತ ತಬಲಾ ವಾದಕ ಭೀಮಾಶಂಕರ ಬಿದನೂರ ಕು. ರೋಹಿತ್ ಕಳಲೆ ಅವರಿಂದ ಗುರು ಅಭಿವಂದನೆ ಹಾಗೂ ಹಿಂದೂಸ್ಥಾನಿ ರಾಷ್ಟ್ರೀಯ ವಾದ್ಯಗಳ ಸಂಜೆ, ಶ್ರೀ ಗುರು ಪುಟ್ಟರಾಜ ತಬಲಾ ವಿದ್ಯಾರ್ಥಿಗಳಿಂದ ತಬಲಾ ವಾದನ, ಪಂಡಿತ್ ರವಿಶಂಕರ್ ಮಿಶ್ರಾ ಅವರಿಂದ ಕೊಳಲು ವಾದನ, ಭೀಮಾಶಂಕರ ಬಿದನೂರ ಹಾಗೂ ಕು. ರೋಹಿತ್ ಕಳಲೆ ಅವರಿಂದ ತಬಲಾ ಜುಗಲ್‌ಬಂದಿ, ಪಂಡಿತ್ ವೀರಭದ್ರಯ್ಯ ಹಿರೇಮಠ ಅವರಿಂದ ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಮೃತ್ಯುಂಜಯ ಹಿರೇಮಠ ಹಾಗೂ ವಿಘ್ನೇಶ್ ಭಾಗವತ್ ಅವರಿಂದ ಹಾರ್ಮೋನಿಯಂ, ಸ್ಥಳ: ರಮಾಗೋವಿಂದ ಸಭಾಂಗಣ, ರಾಮಕೃಷ್ಣನಗರ, ಸಂಜೆ 5.30ರಿಂದ.

■ **ಮೈಸೂರು ವಿಶ್ವವಿದ್ಯಾನಿಲಯ, ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರ ಡಾ.ಅಂಬೇಡ್ಕರ್ ಪೀಠ, ಇಂಡಿಯನ್ ಪಾಲಿಟಿ ಫೋರಂ:** ಕ್ಷೇತ್ರ ಪುನರ್‌ವಿಂಗಡಣೆ: ಅಂತರರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು ಕುರಿತು ವಿಚಾರ ಸಂಕಿರಣ, ಬೆಳಗ್ಗೆ 10.30 ರಿಂದ ಎರಡನೇ ಗೋಷ್ಠಿ: ತಮಿಳುನಾಡು ಸಂಸದ ಡಾ. ಕೆ. ಜಯಕುಮಾರ್ ಅವರಿಂದ ಉಪನ್ಯಾಸ, ಅಧ್ಯಕ್ಷತೆ: ನಿವೃತ್ತ ಮೇಜರ್ ಜನರಲ್ ಡಾ.ಎಸ್.ಜಿ. ಒಂಬತ್ಕೆರೆ, ಮ.12ಕ್ಕೆ ಮೂರನೆ ಗೋಷ್ಠಿ: ಸಂಸತ್‌ನಲ್ಲಿ ಪ್ರಾತಿನಿಧ್ಯ, ಉಪಸ್ಥಿತರು: ಡಾ.ಸಂದೀಪ್ ಶಾಸ್ತ್ರಿ, ಕೆ.ಜಯಪ್ರಕಾಶ್ ಹೆಗ್ಗಡೆ, ಅಧ್ಯಕ್ಷತೆ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ವೈ. ರಫೀಕ್ ಅಹಮದ್, ಮಧ್ಯಾಹ್ನ 2ಕ್ಕೆ ನಾಲ್ಕನೇ ಗೋಷ್ಠಿ: ಹೆಚ್ಚಿನ ವಿಕೇಂದ್ರಿಕೃತ ಒಕ್ಕೂಟ ವ್ಯವಸ್ಥೆ ಅಗತ್ಯವೆ?, ಉಪಸ್ಥಿತರು:ಡಾ. ಜಿ.ಎಸ್.ಗಣೇಶ್ ಪ್ರಸಾದ್, ಡಾ. ಎ.ಆರ್. ವಾಸವಿ, ಅಧ್ಯಕ್ಷತೆ: ವಿಶ್ರಾಂತ ಪ್ರಾಧ್ಯಾಪಕ ಪ್ರೊ. ಎಂ. ಉಮಾಪತಿ, ಮ.3.45 ರಿಂದ ತಜ್ಞರ ಅಭಿಮತ, ಉಪಸ್ಥಿತರು: ಸಾಹಿತಿ ದೇವನೂರ ಮಹದೇವ, ಡಾ.ಬಿ.ಕೆ.ಚಂದ್ರಶೇಖರ್, ಪ್ರೊ. ರವಿವರ್ಮಕುಮಾರ್, ಪ್ರೊ.ಡಿ.ರಾಜಶೇಖರ್, ಪ್ರೊ ಜಾನಕಿ ನಾಯರ್, ಪ್ರೊನಾಗರಾಜು, ಪ್ರೊ.ಟಿ.ಆರ್.ಚಂದ್ರಶೇಖರ್, ಡಾ. ಸ್ವರ್ಣಮಾಲಾ ಸಿರಸಿ, ಯು.ಎನ್. ರವಿಕುಮಾರ್, ಅಧ್ಯಕ್ಷತೆ : ಕುವೆಂಪು ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಪಿ. ವೆಂಕಟರಾಮಯ್ಯ, ಸಂಜೆ 5.15 ರಿಂದ ವಿಚಾರ ಮಂಥನ ಕ್ರೋಢಿಕರಣ, ಉಪಸ್ಥಿತರು: ಪ್ರೊ.ಆರ್. ಇಂದಿರಾ, ಪ್ರೊ.ಆರ್. ಸೋಮಶೇಖರ್, ವಿಶ್ವಜ್ಞಾನಿ ಸಭಾಂಗಣ, ಮಾನಸಗಂಗೋತ್ರಿ.

■ **ರಂಗವಲ್ಲಿ:** ರಂಗವಲ್ಲಿ ಕಲಾವಿದರಿಂದ ತುಟ್ಟಿ ಇಡ್ಲಿ ನಾಟಕ ಪ್ರದರ್ಶನ, ರಚನೆ, ನಿರ್ದೇಶನ: ಹಿರಿಯ ಕಲಾವಿದ ಮಾಯಸಂದ್ರ ಕೃಷ್ಣಪ್ರಸಾದ್, ಬೆಳಕಿನ ವಿನ್ಯಾಸ:ಕೃಷ್ಣಕುಮಾರ್ ನಾರ್ಣಕಜೆ, ರಂಗ ವಿನ್ಯಾಸ: ಎಚ್.ಕೆ.ದ್ವಾರಕಾನಾಥ್, ವಸ್ತ್ರ ವಿನ್ಯಾಸ:ಹರಿಪ್ರಸಾದ್ ಕಶ್ಯಪ್, ಹಿನ್ನೆಲೆ ಸಂಗೀತ: ಉದಿತ್ ಹರಿತಸ್, ಪ್ರಸಾದನ: ಸಿ.ವಿ.ಸರಿತಾ, ರಾಘವೇಂದ್ರ ಬೂದನೂರ್, ಸ್ಥಳ: ಕಿರುರಂಗ ಮಂದಿರ, ಕಲಾಮಂದಿರದ ಆವರಣ, ಸಂಜೆ 7ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ– ಕೆ. ವೆಂಕಟರಾಜು ಚಾಮರಾಜನಗರ, 6.15 ಗೀತಾರಾಧನ, 6.35 ಸಿಎಫ್‌ಟಿಆರ್‌ಐ ಶೋಧ ಅನುಶೋಧ – ಪ್ರಾಯೋಜಿತ ಕಾರ್ಯಕ್ರಮ, 6.40 ಹಾಡು ಹೇಳಿದ ಕಥೆ, ಪ್ರಸ್ತುತಿ– ಡಾ. ಮೈಸೂರ್ ಉಮೇಶ್, 7.15 ಭಾವಗೀತೆಗಳು– ರಾಜ್‌ಕುಮಾರ್ ಭಾರತಿ, 8.30 ವಿಶಿಷ್ಟ ವ್ಯಕ್ತಿ–ವಿಶೇಷ ಯತ್ನ, ಬಾನುಲಿ ಸರಣಿ– ದೇಸಿ ಹಸುಗಳನ್ನು ಸಾಕುತ್ತಿರುವ ಗವ್ಯೋದ್ಯಮಿ ಕೆ.ಆರ್. ನಗರ ತಾಲೂಕು ಹಂಪಾಪುರದ ಸ್ವರೂಪ ರಾಣಿ ಅವರೊಂದಿಗೆ ಸಂವಾದ. ಇವರೊಂದಿಗೆ ಭಾಗವಿಸುವವರು– ದಿವಾಕರ ಹೆಗಡೆ, 9.05 ವಸುಧೈವ ಕುಟುಂಬಕಂ– ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 10.00 ಎಂ.ಎಸ್. ಸಂಗೀತ –ಹಾಡುಗಾರಿಕೆ, 11.00 'ಸ್ವರಾಜ್'– ಭಾರತ ಸ್ವಾತಂತ್ರ್ಯ ಸಂಗ್ರಾಮದ ಸಮಗ್ರ ತಾಥೆ

ಮಧ್ಯಾಹ್ನ: 12.30 ದೇವರನಾಮ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 12.45 ಜನಪದಗೀತೆ–ಮಳವಳ್ಳಿ ಎಂ.ಮಹದೇವಸ್ವಾಮಿ ಮತ್ತು ಸಂಗಡಿಗರು, 1.20 ಭಾವಗೀತೆ –ವೃಂದಗಾನ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.30 ಮಕ್ಕಳ ಮಂಟಪ –ನಂದಗೋಕುಲ, ಪ್ರಸ್ತುತಿ– ಕೆ.ಬಿ. ಮೀನಾ,. 4.00 ನಾಟಕ 'ಘೂಂಘಟ್' ರಚನೆ– ಡಾ.ಎಂ.ಆರ್. ಮಂದಾರವಲ್ಲಿ, ನಿರ್ವಾಣ– ಪ್ರಭುಸ್ವಾಮಿ ಮಳಿಮಠ್, 4.30 ನೆನಪಿನಂಗಳ–ಕನ್ನಡ ಸಾಹಿತ್ಯ ಲೋಕದ ಹಿರಿಯ ವಿದ್ವಾಂಸರು, ಸಂಶೋದಕರು ಹಾಗೂ ಭಾಷಾ ಶಾಸ್ತ್ರಜ್ಞರಾದ ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಇವರೊಂದಿಗೆ, 6.50 ಕೃಷಿರಂಗ–ತೋರಣ ಹೂರಣ –ವಾರದ ಗ್ರಾಮೀಣ ಕಾರ್ಯಕ್ರಮ, ಪ್ರಸ್ತುತಿ– ಎನ್. ಕೇಶವಮೂರ್ತಿ, ಡಾ. ಮೈಸೂರು ಉಮೇಶ್, ಆರ್. ಲೋಕೇಶ್ವರಿ, ಪರಾಗ–ಬೇಸಾಯದ ಬದುಕು ಸರಾಗ–ಬಾನುಲಿ ಸರಣಿ, 9.30 ಅರಣ್ಯವಾಸಿಗಳ ಶಿಕ್ಷಣ ವ್ಯವಸ್ಥೆ–DEED ಸಂಸ್ಥೆಯ ಶ್ರೀಕಾಂತ ಅವರೊಂದಿಗೆ ಸಂದರ್ಶಕರು– ದಿವಾಕರ ಹೆಗಡೆ, 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ– ವಿದುಷಿ ಮಂಜೂಷಾ ಪಾಟೀಲ್–ಗಾಯನ


ವಾರ್ತಾ ಮತ್ತು ಸಾರ್ವಜನಿಕ
ಸಂಪರ್ಕ ಇಲಾಖೆ
ಭಾರತವನ್ನು
ಚಂದ್ರನ ಅಂಗಳಕ್ಕೆ ತಲುಪಿಸಿದ
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿ
इसरो isro
ಇಸ್ರೋ ವಿಜ್ಞಾನಿಗಳಿಗೆ ಅಭಿನಂದನೆಗಳು
ವಿಕ್ರಂ ನೌಕೆಯನ್ನು ಯಶಸ್ವಿಯಾಗಿ ಚಂದ್ರನ ಅಂಗಳದಲ್ಲಿ ಇಳಿಸುವ ಮೂಲಕ ನಮ್ಮ ಇಸ್ರೋ ವಿಜ್ಞಾನಿಗಳು ಇಡೀ ದೇಶಕ್ಕೆ ಹೆಮ್ಮೆ ತಂದಿದ್ದಾರೆ. ಈ ಸಾಧನೆಯು ಭಾರತವನ್ನು ಚಂದ್ರನ ತಲುಪಿದ ಕೆಲವೇ ಕೆಲವು ಗಣ್ಯ ರಾಷ್ಟ್ರಗಳ ಸಾಲಿನಲ್ಲಿ ನಿಲ್ಲಿಸಿದೆ ಮತ್ತು ಚಂದ್ರನ ದಕ್ಷಿಣ ಧ್ರುವಕ್ಕೆ ಹೆಜ್ಜೆ ಇಟ್ಟ ಮೊಟ್ಟ ಮೊದಲ ರಾಷ್ಟ್ರ ಎಂಬ ಹೆಗ್ಗಳಿಕೆ ತಂದುಕೊಟ್ಟಿದೆ. ಈ ಐತಿಹಾಸಿಕ ಸಾಧನೆಯು ನಮ್ಮ ವಿಜ್ಞಾನಿಗಳ ಅನೇಕ ದಶಕಗಳ ಪರಿಶ್ರಮದ ಪ್ರತಿಫಲವಾಗಿದೆ.
ಇಸ್ರೋ ಸಂಸ್ಥೆಯ ಪ್ರಧಾನ ಕಛೇರಿ ಸೇರಿದಂತೆ ಅದರ ಅನೇಕ ಸಹ-ಸಂಸ್ಥೆಗಳಿಗೆ ತವರಾಗಿರುವ ಕರ್ನಾಟಕ, ಈ ಪಯಣದಲ್ಲಿ ಭಾಗಿಯಾಗಲು ಹೆಮ್ಮೆ ಪಡುತ್ತದೆ.
ಜೈ ಹಿಂದ್ . ಜೈ ಕರ್ನಾಟಕ.

ನಕ್ಕರೆ ಅದೇ ಸ್ವರ್ಗ

ನ್ಯಾಯಾಧೀಶರು : "ದೇವಾಲಯಕ್ಕೆ ಯಾಕೆ ಕನ್ನ ಹಾಕಿದೆ?"

ಕಳ್ಳ : "ಅದು ನಮ್ಮ ಸಂಪ್ರದಾಯ ಸರ್, ಯಾವುದೇ ಕೆಲಸವನ್ನು ದೇವರಿಂದಲೇ ಶುರು ಮಾಡ್ತೀವಿ!"

ಮೈಸೂರು ಮಿತ್ರ

ಶನಿವಾರ, 26 ಆಗಸ್ಟ್ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮ್ಮ ಜೀವನ, ನಾವು ಬದುಕಲಿಕ್ಕಾಗಿಯೇ ಹೊರತು, ಪರರ ಮೆಚ್ಚಿಸಲಿಕ್ಕಾಗಿ ಅಲ್ಲ. – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಆಳಾಗದವ ಅರಸನಲ್ಲ, ಹಠ ಹಿಡಿದವ ಸಾಮ್ರಾಟನಲ್ಲ.

ನಿಮ್ಮ ಪತ್ರಗಳು

ನಿಮ್ಮ ಹೃದಯದ ಆರೋಗ್ಯ ಕಾಪಾಡಿಕೊಳ್ಳಿ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ಹೃದಯಾಘಾತದಿಂದ ಉಂಟಾಗುತ್ತಿರುವ ಸಾವಿನ ವೇಗ ಬಹಳ ಹೆಚ್ಚುತ್ತಿರುವುದು ತೀವ್ರ ಆಘಾತಕಾರಿಯಾಗಿದೆ.

2021ರ ಅಕ್ಟೋಬರ್ ತಿಂಗಳಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಾಯಕ ನಟ ಪುನೀತ್ ರಾಜಕುಮಾರ್ ತೀವ್ರ ಹೃದಯಾಘಾತಕ್ಕೆ ಒಳಗಾಗಿ ನಿಧನ ಹೊಂದಿದ ನಂತರ ಜನಸಾಮಾನ್ಯರು ತಮ್ಮ ಹೃದಯದ ಆರೋಗ್ಯದ ಬಗ್ಗೆ ಅತೀವ ಹಾಗೂ ವಿಶೇಷವಾದ ಕಾಳಜಿ ವ್ಯಕ್ತಪಡಿಸುತ್ತಿರುವುದನ್ನು ಕಾಣಬಹುದು. ಹೃದಯ ತಜ್ಞರಿಗೆ ಈಗ ಅಪಾರವಾದ ಬೇಡಿಕೆ ಉಂಟಾಗಿದೆ. ಕನ್ನಡ, ತಮಿಳು, ತೆಲುಗು, ಹಿಂದಿ ಚಿತ್ರರಂಗದ ಇನ್ನೂ ಹಲವಾರು ಖ್ಯಾತನಾಮರು ಒಬ್ಬರ ಹಿಂದೆ ಒಬ್ಬರು ಅನ್ನುವ ಹಾಗೆ ಹೃದಯಾಘಾತಕ್ಕೆ ಬಲಿಯಾಗುತ್ತಿದ್ದಾರೆ.

ಮೊನ್ನೆ ಮೊನ್ನೆ ತಾನೇ ಖ್ಯಾತ ನಟ ವಿಜಯ ರಾಘವೇಂದ್ರ ಅವರ ಪತ್ನಿ ಕೇವಲ 37 ವರ್ಷದ ಸ್ಪಂದನಾ ಹೃದಯಾಘಾತಕ್ಕೆ ಒಳಗಾಗಿ ಇಹಲೋಕವನ್ನು ತ್ಯಜಿಸಿದ್ದಾರೆ. ಹಿಂದೆಲ್ಲ ವಯಸ್ಸಾದವರು, ಅನಾರೋಗ್ಯ ಪೀಡಿತರು, ಮುಂತಾದವರು ಹೃದಯಾಘಾತಕ್ಕೆ ಬಲಿಯಾಗುತ್ತಿದ್ದರು. ಆದರೆ ಕಳೆದ 2–3 ವರ್ಷಗಳ ಅವಧಿಯಲ್ಲಿ ಯುವಕರು, ಮಧ್ಯ ವಯಸ್ಕರು, ಶಾಲಾ ಬಾಲಕ–ಬಾಲಕಿಯರು, ಸಣ್ಣ ಪುಟ್ಟ ಮಕ್ಕಳು ಸಹ ಹೃದಯಾಘಾತಕ್ಕೆ ಬಲಿಯಾಗುತ್ತಿರುವುದು ಅತ್ಯಂತ ನೋವಿನ ಸಂಗತಿಯಾಗಿದೆ. ಈಗ ಸಾವನ್ನಪ್ಪುತ್ತಿರುವ ಬಹುತೇಕ ಜನ ಹೃದಯಾಘಾತಕ್ಕೆ ಒಳಪಟ್ಟಿರುತ್ತಾರೆ. ಅಂದರೆ ಈಗ ಸಂಭವಿಸುತ್ತಿರುವ ಬಹುತೇಕ ಸಾವುಗಳಿಗೆ ಹೃದಯಾಘಾತ ಅಥವಾ ಹೃದಯಸ್ಥಂಬನವೇ ಪ್ರಮುಖ ಕಾರಣವಾಗಿದೆ. ಮತ್ತೊಂದು ಗಾಬರಿಯ ವಿಚಾರವೆಂದರೆ, ಈಗ ಸಂಭವಿಸುತ್ತಿರುವ ಹೃದಯಾಘಾತಗಳಿಗೆ, ಕೋವಿಡ್ ಲಸಿಕೆಯೇ ಕಾರಣ ಎಂಬುದು. ಇದು ದೃಢಪಟ್ಟಿಲ್ಲವಾದರೂ ಅಂತಹ ಒಂದು ಗುಮಾನಿ ಜನಸಾಮಾನ್ಯರನ್ನು ಕಾಡುತ್ತಿದೆ. ಇದಕ್ಕೆ ಪುರಾವೆ ಅನ್ನುವಂತೆ ಹಲವಾರು ಮಾಧ್ಯಮ ವರದಿಗಳು ಪ್ರಕಟವಾಗುತ್ತಿವೆ. ಈ ಬಗ್ಗೆ ಭಾರತೀಯ ವೈದ್ಯಕೀಯ ಮಂಡಳಿ ಅಥವಾ ಸ್ವತಃ ಕೇಂದ್ರ ಸರ್ಕಾರ ತನಿಖೆ ನಡೆಸಿ, ಇಂತಹ ವದಂತಿ ನಿಜವೇ ಅಥವಾ ಸುಳ್ಳೆ ಎಂಬುದನ್ನು ದೃಢಪಡಿಸಬೇಕು. ಈಗ ಎಂತಹ ಪರಿಸ್ಥಿತಿ ಉದ್ಭವವಾಗಿದೆಯೆಂದರೆ, ಸಾಮಾನ್ಯ ಜನರೂ ಸಹ ತಮಗೂ ಯಾವಾಗ ಹೃದಯಾಘಾತ ಉಂಟಾಗಬಹುದೋ ಏನೋ ಎಂಬ ಚಿಂತೆಗೆ ಒಳಗಾಗಿದ್ದಾರೆ. ಯಾರಾದರೂ ಹೃದಯಾಘಾತಕ್ಕೆ ಒಳಪಟ್ಟು ನಿಧನರಾದರು ಎಂಬ ವಾರ್ತೆ ಕೇಳಿದರೆ, ಕೆಲವರು ತಮ್ಮ ಎದೆಗಳ ಮೇಲೆ ಕೈಯಿಟ್ಟು ನೋಡುವ ಪರಿಸ್ಥಿತಿ ಎದುರಾಗಿದೆ. ಅದೇನೇ ಇರಲಿ, ನಮ್ಮ ಎಚ್ಚರಿಕೆಯಲ್ಲಿ ನಾವಿರುವುದು ಒಳ್ಳೆಯದು. ಹೃದಯಕ್ಕೆ ಸಂಬಂಧಿಸಿದ ನಿಯಮಿತ ವೈದ್ಯಕೀಯ ತಪಾಸಣೆ, ನಿಯಮಿತ ನಡಿಗೆ, ವ್ಯಾಯಾಮ, ಮಧುಮೇಹ ರೋಗಿಗಳು ತಮ್ಮ ರಕ್ತದಲ್ಲಿ ಗ್ಲುಕೋಸ್ ಮಟ್ಟದ ನಿಯಂತ್ರಣ, ರಕ್ತದೊತ್ತಡದ ನಿರ್ವಹಣೆ, ಒತ್ತಡ ರಹಿತ ಬದುಕು, ಆಹಾರ ವಿಹಾರಗಳಲ್ಲಿ ಸೂಕ್ತ ಮಾರ್ಪಾಡು, ಜೀವನ ಶೈಲಿಯಲ್ಲಿ ಸೂಕ್ತ ಬದಲಾವಣೆ, ಧ್ಯಾನ, ಯೋಗ ಮುಂತಾದವುಗಳ ಮೂಲಕ ಸಂಭವನೀಯ ಹೃದಯಾಘಾತವನ್ನು ತಪ್ಪಿಸಬಹುದೆಂದು ತಜ್ಞ ವೈದ್ಯರು ಕೂಡ ಅಭಿಪ್ರಾಯ ಪಡುತ್ತಾರೆ. ಒಟ್ಟಿನಲ್ಲಿ ನಮ್ಮ ಹೃದಯದ ಆರೋಗ್ಯವನ್ನು ಮತ್ತಷ್ಟು ಮಗದಷ್ಟು ಕಾಳಜಿ ವಹಿಸಿ ನಾವೆಲ್ಲರೂ ಕಾಪಾಡಿಕೊಳ್ಳಬೇಕಾಗಿದೆ. ಅದಕ್ಕಿಂತ ಹೆಚ್ಚಿಗೆ ನಾವೇನು ಮಾಡಲಾಗದು. ಅಲ್ಲವೇ?

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಬಾಹ್ಯಾಕಾಶದಲ್ಲಿ ಭಾರತದ ಪವರ್

ಮಾನ್ಯರೆ,

ಚಂದ್ರನ ಸ್ಪರ್ಶಿಸಿದ ಆ ಕ್ಷಣ 6.04 ನಿಮಿಷ ಕೋಟ್ಯಾಂತರ ಜನರ ಪ್ರಾರ್ಥನೆ ಫಲಿಸಿತು. ಬಾಹ್ಯಾಕಾಶದಲ್ಲಿ ಇತಿಹಾಸ ಸೃಷ್ಟಿಸಿದ ಭಾರತ, ಚಂದಿರನ ಅಂಗಳದಲ್ಲಿ ಇನ್ನು ವಿಕ್ರಮನ ಪರಾಕ್ರಮ. ಚಂದ್ರನೂರಿನಲ್ಲಿ ಭಾರತದ ಹೆಮ್ಮೆಯ ಹೆಜ್ಜೆ ಚಂದ್ರನ ಮೇಲೆ ವಿಕ್ರಂ ಲ್ಯಾಂಡಿಂಗ್ ಆದ ಆ ಕ್ಷಣ. ಬಾಹ್ಯಾಕಾಶದಲ್ಲಿ ವಿಕ್ರಮನ ಸಂಗಮವಾಯಿತು. ವಿಕ್ರಮನಿಂದ ಚಂದ್ರನ ಆಲಿಂಗನ ಸ್ಪರ್ಶ. ಬಾಹ್ಯಾಕಾಶದಲ್ಲಿ ಇತಿಹಾಸ ಸೃಷ್ಟಿಸಿದ ಭಾರತ. ಬಾಹ್ಯಾಕಾಶದ ಸಾಧನೆಗೆ ತಲೆದೂಗಿತು ಜಗತ್ತು. ಚಂದ್ರನನ್ನು ಭಾರತದ ವಿಜ್ಞಾನಿಗಳು ಭಾರತದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದು ಚಂದ್ರಯಾನದ ಹೀರೋಗಳಾದರು. ಎಲ್ಲಾ ವಿಜ್ಞಾನಿಗಳಿಗೊಂದು ಸಲಾಮ್ ಮೇರಾ ಭಾರತ್ ಮಹಾನ್

–ಎಂ. ಎಸ್. ಉಷಾ ಪ್ರಕಾಶ್, ಲೇಖಕಿ ಹಾಗೂ ಕವಯಿತ್ರಿ, ಮೈಸೂರು.

ಚಂದ್ರನ ದಕ್ಷಿಣಕ್ಕೆ ಭಾರತ ಪ್ರಥಮ

ಮಾನ್ಯರೆ,

ತಾಯಿ ಮಕ್ಕಳಿಗೆ ಚಂದಮಾಮನ ಕತೆ ಹೇಳುತ್ತಾ ಊಟ ಮಾಡಿದ ಅನುಭವವಿಲ್ಲದವರು ಜಗತ್ತಿನಲ್ಲಿ ಯಾರು ಇಲ್ಲ ಎಂದರೆ ಅತಿಶಯೊಕ್ತಿಯಾಗಲಾರದು. ಆದರೆ ಕೆಲವು ದಶಕಗಳ ಹಿಂದೆ ಕೇವಲ ಕನಸಾಗಿದ್ದ ಚಂದ್ರನ ಮೇಲೆ ಸಂಶೋಧನೆ ಈಗ ಸಾಧ್ಯವಾಗಿರುವುದು ವಿಜ್ಞಾನ ಜಗತ್ತಿನ ಬೆಳವಣಿಗೆಗೆ ಕಾರಣವಾಗಿದೆ. 1969 ಜುಲೈ 21 ಅಮೆರಿಕದ ಗಗನಯಾತ್ರಿ ನೀಲ್ ಆರ್ಮ್‌ಸ್ಟ್ರಾಂಗ್ ಚಂದ್ರನ ಮೇಲೆ ಇಳಿದ ಮೊದಲ ಮಾನವನೆಂದು ದಾಖಲಾದರು. ಜಗತ್ತು ಈ ಅಮೆರಿಕದ ಸಾಧನೆಯನ್ನು ಇನ್ನೂ ಸಂಪೂರ್ಣವಾಗಿ ನಂಬಲು ಸಾಧ್ಯವಾಗಿಲ್ಲ. ಕಾರಣ ಚಂದ್ರನ ಮೇಲೆ ಹಾರಾಡಿದ ಅಮೆರಿಕದ ಧ್ವಜ. ಏಕೆಂದರೆ ಗಾಳಿಯಿಲ್ಲದ ಚಂದ್ರನಲ್ಲಿ ಅಮೆರಿಕದ ಧ್ವಜ ಹೇಗೆ ಹಾರಾಡಿತು. ಹೀಗೆ ಜಗತ್ತು ಹಲವಾರು ಪ್ರಶ್ನೆಗಳನ್ನು ಅಮೆರಿಕದ ಮುಂದೆ ಪ್ರಸ್ತುತಪಡಿಸುತ್ತದೆ.

ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತವನ್ನು ಹಾವಾಡಿಗರ ದೇಶವೆಂದು ಮೂದಲಿಸುತ್ತಿದ್ದವು. ಅಮೆರಿಕ, ರಷ್ಯಾ, ಚೀನಾ ರಾಷ್ಟ್ರಗಳು ಚಂದ್ರಯಾನದಲ್ಲಿ ಯಶಸ್ವಿಯಾಗಿದ್ದರೂ ಚಂದ್ರನ ದಕ್ಷಿಣ ಧ್ರುವವನ್ನು ಪ್ರವೇಶಿಸಿದ ಜಗತ್ತಿನ ಮೊದಲ ದೇಶ ಭಾರತವಾಗಿದೆ.

ಚಂದ್ರಯಾನ–3 ಯಶಸ್ಸಿಗೆ ಮುಖ್ಯ ಕಾರಣ ಇಸ್ರೋ. ಅತಿ ಕಡಿಮೆ ವೆಚ್ಚದಲ್ಲಿ ಕೇವಲ 615 ಕೋಟಿಗಳಲ್ಲಿ ಕಾರ್ಯ ಸಾಧಿಸುವ ಮೂಲಕ ಜಗತ್ತಿನ ಪ್ರಮುಖ ಬಾಹ್ಯಾಕಾಶ ಸಂಸ್ಥೆಯಾಗಿ ಇಸ್ರೋ ಗುರುತಿಸಿಕೊಂಡಿದೆ. ಚಂದ್ರನ ದಕ್ಷಿಣ ಭಾಗ ಭೂಮಿಗೆ ಕಾಣದ ಭಾಗ. ಚಂದ್ರನ ವಾತಾವರಣ ಭೂಮಿಗಿಂತ ಭಿನ್ನವಾಗಿದ್ದು, ಅಲ್ಲಿನ ಒಂದು ದಿನ ಭೂಮಿಯ 29.53 ದಿನಗಳಿಗೆ ಸಮನಾಗಿರುತ್ತದೆ. ಹಗಲಿನಲ್ಲಿ ಚಂದ್ರನ ಗರಿಷ್ಠ ತಾಪಮಾನ 120 ಡಿಗ್ರಿ ಸೆಲ್ಸಿಯಸ್ ಮತ್ತು ರಾತ್ರಿಯಲ್ಲಿ 183 ಡಿಗ್ರಿ ಸೆಲ್ಸಿಯಸ್ ಕಡಿಮೆಯಾಗುವ ಕಾರಣ ಇಲ್ಲಿ ಕಾರ್ಯಾಚರಣೆ ನಡೆಸುವ ವಿಕ್ರಮ್ ಲ್ಯಾಂಡರ್ ಗುಣಮಟ್ಟ ಇಸ್ರೋದ ಕೌಶಲ್ಯತೆಯನ್ನು ಜಗತ್ತಿಗೆ ಪರಿಚಯಿಸಿದೆ.

ಭಾರತದ ಚಂದ್ರಯಾನ–3 ಮುಖ್ಯ ಉದ್ದೇಶ ಚಂದ್ರನ ಮೇಲ್ಮೈಯಲ್ಲಿ ಮೃದುವಾಗಿ ಇಳಿಯುವ. ಚಂದ್ರನ ಮೇಲ್ಮೈ ಮತ್ತು ವಾತಾವರಣದ ಸಂಯೋಜನೆ, ಭೂಮಿಯ ಜೀವ–ರೀತಿಯ ಅಂಶಗಳನ್ನು ಅರ್ಥಮಾಡಿಕೊಳ್ಳಲು, ಚಂದ್ರನ ಮೇಲ್ಮೈ ಮತ್ತು ಚಂದ್ರನ ಪ್ಲಾಸ್ಮಾ ಪರಿಸರದ ಮೂಲಕ ಶಾಖವು ಹೇಗೆ ಹಾದುಹೋಗುತ್ತದೆ ಮತ್ತು ಚಂದ್ರನ ಒಡಲಲ್ಲಿ ಇರಬಹುದಾದ ಖನಿಜ ನಿಕ್ಷೇಪಗಳ ಅಧ್ಯಯನ ಮಾಡುವುದಾಗಿದೆ.

ಭಾರತದ ಬಾಹ್ಯಾಕಾಶ ಸಂಸ್ಥೆಯ ಇಸ್ರೋ ಚಂದ್ರಯಾನ–3 ಯೋಜನೆಯನ್ನು ಯಶಸ್ವಿಗೊಳಿಸಿದ್ದಕ್ಕೆ ಭಾರತದ ಜನತೆಯ ಪರವಾಗಿ ಇಸ್ರೋಗೆ ಧನ್ಯವಾದಗಳು ಮತ್ತು ಇಸ್ರೋ ಮುಂದಿನ ಯೋಜನೆ ಆದಿತ್ಯ (ಸೂರ್ಯನ ಅಧ್ಯಯನಕ್ಕೆ), ಶುಕ್ರಯಾನ ಯಶಸ್ವಿಯಾಗಲೆಂದು ಆಶಿಸೋಣ.

–ರಾಸುಮ ಭಟ್, ಚಿಕ್ಕಮಗಳೂರು.




ಬನ್ನೂರು ಕೆ. ರಾಜು
ಸಾಹಿತಿ, ಪತ್ರಕರ್ತ
ಮೊ : 94815 33167

ಬಹುಮುಖಿ

ಮೈಸೂರಲ್ಲಿತ್ತು ಎಚ್ಚೆಸ್ಕೆ ವಿಶ್ವಕೋಶ !

ಆಗಸ್ಟ್ 26, ನಡೆದಾಡುವ ವಿಶ್ವಕೋಶ ಎಂದೇ ಹೆಸರಾಗಿದ್ದ ಖ್ಯಾತ ಸಾಹಿತಿ ಡಾ.ಎಚ್ಚೆಸ್ಕೆ ಅವರ ಜನ್ಮದಿನ. ತನ್ನಿಮಿತ್ತ ಈ ಲೇಖನ.



> "ಎಚ್ಚೆಸ್ಕೆ ಬರೀ ಬರೆದವರಲ್ಲ. ಬರಹವೇ ಅವರಾಗಿ ಹೋಗಿದ್ದರು. ಅವರಿಗೆ ಬದುಕು-ಬರಹ ಪ್ರತ್ಯೇಕವಾಗಿರಲಿಲ್ಲ. ಬದುಕಿಗಿಂತಲೂ ಅವರು ಬರಹವನ್ನು ಹಚ್ಚಿಕೊಂಡವರು. ಬದುಕಿಗಾಗಿ ಬರಹವನ್ನೇ ಆಶ್ರಯಿಸಿಕೊಂಡಿದ್ದವರು. ಅಕ್ಷರಶಃ ಬರೆದೇ ಬದುಕಿದವರು. ಆಟವಾಡುವ ಎಳೆ ವಯಸ್ಸಿನಲ್ಲೇ ಲೇಖನಿಯ ಜೊತೆ ಬಿಳಿ ಕಾಗದದ ಮೈದಾನದಲ್ಲಿ ಆಡಲಿಳಿದ ಅವರು ಬೌಂಡರಿ, ಸಿಕ್ಸರ್‌ಗಳ ಮಳೆ ಸುರಿಸಿ ಸಾಹಿತ್ಯ ಕೃತಿಗಳ ಶತಕವನ್ನೇ ಬಾರಿಸಿದ್ದಾರೆ.

ನನ್ನ ಬದುಕಿನ ಉದ್ದಕ್ಕೂ ನನಗೆ ಆಸರೆಯಾಗಿ ಬಂದಿರತಕ್ಕದ್ದು ಲೇಖನಿ. ನಾನು ಹಿಡಿದ ಲೇಖನಿಯೇ ನನ್ನನ್ನು ಕೈಹಿಡಿದು ನಡೆಸಿದೆ. ಇಂದಿಗೂ ನನಗೆ ಸಂತೋಷ ನೀಡತಕ್ಕದ್ದೆಂದರೆ ಅದು ನನ್ನ ಲೇಖನಿಯೇ ಆಗಿದೆ. ಹಾಗೆಯೇ ಕನ್ನಡವನ್ನು ನಾನು ನಂಬಿದೆ, ಅದರಿಂದ ನಾನು ಉದ್ಧಾರವಾದೆ. ಎಲ್ಲರೂ ನನ್ನ ಕೈಬಿಟ್ಟಾಗ ನನ್ನನ್ನು ಕಾಪಾಡಿದ್ದು ನನ್ನ ಕನ್ನಡ. ಕನ್ನಡ ಬರೆದು ಬದುಕಿದವನು ಬದುಕುತ್ತಿರುವವನು ನಾನು.

ಎಚ್ಚೆಸ್ಕೆ ಎಂಬ ಮೂರಕ್ಷರಗಳಿಂದಲೇ ಪ್ರಸಿದ್ಧರಾಗಿದ್ದ ಡಾ.ಎಚ್.ಎಸ್. ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ತಾವು ಬದುಕಿರುವ ತನಕವೂ ಆಗಾಗ್ಗೆ ಹೇಳುತ್ತಿದ್ದ ಮಾತುಗಳಿವು. ಅವರು ತಮ್ಮ ಜೀವನದಲ್ಲಿ ಹೆಚ್ಚು ಪ್ರೀತಿಸುತ್ತಿದ್ದದ್ದು ಒಂದು ತಾವು ಹಿಡಿದಿದ್ದ ಲೇಖನಿಯನ್ನು, ಮತ್ತೊಂದು ತಾವು ನಂಬಿದ್ದ ಕನ್ನಡವನ್ನು! ಈಗ ಅವೆರಡನ್ನೂ ಬಿಟ್ಟು ಈ ಲೋಕವನ್ನೇ ತೊರೆದು ಅವರು ಮತ್ತೊಂದು ಲೋಕಕ್ಕೆ ಹೊರಟು ಹೋಗಿದ್ದಾರೆ (ನಿಧನ 30.08.2008). ಆದರೆ ಅವರು ತಮ್ಮ ಲೇಖನಿಯಿಂದ ಕನ್ನಡ ಸಾರಸ್ವತ ಲೋಕದಲ್ಲಿ ಸೃಷ್ಟಿಸಿದ ಅಪಾರ ಸಾಹಿತ್ಯವನ್ನು ಇಲ್ಲಿಯೇ ಬಿಟ್ಟು ಹೋಗಿದ್ದಾರೆ. ಇದು ಕನ್ನಡವಿರುವ ತನಕವೂ ಇದ್ದೇ ಇರುತ್ತದೆ. ಹಾಗಾಗಿ ಎಚ್ಚೆಸ್ಕೆ ಅವರು ತಮ್ಮ ಕೃತಿಗಳ ಮೂಲಕ ಸದಾ ಜೀವಂತವಾಗಿಯೇ ಇರುತ್ತಾರೆ. ಸತ್ತು ಬದುಕುವುದೆಂದರೆ ಇದೇ ತಾನೆ...?

ಎಚ್ಚೆಸ್ಕೆ ಬರೀ ಬರೆದವರಲ್ಲ. ಬರಹವೇ ಅವರಾಗಿ ಹೋಗಿದ್ದರು. ಅವರಿಗೆ ಬದುಕು–ಬರಹ ಪ್ರತ್ಯೇಕವಾಗಿರಲಿಲ್ಲ. ಬದುಕಿಗಿಂತಲೂ ಅವರು ಬರಹವನ್ನು ಹಚ್ಚಿಕೊಂಡವರು. ಬದುಕಿಗಾಗಿ ಬರಹವನ್ನೇ ಆಶ್ರಯಿಸಿಕೊಂಡಿದ್ದವರು. ಅಕ್ಷರಶಃ ಬರೆದೇ ಬದುಕಿದವರು. ಆಟವಾಡುವ ಎಳೆವಯಸ್ಸಿನಲ್ಲೇ ಲೇಖನಿಯ ಜೊತೆ ಬಿಳಿ ಕಾಗದದ ಮೈದಾನದಲ್ಲಿ ಆಡಲಿಳಿದ ಅವರು ಬೌಂಡರಿ, ಸಿಕ್ಸರ್‌ಗಳ ಮಳೆ ಸುರಿಸಿ ಸಾಹಿತ್ಯ ಕೃತಿಗಳ ಶತಕವನ್ನೇ ಬಾರಿಸಿದ್ದಾರೆ. ಕಥೆ, ಕಾವ್ಯ, ಕಾದಂಬರಿ, ಆಧ್ಯಾತ್ಮ ಲಲಿತ ಪ್ರಬಂಧ, ನಾಟಕ, ವಿಮರ್ಶೆ, ಹಾಸ್ಯ, ವೈಚಾರಿಕ ಲೇಖನ, ಜೀವನ ಚರಿತ್ರೆ, ಅನುವಾದ, ಅಂಕಣ ಬರಹ, ಚಿಂತನ, ಸಂದರ್ಶನ, ಸಂಪಾದನೆ, ಮಕ್ಕಳ ಸಾಹಿತ್ಯ, ಬ್ಯಾಂಕಿಂಗ್, ವಾಣಿಜ್ಯಶಾಸ್ತ್ರ ಸೇರಿದಂತೆ ಎಲ್ಲಾ ಪ್ರಕಾರಗಳಲ್ಲೂ ತಮ್ಮ ಲೇಖನಿಯ ಬ್ಯಾಟ್ ಬೀಸಿರುವ ಅವರು ಅಂಕಣ ಬರಹಗಳಲ್ಲಂತೂ ಎತ್ತಿದ ಕೈ. ಅದರಲ್ಲೂ ವ್ಯಕ್ತಿಚಿತ್ರಗಳನ್ನು ಬರೆಯುವುದರಲ್ಲಿ ಅವರಿಗೆ ಸಮ ಮತ್ತೊಬ್ಬರನ್ನು ಹೆಸರಿಸುವುದು ಕಷ್ಟ. ಅಂಕಣ ಬರಹಗಳಿಂದ ಎಚ್ಚೆಸ್ಕೆ ಹೆಚ್ಚು ಹೆಸರಾಗಿದ್ದರೂ ಕೂಡ ಅವರ ಸಾಹಿತ್ಯ ವೈವಿಧ್ಯಮಯ. ಆಡು ಮುಟ್ಟದ ಸೊಪ್ಪಿಲ್ಲ ಎಂಬಂತೆ ಎಚ್ಚೆಸ್ಕೆ ಬರೆಯದ ಸಾಹಿತ್ಯ ಪ್ರಕಾರಗಳೇ ಇಲ್ಲ. ಹಾಗೆಯೇ ಅವರ ಬರಹಗಳನ್ನು ಪ್ರಕಟಿಸದ ಪತ್ರಿಕೆಗಳೇ ವಿರಳ. ಇಲ್ಲವೆಂದರೂ ಆದೀತು! ಎಚ್ಚೆಸ್ಕೆಯವರು ಅದ್ಭುತ ಪತ್ರಕರ್ತರೂ ಆಗಿದ್ದರು 'ಸಮದರ್ಶಿ' ಹಾಗೂ 'ವಿಚಾರಪ್ರಿಯ' ಎಂಬ ಹೆಸರುಗಳಿಂದಲೂ ಅವರು ಬರೆದಿರುವುದುಂಟು.

ಎಚ್ಚೆಸ್ಕೆ ಅವರ ಬರಹವೆಂದರೆ ಅದೊಂದು ಮಹಾಸಾಗರ. ಅದಕ್ಕೇ ಇರಬೇಕು ಎಂಭತ್ತರ ದಶಕದಲ್ಲೇ ಡಾ.ಹಾಮಾನಾ ಅವರು "ಲೇಖಕ ಎಷ್ಟು ಪದಗಳನ್ನು ಸೃಷ್ಟಿಸಿದ್ದಾನೆ ಎಂದು ಲೆಕ್ಕ ಹಾಕುವ ಒಂದು ಪದ್ಧತಿ ಪಾಶ್ಚಾತ್ಯರಲ್ಲಿದೆ. ಆದರೆ ಎಚ್ಚೆಸ್ಕೆಯವರ ಪದಗಳನ್ನಿರಲಿ, ಪುಟಗಳನ್ನು ಲೆಕ್ಕಹಾಕುವುದೂ ಕಷ್ಟ" ಎಂದು ಉದ್ಗರಿಸಿರುವುದು. ಹಾಗೆಯೇ ಪ್ರೊ.ಟಿ.ವಿ. ವೆಂಕಟಾಚಲ ಶಾಸ್ತ್ರಿ ಯವರು "ದಶಕಗಳ ಮೇಲೆ ದಶಕಗಳು ಉರುಳುತ್ತಿವೆ ಆದರೂ ಎಚ್ಚೆಸ್ಕೆ ಎಡೆಬಿಡದೆ ಸಾಗಿಸುತ್ತಿರುವ ಸಾಹಿತ್ಯ ಕೃಷಿಯ ಸಾಹಸಕ್ಕೆ ನಾನು ಬೆರಗಾಗಿದ್ದೇನೆ" ಎಂದು ಒಂದು ಕಡೆ ನುಡಿದಿದ್ದರೆ ಮತ್ತೊಂದು ಕಡೆ ಪ್ರೊ.ಜಿ.ಟಿ. ನಾರಾಯಣ ರಾವ್ ಅವರು–

"ಕಡಿಮೆ ನುಡಿಗಳಲಿ ಗಹನ ಚಿಂತನೆಯ
ಗಾನಧಾಟಿಯಲಿ ಶಬ್ದ ಮುತ್ತುಗಳ
ನೇವ ಮಾಂತ್ರಿಕರು ನಮ್ಮ ಎಚ್ಚೆಸ್ಕೆ"ಎಂದು ಸುಂದರವಾದ ಕವಿತೆಯನ್ನು ಕಟ್ಟಿದ್ದಾರೆ.

"ಲಲಿತವೂ, ಆಡಂಬರ ರಹಿತವೂ ಆಗಿರುವ ಶಬ್ದಪ್ರಯೋಗ, ಅಚ್ಚುಕಟ್ಟಾದ ವಾಕ್ಯಗಳು, ಭ್ರಾಂತಿಗಾಗಲಿ, ಸಂದೇಹಕ್ಕಾಗಲಿ ಅವಕಾಶವಿಲ್ಲದಿರುವಂತೆ ಸ್ಪಷ್ಟವಾಗಿಯೂ, ಯಥಾರ್ಥವಾಗಿಯೂ ಇರುವ ಶೈಲಿ, ದಿನಬಳಕೆಯ ಉದಾಹರಣೆಗಳು, ನಿದರ್ಶನಗಳು, ಮಿತವೂ, ಉಚಿತವೂ ಆಗಿರುವ ನಿರೂಪಣಾ ರೀತಿ" ಇದು ಡಾ. ಡಿ.ಎಲ್. ನರಸಿಂಹಾಚಾರ್ಯರು ಎಚ್ಚೆಸ್ಕೆಯವರ ಬರವಣಿಗೆಯನ್ನು ಮೆಚ್ಚಿಕೊಂಡಿರುವ ರೀತಿ.

ಪ್ರಾಥಮಿಕ ಶಾಲಾ ಶಿಕ್ಷಕ ಎಚ್.ಶ್ರೀನಿವಾಸ ಅಯ್ಯಂಗಾರ್ ಮತ್ತು ಶ್ರೀಮತಿ ಅಲಮೇಲಮ್ಮ ದಂಪತಿಗಳ ಸುಪುತ್ರರಾಗಿ 1920ರ ಆಗಸ್ಟ್ 26ರಂದು ಮೈಸೂರು ಜಿಲ್ಲೆಯ ಕೃಷ್ಣರಾಜನಗರ ತಾಲೂಕಿನ ಹಳೆಯೂರು ಗ್ರಾಮದಲ್ಲಿ ಜನಿಸಿದ ಎಚ್ಚೆಸ್ಕೆ ಅವರ ಬದುಕು ಆರಂಭವಾದದ್ದು ಕಡು ಕಷ್ಟದಲ್ಲೇ. ಹುಟ್ಟಿದ ಊರಿನಲ್ಲೇ ಇಂಟರ್ ಮೀಡಿಯಟ್‌ವರೆಗೆ ಓದಿ, ನಂತರ ಮನೆ ಮನೆಗೆ ಪತ್ರಿಕೆ ಹಂಚುತ್ತಾ ಅಂದಿನ ತಾಯಿನಾಡು, ಹಿಂದೂ ದಿನಪತ್ರಿಕೆಗಳಿಗೆ ವರದಿ ಮಾಡುತ್ತಾ ಪತ್ರಿಕೆಗಳೊಡನೆಯೇ ಬೆಳೆದ ಎಚ್ಚೆಸ್ಕೆ ತಮ್ಮ ದಿಟ್ಟ ಬರಹಗಳಿಂದ ಬಾಲ್ಯದಲ್ಲೇ ಆಗಿನ ದಿವಾನ್ ಮಿರ್ಜಾ ಇಸ್ಮಾಯಿಲ್ ಅವರಿಂದ ಭೇಷ್ ಎನಿಸಿಕೊಂಡಿದ್ದರು.

ಓದಿನಲ್ಲಿ ಅತೀವ ಆಸಕ್ತಿಯಿದ್ದ ಅವರು ಮೈಸೂರಿನ ನೆಂಟರ ಮನೆಯಲ್ಲಿದ್ದುಕೊಂಡು ವಿದ್ಯಾಭ್ಯಾಸ ಮುಂದುವರಿಸಿ ನಂತರ ಉಚಿತ ಊಟ ವ್ಯವಸ್ಥೆಯಿದ್ದ ಶ್ರೀ ರಾಮಕೃಷ್ಣ ವಿದ್ಯಾರ್ಥಿ ನಿಲಯದಲ್ಲಿದ್ದುಕೊಂಡು ಎಲ್.ಕಾಂ. ಮುಗಿಸಿ ಆರಂಭದಲ್ಲಿ ರೇಷ್ಮೆ ಫಿಲೇಚರ್ ವಿಸ್ತರಣೆ ಯೋಜನೆಯಲ್ಲಿ ಲೆಕ್ಕ ಪರಿಶೋಧನೆಯ ಕೆಲಸಕ್ಕೆ ಸೇರಿಕೊಂಡಿದ್ದರು. ನಂತರ ನ್ಯಾಷನಲ್ ಹೈಸ್ಕೂಲಿನಲ್ಲಿ ಉಪಾಧ್ಯಾಯ ವೃತ್ತಿ, ಜೊತೆ ಜೊತೆಗೆ ಬಿ.ಎಸ್. ವೆಂಕಟರಾಂ ಅವರ ದೇಶಬಂಧು ಮತ್ತು ಛಾಯಾಪತ್ರಿಕೆಗಳಲ್ಲಿ ಕಾಯಕ. ಹೀಗೆ ಸಾಗುತ್ತಿರುವಾಗಲೇ ಟಿ.ಆರ್. ಶಾಮಣ್ಣನವರ ವಾಣಿಜ್ಯ ಶಿಕ್ಷಣ ಸಂಸ್ಥೆಯಲ್ಲಿ ಉಪನ್ಯಾಸಕ ಕೆಲಸ. ನಂತರ ಗೆಳೆಯ ಬಿ.ವಿ. ಬನುಮಯ್ಯ ಮೈಸೂರಿನಲ್ಲಿ ಆರಂಭಿಸಿದ್ದ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ. ಇದರ ನಡುವೆಯೇ ಮನದ ಮಹದಾಸೆಯಾಗಿದ್ದ ಬಿ.ಕಾಂ. ಪದವಿಯಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಪ್ರಥಮ ಸ್ಥಾನ. ಜೊತೆಗೆ ಕನ್ನಡ ಸಾಹಿತ್ಯ ಪರಿಷತ್‌ನ ಕನ್ನಡಜಾಣ ಮತ್ತು ಬನಾರಸ್ ವಿಶ್ವವಿದ್ಯಾಲಯದಿಂದ ಅರ್ಥಶಾಸ್ತ್ರದಲ್ಲಿ ಎಂ.ಎ. ಪದವಿ. ಅದರಿಂದಾಗಿ ಕಾಲೇಜಿನಲ್ಲಿ ಪ್ರಾಧ್ಯಾಪಕ, ಪ್ರಾಚಾರ್ಯ ಪಟ್ಟಗಳು.

ಕೆಲಬೆಳವಣಿಗೆಗಳಿಂದ ಎಚ್ಚೆಸ್ಕೆಯವರು ಬೇಸತ್ತು ಮಿತ್ರ ಬನುಮಯ್ಯನವರ ಕೈಗೆ ರಾಜೀನಾಮೆ ಪತ್ರ ನೀಡಿ ಬರಿಗೈನಲ್ಲಿ ಮನೆಗೆ ಬಂದಾಗ ಅವರ ಕೈಹಿಡಿದದ್ದು ಲೇಖನಿಯೇ! ಆ ಕ್ಷಣ ಬರೆದೇ ಬದುಕುವ ಛಲತೊಟ್ಟು ಎಚ್ಚೆಸ್ಕೆಯವರು ಕನ್ನಡ ಸಾರಸ್ವತ ಭೂಮಿಯ ಬೃಹತ್ ವೃಕ್ಷವಾಗಿ ಬೆಳೆದು ನಿಂತದ್ದು ಈಗ ಇತಿಹಾಸ.

ವಿದ್ಯಾರ್ಥಿ ದೆಸೆಯಲ್ಲೇ ಸಾಹಿತ್ಯ ರಚನೆಗಿಳಿದು ಒಂದು ಕಡೆ ಸಾಹಿತ್ಯ ಮತ್ತೊಂದು ಕಡೆ ವಿದ್ಯಾಭ್ಯಾಸ ಮಾಡಿಕೊಂಡೇ ಸಾಧನೆಯತ್ತ ಸಾಗಿ ಬಂದ ಎಚ್ಚೆಸ್ಕೆ ಎಲ್.ಕಾಂ. ವಿದ್ಯಾರ್ಥಿಯಾಗಿದ್ದಾಗಲೇ 1945ರಲ್ಲೇ ಗೃಹಸ್ಥಾಶ್ರಮ ಪ್ರವೇಶಿಸಿದ್ದರು. ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿ ಜವಳಿ ಅಂಗಡಿ ಇಟ್ಟಿದ್ದ ಕೆ.ಶ್ರೀನಿವಾಸ ಅಯ್ಯಂಗಾರ್ ಅವರ ಮಗಳು ಚಂಪಕಲಕ್ಷ್ಮಿಯನ್ನು ವಿವಾಹವಾಗಿದ್ದರು. ಅವರದು ಅನುರೂಪ ದಾಂಪತ್ಯ. ಆರತಿಗೊಂದು ಕೀರುತಿಗೊಂದೆಂಬಂತೆ ಪಾರ್ಥಸಾರಥಿ ಮತ್ತು ಗೀತಾ ಎಂಬ ಎರಡು ಮಕ್ಕಳು ಅವರ ಕುಳಕುಡಿಗಳು. ಸಾಹಿತ್ಯ ಪ್ರೇಮಿಯಾಗಿದ್ದ ಪತ್ನಿ ಚಂಪಕಲಕ್ಷ್ಮಿಯವರ ತುಂಬು ಹೃದಯದ ಸಹಕಾರ ಸಹ ಎಚ್ಚೆಸ್ಕೆ ಅವರ ಬರವಣಿಗೆಗೆ ಸ್ಫೂರ್ತಿದಾಯಕವಾಗಿತ್ತು. "ನನ್ನ ಪತ್ನಿಯ ಸಹಕಾರವಿಲ್ಲದಿದ್ದರೆ ನಾನು ಇಷ್ಟೊಂದು ಬರೆಯಲು ಸಾಧ್ಯವಾಗುತ್ತಿರಲಿಲ್ಲವೇನೋ.." ಎಂಬ ಮಾತುಗಳನ್ನು ತಮ್ಮ ಆತ್ಮೀಯರ ಬಳಿ ಸ್ವತಃ ಎಚ್ಚೆಸ್ಕೆ ಅವರೇ ಹೆಮ್ಮೆಯಿಂದ ಹೇಳಿಕೊಂಡಿರುವುದುಂಟು. ಅಂಥ ಅಪರೂಪದ ಸಾಮರಸ್ಯದ ದಾಂಪತ್ಯ ಜೀವನ ಅವರದ್ದಾಗಿತ್ತು. ಆದ್ದರಿಂದಲೇ ಅವರು ಲೇಖನಿ ಹಿಡಿದು ಸಾರಸ್ವತ ಹಿಮಾಲಯ ವಾಗಲು ಸಾಧ್ಯವಾದದ್ದು!

ಜಗತ್ತಿನ ಯಾವ ವಿಷಯಗಳಾದರೂ ಸರಿಯೇ ಥಟ್ಟನೆ ಪುಟಗಟ್ಟಲೆ ಬರೆದುಬಿಡುವ, ಗಂಟೆಗಟ್ಟಲೆ ಪಟಪಟನೆ ನಿರರ್ಗಳವಾಗಿ ಭಾಷಣ ಮಾಡಿಬಿಡುವ ವಿದ್ವತ್ತಿನ ತವನಿಧಿಯೇ ಆಗಿದ್ದ ಎಚ್ಚೆಸ್ಕೆ ತಮ್ಮ ಪುಟ್ಟ ತಲೆಯಲ್ಲಿ ದೊಡ್ಡ ಜಗತ್ತನ್ನೇ ತುಂಬಿಕೊಂಡು ಜ್ಞಾನಪರ್ವವೇ ಆಗಿ ಚಲಿಸುವ ವಿಶ್ವಕೋಶ, ನಡೆದಾಡುವ ಕಂಪ್ಯೂಟರ್ ಎಂದೇ ಬದುಕಿನುದ್ದಕ್ಕೂ ಹೆಸರಾಗಿದ್ದರು. ಸಾಹಿತ್ಯದಲ್ಲೆಂತೋ ಅಂತೆಯೇ ಭಾಷಣದಲ್ಲೂ ಬಹು ಪ್ರಸಿದ್ಧರಾಗಿದ್ದ ಅವರು ನಾಡು–ನುಡಿ, ಸಾಹಿತ್ಯ, ಸಂಸ್ಕೃತಿ, ವಾಣಿಜ್ಯ, ಬ್ಯಾಂಕಿಂಗ್, ಸಾಮಾನ್ಯಜ್ಞಾನ, ವಿಜ್ಞಾನ, ವಿವೇಕ, ತತ್ವಜ್ಞಾನ, ಕ್ರೀಡೆ, ಸಿನಿಮಾ, ಜಾನಪದ, ಇತಿಹಾಸ, ಪೌರಾಣಿಕ, ಸಾಮಾಜಿಕ, ರಾಜಕೀಯ, ಹಾಸ್ಯ, ವಿಡಂಬನೆ, ವಿಮರ್ಶೆ, ಚಿಂತನೆ... ಹೀಗೆ ಎಲ್ಲಾ ರೀತಿಯ ವಿಷಯಗಳ ಬಗ್ಗೆ ಕರ್ನಾಟಕದ ಉದ್ದಗಲಕ್ಕೂ ತಮ್ಮ ಕಂಚಿನ ಕಂಠವನ್ನು ಮೊಳಗಿಸಿ ಸಹಸ್ರಾರು ವಿದ್ವತ್‌ಪೂರ್ಣ ಭಾಷಣಗಳನ್ನು ಮಾಡಿದ್ದಾರೆ. ಹಲವು ಸಾವಿರ ಪುಟಗಳ ಅವರ ಸಮಗ್ರ ಸಾಹಿತ್ಯ ಒತ್ತಟ್ಟಿಗಿರಲಿ, ಈ ಭಾಷಣಗಳನ್ನೆಲ್ಲಾ ಸಂಗ್ರಹಿಸಿ ಪುಸ್ತಕರೂಪ ನೀಡಿದ್ದರೆ ಇದೇ ಅದೆಷ್ಟು ಸಾವಿರ ಪುಟಗಳಾಗುತ್ತಿತ್ತೋ ಏನೋ!

ಎದೆತುಂಬ ಎಣೆಯಿಲ್ಲದ ಕನ್ನಡ ಪ್ರೇಮವನ್ನು ತುಂಬಿಕೊಂಡಿದ್ದ ಎಚ್ಚೆಸ್ಕೆ ವಿಶೇಷವಾಗಿ ಕನ್ನಡ ಕೈಂಕರ್ಯಕ್ಕೆ ಯಾರೇ ಕರೆದರೂ ಸಲೀಸಾಗಿ ಹೋಗಿ ಭಾಷಣ ಮಾಡಿ ಬರುತ್ತಿದ್ದರು. ಅವರಿಗೆ ಕನ್ನಡಾಭಿಮಾನ ಎಷ್ಟಿತ್ತೆಂದರೆ ಚಿಕ್ಕವಯಸ್ಸಿನಲ್ಲೇ ಸ್ವಾತಂತ್ರ್ಯಪೂರ್ವದಲ್ಲಿಯೇ ತಮ್ಮ ಹುಟ್ಟಿದೂರಿನಲ್ಲಿ ಕನ್ನಡ ಸಂಘ ಕಟ್ಟಿ ಕನ್ನಡ ಕಟ್ಟುವ ಕೈಂಕರ್ಯ ಮಾಡಿದ್ದರು. ಅದನ್ನು ಒಂದಿಲ್ಲೊಂದು ಬಗೆಯಲ್ಲಿ ಉಸಿರಿರುವ ತನಕವೂ ಮಾಡಿಕೊಂಡೇ ಬಂದಿದ್ದರವರು. ಒಟ್ಟಾರೆ ಬರಹಗಾರರಾಗಿ, ಭಾಷಣಕಾರರಾಗಿ, ಉಪನ್ಯಾಸಕರಾಗಿ ಕನ್ನಡ ಕಟ್ಟುವ ಕಾಯಕಯೋಗಿಯಾಗಿ ಅವರ ಸೇವೆ ಮತ್ತು ಸಾಧನೆ ಬಹುದೊಡ್ಡದು. ಕನ್ನಡ ಸಾರಸ್ವತಲೋಕ ಸದಾ ಸ್ಮರಿಸುವ ಮಹಾಸಾಧಕರವರು. ಡಾ.ಸಿ.ಪಿ.ಕೆ.ಅವರ ಮಾತಿನಲ್ಲಿ ಹೇಳುವುದಾದರೆ "ವಿದ್ಯಾವಂತರಿರುವ ಪ್ರತಿಯೊಂದು ಮನೆಯಲ್ಲೂ ಎಚ್ಚೆಸ್ಕೆ ಅವರ ಒಂದಿಲ್ಲೊಂದು ಅಂಕಣ ಬರಹಗಳು ಓದಿಸಿಕೊಳ್ಳುತ್ತವೆ. ಭಾಗಶಃ ಅಥವಾ ಪೂರ್ಣವಾಗಿ, ವ್ಯಕ್ತಿಯಾಗಿ ಮತ್ತು ಲೇಖಕನಾಗಿ ಅವರೊಂದು ಅಪರೂಪದ ಚೇತನ, ಕನ್ನಡ ಸಾಹಿತ್ಯ, ಸಂಸ್ಕೃತಿಗಳಿಗೆ ಅವರ ಕೊಡುಗೆ ಗುರುತರವಾದದ್ದು; ಗುರುವಾಗಿ ಕೂಡ ಅವರು ಸಂಪಾದಿಸಿರುವ ಕೀರ್ತಿ ದೊಡ್ಡದು.


ಎಚ್ಚೆಸ್ಕೆ ಅವರ 'ಅಭಿವೃದ್ಧಿ ಯೋಜನೆ' ಕೃತಿಗೆ 1960ರಲ್ಲಿ ರಾಜ್ಯ ಸರ್ಕಾರದ ಪ್ರಶಸ್ತಿ, 1980ರಲ್ಲಿ 'ಸುರಹೊನ್ನೆ' ಪ್ರಬಂಧ ಸಂಕಲನಕ್ಕೆ ರಾಜ್ಯ ಪ್ರಶಸ್ತಿ, 1981ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ 1996ರಲ್ಲಿ ಕರ್ನಾಟಕ ಪತ್ರಿಕಾ ಅಕಾಡೆಮಿ ಪ್ರಶಸ್ತಿ ಅದೇ ವರ್ಷ ಹೆಚ್.ಕೆ. ವೀರಣ್ಣಗೌಡ ಪ್ರಶಸ್ತಿ, 1997ರಲ್ಲಿ ಕನ್ನಡ ರಾಜ್ಯೋತ್ಸವ ಪ್ರಶಸ್ತಿ, 1999ರಲ್ಲಿ ವಿಶ್ವಮಾನವ ಪ್ರಶಸ್ತಿ, 2003ರಲ್ಲಿ ಗಾಂಧೀವಾದಿ ನಂಜುಂಡಯ್ಯ ಪ್ರಶಸ್ತಿ, 2004ರಲ್ಲಿ ಪ್ರತಿಷ್ಠಿತ ಮೈಸೂರು ವಿಶ್ವವಿದ್ಯಾನಿಲಯದಿಂದ ಗೌರವ ಡಾಕ್ಟರೇಟ್ ಪುರಸ್ಕಾರ, 2006ರಲ್ಲಿ ಶ್ರೀ ಕಾಶಿ ಶೇಷ ಶಾಸ್ತ್ರಿ ಚಾರಿಟಬಲ್ ಟ್ರಸ್ಟ್‌ನಿಂದ ಐವತ್ತು ಸಾವಿರ ನಿಧಿ ಸಮರ್ಪಣೆಯ ಗೌರವ ಸೇರಿದಂತೆ ನಾಡಿನ ಸಂಘ–ಸಂಸ್ಥೆಗಳಿಂದ ನೂರಾರು ಪ್ರಶಸ್ತಿ–ಪುರಸ್ಕಾರ–ಸನ್ಮಾನಗಳು ಎಚ್ಚೆಸ್ಕೆ ಅವರಿಗೆ ಸಂದಿವೆ. ಜೊತೆಗೆ ಇವೆಲ್ಲಕ್ಕೂ ಕಿರೀಟವಿಟ್ಟಂತೆ ಅವರಿಗೆ ಅರವತ್ತು ತುಂಬಿದಾಗ 'ಎಚ್ಚೆಸ್ಕೆ ಆಯ್ದ ಬರಹಗಳು', ಎಪ್ಪತ್ತು ತುಂಬಿದಾಗ 'ಎಚ್ಚೆಸ್ಕೆ ಎಪ್ಪತ್ತು', ಎಪ್ಪತ್ತೈದು ತುಂಬಿದಾಗ 'ಸಮದರ್ಶಿ', ಎಂಬತ್ತೈದು ತುಂಬಿದಾಗ 'ಎಚ್ಚೆಸ್ಕೆ ಬದುಕು ಬರಹ' ಎಂಬ ಒಟ್ಟು ನಾಲ್ಕು ಸಂಭಾವನಾ ಗ್ರಂಥಗಳಿಂದ ಎಚ್ಚೆಸ್ಕೆ ಅಭಿನಂದಿತರಾಗಿದ್ದಾರೆ. ಹಾಗೆಯೇ ವಿದ್ವಾನ್ ಎಂ. ಶಿವಕುಮಾರಸ್ವಾಮಿ ಅವರಿಂದ ಎಚ್ಚೆಸ್ಕೆ ಕುರಿತು 'ಸಾರಸ್ವತ ತಪಸ್ವಿ' ಎಂಬ ಜೀವನ ಚರಿತ್ರೆ ಪ್ರಕಟವಾಗಿರುವುದು ಎಚ್ಚೆಸ್ಕೆ ಅವರಿಗೆ ಸಂದಿರುವ ಮತ್ತೊಂದು ಮಹತ್ತರ ಗೌರವವಾಗಿದೆ.

ತಮ್ಮ ಸಾಹಿತ್ಯ ಕೃಷಿಯ ಬೆಳವಣಿಗೆಯಲ್ಲಿ ಮತ್ತು ತಮ್ಮ ಬದುಕಿನ ಕಷ್ಟ–ಸುಖಗಳಲ್ಲಿ ಹೃದಯವಂತರಾಗಿ ಸ್ಪಂದಿಸಿದಮು ಡಾ. ದೇಜಗೌ ಅವರೆಂದು ಸ್ಮರಿಸಿಕೊಳ್ಳುತ್ತಿದ್ದ ಎಚ್ಚೆಸ್ಕೆಯವರಲ್ಲಿ ಉಪಕಾರ ಸ್ಮರಣೆಯ ಗುಣ ತುಂಬಿ ತುಳುಕುತ್ತಿತ್ತು. ಇಂಥ ಎಚ್ಚೆಸ್ಕೆಯವರ 88ನೇ ಹುಟ್ಟುಹಬ್ಬವನ್ನು ಅಷ್ಟೇ ಪ್ರೀತಿಯಿಂದ 2008ರಲ್ಲಿ ಸಾಹಿತ್ಯ ದಿಗ್ಗಜ ದೇಜಗೌ ಅವರೇ ಮುಂದೆ ನಿಂತು ತಮ್ಮ ದೇಜಗೌ ಮತ್ತು ಕುವೆಂಪು ಟ್ರಸ್ಟ್ ವತಿಯಿಂದ ಎಚ್ಚೆಸ್ಕೆಯವರನ್ನು ಮೆರವಣಿಗೆ ಮಾಡಿ ಅದ್ದೂರಿ ಸನ್ಮಾನದೊಡನೆ ಆಚರಿಸಿದ್ದು ಕನ್ನಡ ಸಾರಸ್ವತ ಲೋಕದಲ್ಲೊಂದು ದಾಖಲೆಯಾಗಿದ್ದು, ಎಚ್ಚೆಸ್ಕೆಯವರ ಸಾಧನೆಯ ಎತ್ತರಕ್ಕಿದು ಸಾಕ್ಷಿಯೂ ಆಗಿದೆ. ಅಂತೆಯೇ ಇದೇ ಸಂದರ್ಭದಲ್ಲಿ ಚುಟುಕು ಸಾಹಿತ್ಯ ಪರಿಷತ್‌ನ ಡಾ. ಎಂ.ಜಿ.ಆರ್.ಅರಸ್ ಅವರು ಎಚ್ಚೆಸ್ಕೆ ಅವರ ಸಮಗ್ರ ಸಾಹಿತ್ಯದ ಬೃಹತ್ ಸಂಪುಟವನ್ನು ಪ್ರಕಟಿಸಿದ್ದು ಕನ್ನಡ ಸಾರಸ್ವತ ಲೋಕದಲ್ಲಿ ಇದೊಂದು ವಿಶಿಷ್ಟ ಕೃತಿ ಎನಿಸಿದೆ.

ದೇವಸ್ಥಾನದ ಹುಂಡಿಗೆ 100 ಕೋಟಿಯ ಚೆಕ್ ಹಾಕಿದ್ದ ಭಕ್ತನ ಖಾತೆಯಲ್ಲಿದ್ದದ್ದು ಬರೀ 17 ರೂ.!

ಹೈದರಾಬಾದ್, ಆ.25– ಸಿಂಹಾಚಲಂ ದೇವಸ್ಥಾನವೆಂದೇ ಪ್ರಸಿದ್ಧವಾಗಿರುವ ವಿಶಾಖಪಟ್ಟಣಂನಲ್ಲಿರುವ ಶ್ರೀ ವರಾಹ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದ ಹುಂಡಿಗೆ ಭಕ್ತನೊಬ್ಬ 100 ಕೋಟಿ ರೂ.ಗಳ ಚೆಕ್ ಅನ್ನು ಹಾಕಿದ್ದಾನೆ. ಈ ಚೆಕ್‌ಗೆ ಯಾವುದೇ ದಿನಾಂಕ ಕೂಡ ನಮೂದಿಸಿರಲಿಲ್ಲ. ಅಂದರೆ, ದೇವಸ್ಥಾನದ ಮಂಡಳಿ ಬೇಕಾದಾಗ ಅದಕ್ಕೆ ದಿನಾಂಕವನ್ನು ಬರೆದು ಬ್ಯಾಂಕ್‌ಗೆ ಪ್ರೆಸೆಂಟ್ ಮಾಡಬೇಕಿತ್ತು. ಹುಂಡಿ ಕಾಣಿಕೆಯ ಎಣಿಕೆಯ ವೇಳೆ ಆಗಸ್ಟ್ 23ರಂದು ದೇವಸ್ಥಾನದ ಅಧಿಕಾರಿಗಳಿಗೆ ಈ ಚೆಕ್ ದೊರೆತಿದೆ.

ಅನಿರೀಕ್ಷಿತವಾಗಿ ಇಷ್ಟು ದೊಡ್ಡ ಮೊತ್ತದ ಕಾಣಿಕೆ ಸ್ವೀಕರಿಸಿದ ನಂತರ, ದೇವಸ್ಥಾನದ ಆಡಳಿತ ಮಂಡಳಿ ಕೂಡ ಇದನ್ನು ಪರಿಶೀಲನೆ ಮಾಡಿಯೇ ಬ್ಯಾಂಕ್‌ಗೆ ಹಾಕುವ ತೀರ್ಮಾನ ಮಾಡಿತ್ತು. ಅದಕ್ಕಾಗಿ ದೇವಸ್ಥಾನದ ಅಧಿಕಾರಿಗಳು ಎಂವಿಪಿ ಕಾಲೋನಿಯಲ್ಲಿರುವ ಕೋಟಕ್ ಬ್ಯಾಂಕ್‌ನ ಶಾಖೆಯನ್ನು ತಕ್ಷಣವೇ ಸಂಪರ್ಕಿಸಿದರು. ಬೊಡ್ಡೆಪಲ್ಲಿ ರಾಧಾಕೃಷ್ಣ ಅವರ ಹೆಸರಿನ ಖಾತೆ ಸಂಖ್ಯೆ 8313295434ರಿಂದ ಬಂದ ಚೆಕ್‌ನ ಅಕೌಂಟ್‌ನಲ್ಲಿ ಕೇವಲ 17 ರೂ. ಇದೆ ಎಂದು ಬ್ಯಾಂಕ್‌ನವರು ದೃಢಪಡಿಸಿದ್ದಾರೆ. ಚೆಕ್‌ನ ಫೋಟೋ ಸಾಮಾಜಿಕ ಮಾಧ್ಯಮದಲ್ಲಿ ಹರಿದಾಡುತ್ತಿದೆ. ಚೆಕ್‌ಗೆ ಬೊಡ್ಡೆಪಲ್ಲಿ ರಾಧಾಕೃಷ್ಣ ಸಹಿ ಹಾಕಿದ್ದರು. ಕೋಟಕ್ ಮಹೀಂದ್ರಾ ಬ್ಯಾಂಕ್‌ಗೆ ಸೇರಿದ ಈ ಚೆಕ್‌ನಲ್ಲಿ ಭಕ್ತ ದಿನಾಂಕವನ್ನು ನಮೂದಿಸಿಲ್ಲ.




ದಾನಿಗಳನ್ನು ಗುರುತಿಸಲು ದೇವಸ್ಥಾನದ ಅಧಿಕಾರಿಗಳು ಬ್ಯಾಂಕ್‌ಗೆ ಪತ್ರ ಬರೆಯಲು ಯೋಜಿಸುತ್ತಿದ್ದಾರೆ. ದಾನಿಯು ದೇವಾಲಯದ ಅಧಿಕಾರಿಗಳಿಗೆ ಮೋಸ ಮಾಡುವ ಉದ್ದೇಶವನ್ನು ಹೊಂದಿದ್ದರೆ, ಆತನ ವಿರುದ್ಧ ಚೆಕ್‌ಬೌನ್ಸ್ ಪ್ರಕರಣವನ್ನು ಹೂಡಲು ಬ್ಯಾಂಕ್ ಅನ್ನು ವಿನಂತಿಸಬಹುದು ಎಂದು ಮೂಲಗಳು ತಿಳಿಸಿವೆ.

ಇನ್ನು ಭಕ್ತನ 100 ಕೋಟಿ ರೂಪಾಯಿಯ ಚೆಕ್ ಸೋಶಿಯಲ್ ಮೀಡಿಯಾದಲ್ಲಿ ಸಾಕಷ್ಟು ಕಾಮೆಂಟ್ ಗಳಿಗೆ ಕಾರಣವಾಗಿದೆ. ಬಹುಶಃ ಈ ವ್ಯಕ್ತಿ ದೇವರಿಗೆ ಕೋಪ ಬರುತ್ತೋ ಇಲ್ಲವೋ ಅನ್ನೋದನ್ನು ಚೆಕ್ ಮಾಡುತ್ತಿದ್ದಾನೆ ಎಂದು ಕೆಲವರು ಬರೆದಿದ್ದರೆ, ಇನ್ನೂ ಕೆಲವರು ತನ್ನ ಆಸೆಯನ್ನು ಪೂರೈಸುವ ಸಲುವಾಗಿ ದೇವರಿಗೆ ಅಡ್ವಾನ್ಸ್ ಪೇಮೆಂಟ್ ಮಾಡಿರಬಹುದು ಎಂದು ಕಾಮೆಂಟ್ ಮಾಡಿದ್ದಾರೆ. ದೇವರೇ ಸುಮ್ಮನೆ ಪ್ರಗ್ಯಾನ್ ರೋವರ್‌ನ ಚಂದ್ರನ ಮೇಲೆ ಕಳಿಸಿಕೊಟ್ಟಿದ್ದೇವೆ. ನಿನಗೆ ದೋಖಾ ಮಾಡಿದ ಇಂಥವನನ್ನು ಕಳಿಸಬೇಕಿತ್ತು ಎಂದು ಇನ್ನೊಬ್ಬರು ಟ್ವೀಟ್ ಮಾಡಿದ್ದಾರೆ. ಬಂದರು ನಗರ ವಿಶಾಖಪಟ್ಟಣದ ಸಿಂಹಾಚಲಂ ಬೆಟ್ಟದ ಮೇಲಿರುವ ಶ್ರೀ ವರಾಹಲಕ್ಷ್ಮಿ ನರಸಿಂಹ ಸ್ವಾಮಿ ದೇವಸ್ಥಾನವು ಆಂಧ್ರಪ್ರದೇಶದ ಪ್ರಸಿದ್ಧ ದೇವಾಲಯಗಳಲ್ಲಿ ಒಂದಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸುತ್ತೂರು ಹಿರಿಯ ಶ್ರೀಗಳ ಜನ್ಮದಿನ

ಮೃಗಾಲಯ ಪ್ರಾಣಿ-ಪಕ್ಷಿಗಳಿಗೆ ಆಹಾರ ಪೂರೈಸಲು 1 ಲಕ್ಷ ರೂ. ದೇಣಿಗೆ



ಮೈಸೂರು,ಆ.25(ಎಂಟಿವೈ)- ಸುತ್ತೂರು ಮಠದ ಹಿರಿಯ ಸ್ವಾಮೀಜಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ ಜನ್ಮದಿನದ ಅಂಗವಾಗಿ ಮೈಸೂರು ಮೃಗಾಲಯದಲ್ಲಿರುವ ಎಲ್ಲಾ ಪ್ರಾಣಿ-ಪಕ್ಷಿಗಳಿಗೆ ಒಂದು ದಿನದ ಆಹಾರ ಪೂರೈಸಲು ಸುತ್ತೂರು ಮಠದ ವತಿಯಿಂದ ಒಂದು ಲಕ್ಷ ರೂ. ದೇಣಿಗೆ ನೀಡಲಾಯಿತು.

ಮೈಸೂರು ಮೃಗಾಲಯದ ಆವರಣದಲ್ಲಿ ಶುಕ್ರವಾರ ಬೆಳಗ್ಗೆ ನಡೆದ ಕಾರ್ಯಕ್ರಮದಲ್ಲಿ ವಿದ್ಯಾಪೀಠದ ಕಾರ್ಯದರ್ಶಿ ಎಸ್.ಶಿವಕುಮಾರ ಸ್ವಾಮಿ, ಪ್ರೊ.ಬಿ.ನಿರಂಜನಮೂರ್ತಿ ಅವರು ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ ಹಾಗೂ ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಅವರಿಗೆ ಒಂದು ಲಕ್ಷ ರೂ. ಮೊತ್ತದ ಚೆಕ್ ವಿತರಿಸಿದರು.

ಸುತ್ತೂರು ಕ್ಷೇತ್ರದ 23ನೇ ಜಗದ್ಗುರುಗಳಾದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿ ಅವರ 108ನೇ ಜಯಂತಿ ಕಾರ್ಯಕ್ರಮದ ಅಂಗವಾಗಿ ಪ್ರತಿ ವರ್ಷವೂ ಒಂದು ದಿನ ಮೃಗಾಲಯದ ಪ್ರಾಣಿ-ಪಕ್ಷಿಗಳಿಗೆ ಆಹಾರ ಪೂರೈಕೆಗೆ ದೇಣಿಗೆ ನೀಡಲಾಗುತ್ತಿದೆ. ಆ.29ರಂದು ಶ್ರೀ ರಾಜೇಂದ್ರ ಸ್ವಾಮೀಜಿಗಳ ಜಯಂತಿ ಕಾರ್ಯಕ್ರಮವನ್ನು ಆಚರಿಸಲಾಗುತ್ತಿದ್ದು, ಆ ದಿನ ಪ್ರಾಣಿ-ಪಕ್ಷಿಗಳಿಗೆ ಆಹಾರ ಪೂರೈಸಲು ದೇಣಿಗೆ ನೀಡಲಾಗಿದೆ. ರಾಜೇಂದ್ರ ಶ್ರೀಗಳು ಪ್ರಾಣಿ-ಪಕ್ಷಿಗಳ ಪ್ರಿಯರೂ ಆಗಿರುವುದರಿಂದ ಪ್ರತಿವರ್ಷವೂ ಮೃಗಾಲಯದ ಪ್ರಾಣಿ-ಪಕ್ಷಿಗಳಿಗೆ ಆಹಾರ ಪೂರೈಕೆ ನೆರವು ನೀಡಲಾಗುತ್ತಿದೆ.



ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ಬಿಜೆಪಿ ಮುಖಂಡ ಜಯಪ್ರಕಾಶ್ ಗೌಡ ಅವರು 12 ಮಂದಿ ಪೌರಕಾರ್ಮಿಕ ಮಹಿಳೆಯರನ್ನು ತಮ್ಮ ಮನೆಗೆ ಆಹ್ವಾನಿಸಿ ರೇಷ್ಮೆ ಸೀರೆ ಹಾಗೂ ಬಾಗಿನ ವಿತರಿಸುವ ಮೂಲಕ ಹಬ್ಬ ಆಚರಿಸಿದರು.

ವಲಸಿಗರಿಂದಲೂ ಬೆಂಗಳೂರು ಉದ್ಯಮ ಕ್ಷೇತ್ರ ಬೆಳೆದಿದೆ

ಕೇರಳ ಮೂಲದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ನಾರಾಯಣ ಅಭಿಮತ

ಮೈಸೂರು, ಆ.25(ಸಿಎನ್)-ಬೆಂಗಳೂರು ಕೇವಲ ಮೂಲ ನಿವಾಸಿಗಳಿಂದ ಅಭಿವೃದ್ಧಿ ಹೊಂದಿಲ್ಲ. ವಲಸಿಗರಿಂದಲೂ ಬೆಂಗಳೂರು ಉದ್ಯಮ ಕ್ಷೇತ್ರ ಬೆಳೆದು ನಿಂತಿದೆ. ವಾಸ್ತವ ಸಂಗತಿಯನ್ನು ಎಲ್ಲರೂ ಒಪ್ಪಿಕೊಳ್ಳಬೇಕು ಎಂದು ಕೇರಳ ಮೂಲದ ನಿವೃತ್ತ ಪ್ರಾಧ್ಯಾಪಕ ಡಾ.ಡಿ.ನಾರಾಯಣ ಅಭಿಪ್ರಾಯಪಟ್ಟರು.



ನಗರದ ಮಾನಸಗಂಗೋತ್ರಿಯಲ್ಲಿರುವ ವಿಶ್ವಜ್ಞಾನಿ ಭವನದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್.ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರ, ಡಾ.ಬಿ.ಆರ್.ಅಂಬೇಡ್ಕರ್ ಪೀಠ, ಮಾನಸ ಗಂಗೋತ್ರಿ ಮತ್ತು ಇಂಡಿಯನ್ ಪಾಲಿಟಿ ಫೋರಂ ವತಿಯಿಂದ ಶುಕ್ರವಾರ ಆಯೋಜಿಸಿದ್ದ 'ಕ್ಷೇತ್ರ ಪುನರ್ವಿಂಗಡಣೆ, ಅಂತರ ರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ವಿಷಯ ಕುರಿತು ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಅಂದಿನಿಂದ ಇಂದಿನವರೆಗೆ ಯಾವ ರಾಜ್ಯವೂ ಕೂಡ ಉದ್ಯೋಗ ಸೃಷ್ಟಿ ಮಾಡುತ್ತಿಲ್ಲ. ರಾಜಕೀಯ ಪಕ್ಷಗಳು ಅವರದೇ ಆದ ಕೆಲಸಗಳಲ್ಲಿ ಮುಳುಗಿರುತ್ತಾರೆ. ಅವರಿಗೆ ಉದ್ಯೋಗ ಸೃಷ್ಟಿಸಲು ಸಮಯ ಎಲ್ಲಿದೆ ಹೇಳಿ.? ಸೌಜನ್ಯಕ್ಕಾದರೂ ನೆರೆ ರಾಜ್ಯಗಳ ಮುಖ್ಯಮಂತ್ರಿಗಳು, ಪಕ್ಕದ ಮುಖ್ಯಮಂತ್ರಿಗಳೊಡನೆ ಮಾತನಾಡಲೂ ಸಮಯವಿಲ್ಲ. ಒಬ್ಬರಿಗೊಬ್ಬರು ಹೆಗಲು ನೀಡಿದರೆ ತಾನೇ ಏನಾದರು ಸಾಧಿಸಲು ಸಾಧ್ಯ. ಅಯಾ ರಾಜ್ಯಗಳ ಅಭಿವೃದ್ಧಿ ದೃಷ್ಟಿಯಿಂದ ಪರಸ್ಪರ ಚರ್ಚೆ ಅಗತ್ಯವಾಗಿದೆ ಎಂದರು.

ಈಗ ಬೆಳೆದಿರುವಂಥ ಬೆಂಗಳೂರು ವಲಸಿಗರಿಂದಲೂ ಅಭಿವೃದ್ಧಿಯಾಗಿದೆ. ವಾಸ್ತವವನ್ನು ಅರ್ಥ ಮಾಡಿಕೊಳ್ಳಬೇಕು ಅಷ್ಟೆ. ಕೋವಿಡ್ ಸಂದರ್ಭದಲ್ಲಿ ವಲಸಿಗರು ತಮ್ಮ ಸ್ವಗ್ರಾಮಗಳಿಗೆ ತೆರಳಿದ್ದರು. ಆಗ ರಾಜ್ಯದ ಆರ್ಥಿಕತೆ ಕುಸಿತ ಕಂಡಿತ್ತು ವಲಸಿಗರು ತಮ್ಮ ಊರುಗಳಿಂದ ಬಂದ ಕೂಡಲೇ ರಾಜ್ಯಗಳ ಅಭಿವೃದ್ಧಿ ಸೂಸೂಸಿ ಹೆಚ್ಚಾಯಿತು. ಹಾಗಾಗಿ ನಾವೆಲ್ಲಾ ಒಂದೇ ಎಂಬ ಮನೋಭಾವ ಬೆಳೆಸಿಕೊಳ್ಳಬೇಕು ಎಂದರು.

ಜಿಎಸ್‌ಟಿ(GST)ಯಿಂದ ಬರುವ ಆಧಾಯವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅರ್ಧ ಹಂಚಿಕೊಳ್ಳಬೇಕು. ಆದರೆ 60:40 ಸೂತ್ರದ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತದೆ. ಎಲ್ಲಾ ರಾಜ್ಯಗಳ ಆರ್ಥಿಕ ತಜ್ಞರ ಅಭಿಪ್ರಾಯದಂತೆ ಜಿಎಸ್‌ಟಿ ಅನ್ನು ಒಪ್ಪಿ ನಡೆದಿದ್ದೇವೆ. ಹಣ ಹಂಚಿಕೆ ವಿಚಾರದಲ್ಲಿ ಕೊಂಚ ಆ ಕಡೆ ಈ ಕಡೆ ಆದರೂ ಒಪ್ಪಿಕೊಳ್ಳಬೇಕು. ಏಕೆಂದರೆ ಆ ಹಣವನ್ನು ಸಂಕಷ್ಟ ಸಂದರ್ಭದಲ್ಲಿ ಪುನಃ ಜನರಿಗಾಗಿಯೇ ಬಳಸಲಾಗುತ್ತದೆ ಎಂದರು.

ಸ್ವಾತಂತ್ರ್ಯದ ನಂತರ ಕಳೆದ ಆರು ದಶಕಗಳಲ್ಲಿ, ಭಾರತೀಯ ಆರ್ಥಿಕತೆಯ ದೀರ್ಘಾವಧಿಯ ಬೆಳವಣಿಗೆಯ ದರವು ಕನಿಷ್ಠ 5 ಪ್ರತಿಶತದಷ್ಟು ಮಧ್ಯಮವಾಗಿದೆ. ಕಳೆದ ಎರಡು ದಶಕಗಳಲ್ಲಿ ಜನಸಂಖ್ಯಾ ಬೆಳವಣಿಗೆಯ ದರದಲ್ಲಿ ಗಮನಾರ್ಹವಾದ ಇಳಿಕೆ ಕಂಡುಬಂದಿದೆ. ಇದು ತಲಾ ಆದಾಯದ ತ್ವರಿತ ಬೆಳವಣಿಗೆಗೆ ಕಾರಣವಾಯಿತು. ಆದರೆ ಒಟ್ಟಾರೆ ಭಾರತೀಯ ಆರ್ಥಿಕತೆಯ ಈ ಸಕಾರಾತ್ಮಕ ವಿವರಣೆಯು ಸ್ವಲ್ಪಮಟ್ಟಿಗೆ ತಪ್ಪುದಾರಿಗೆಳೆಯುವಂತಿದೆ. ಏಕೆಂದರೆ ಈ ಬೆಳವಣಿಗೆಯ ಪ್ರಕ್ರಿಯೆಯ ಇತ್ತೀಚಿ ಫಲಿತಾಂಶಗಳು ತುಂಬಾ ತಿರುಚಲ್ಪಟ್ಟಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಸಂವಾದದಲ್ಲಿ ಚೆನ್ನೈ ಅಭಿವೃದ್ಧಿ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಪ್ರೊ.ಕೆ.ವಿ. ನಟರಾಜು, ಸಕಾಲ ಸ್ಪಂದನ ಮೈಸೂರು ಅಧ್ಯಕ್ಷ ಪ್ರೊಆರ್.ಎಂ.ಚಿಂತಾಮಣಿ ಸೇರಿದಂತೆ ಸಾಹಿತಿಗಳು, ಬೋಧಕರು, ಬೋಧಕೇತರರು, ವಿದ್ಯಾರ್ಥಿಗಳು ಭಾಗಿಯಾಗಿದ್ದರು.

ಜಿಎಸ್‌ಟಿ ಜಾರಿಗೆ ತಂದದ್ದು ಅಪ್ರಸ್ತುತ

ಜಿಎಸ್‌ಟಿ ವಿಚಾರ ಪ್ರಸ್ತಾಪಿಸುತ್ತಿದ್ದಂತೆ ವ್ಯಕ್ತಿಯೋರ್ವ ಆಕ್ಷೇಪ ವ್ಯಕ್ತಪಡಿಸಿ, 'ಮನಮೋಹನ್ ಸಿಂಗ್ ಅವರು ಭಾರತದ ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಜಿಎಸ್‌ಟಿ ತರಲು ಸಾರಸಗಟಾಗಿ ನಿರಾಕರಿಸಿದ್ದರು. ಆದರೆ ಕರ್ನಾಟಕದಲ್ಲಿ ಅದೇ ಪಕ್ಷದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಕೇಂದ್ರ ಸರ್ಕಾರದ ಜಿಎಸ್‌ಟಿ ನಿಯಮ ಒಪ್ಪಿ ರಾಜ್ಯದಲ್ಲಿ ಅಳವಡಿಸಿಕೊಂಡರು. ಆದರೆ ಜಿಎಸ್‌ಟಿ ಹೆಸರಲ್ಲಿ ಲೂಟಿ ನಡೆಯುತ್ತಿದ್ದು ಜಿಎಸ್‌ಟಿಯಿಂದ ತಪ್ಪಿಸಿಕೊಳ್ಳಲು ಅನೇಕ ವಾಮಮಾರ್ಗಗಳು ಇವೆ. ಇದು ಯಾರ ಗಮನಕ್ಕೆ ಬಾರದಿರುವುದು ದುರಾದೃಷ್ಟಕರ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಮೃಗಾಲಯದಲ್ಲಿ ಒರಾಂಗೂಟಾನ್ ಮನೆ ಉದ್ಘಾಟನೆ



ಮೈಸೂರು,ಆ.25(ಎಂಟಿವೈ)- ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ಒರಾಂಗೂಟಾನ್ ಪ್ರಾಣಿಗಳ ವಿಹಾರದ ಆವರಣವನ್ನು ಉದ್ಘಾಟಿಸಲಾಯಿತು.

ಬ್ಯಾಂಕ್ ನೋಟ್ ಪೇಪರ್ ಮಿಲ್ ಇಂಡಿಯಾ ಪ್ರೈ.ಲಿ (ಬಿಎನ್‌ಪಿಎಂಐ) ಸಂಸ್ಥೆಯು ಸಿಎಸ್‌ಆರ್ ಫಂಡ್‌ನಲ್ಲಿ 99.20 ಲಕ್ಷ ರೂ. ವೆಚ್ಚದಲ್ಲಿ ಮೃಗಾಲಯದಲ್ಲಿ ಒರಾಂಗೂಟಾನ್‌ಗಳಿಗೆ ಮನೆ ಹಾಗೂ ವಿಹಾರದ ಆವರಣವನ್ನು ನಿರ್ಮಿಸಿದ್ದು, ಅದನ್ನು ಶುಕ್ರವಾರ ಬೆಳಗ್ಗೆ ಉದ್ಘಾಟಿಸುವ ಮೂಲಕ ಒರಾಂಗೂಟಾನ್ ಪ್ರಾಣಿಗಳನ್ನು ಪ್ರವಾಸಿಗರ ವೀಕ್ಷಣೆಗೆ ಬಿಡಲಾಯಿತು.

ಈಗಾಗಲೇ ಮೊದಲ ಹಂತದಲ್ಲಿ ಎರಡು ಒರಾಂಗೂಟಾನ್‌ಗಳಿಗೆ ವಿಶ್ರಾಂತಿ ಗೃಹ ಹಾಗೂ ಆವರಣವನ್ನು ನಿರ್ಮಿಸಲಾಗಿತ್ತು. ಮೃಗಾಲಯದಲ್ಲಿರುವ ನಾಲ್ಕು ಒರಾಂಗೂಟಾನ್‌ಗಳನ್ನು ಪ್ರತ್ಯೇಕ ಸಮಯದಲ್ಲಿ ಪ್ರವಾಸಿಗರ ವೀಕ್ಷಣೆಗೆ ಬಿಡಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ಆ ಮನೆಯ ಪಕ್ಕದಲ್ಲೇ ಬಿಎನ್‌ಪಿಎಂಐ ಸಂಸ್ಥೆಯಿಂದ ಸಿಎಸ್‌ಆರ್ ಯೋಜನೆಯಡಿ ಎರಡನೇ ಹಂತದ ಪ್ರಾಣಿಗಳ ಕೊಠಡಿಯನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿತ್ತು. ಕಾಮಗಾರಿ ಪೂರ್ಣಗೊಂಡ ಹಿನ್ನೆಲೆಯಲ್ಲಿ ಒರಾಂಗೂಟಾನ್ ಮನೆಯನ್ನು ಅನಾವರಣಗೊಳಿಸಲಾಯಿತು.

ಈ ಸಂದರ್ಭದಲ್ಲಿ ಬಿಎನ್‌ಪಿಎಂಐ ಹಿರಿಯ ಪ್ರಧಾನ ವ್ಯವಸ್ಥಾಪಕ ಕೆ.ಧರಣಿ ಕುಮಾರ್, ತಾಂತ್ರಿಕ ವಿಭಾಗದ ಹಿರಿಯ ಪ್ರಧಾನ ವ್ಯವಸ್ಥಾಪಕ ಅನಂತ ಹೆಗ್ಡೆ, ಮಾನವ ಸಂಪನ್ಮೂಲ ವಿಭಾಗದ ಹಿರಿಯ ಪ್ರಧಾನ ವ್ಯವಸ್ಥಾಪಕ ಅಭಯ್ ಕುಮಾರ್, ಮೃಗಾಲಯ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಬಿ.ಪಿ.ರವಿ, ಮೃಗಾಲಯದ ಕಾರ್ಯನಿರ್ವಾಹಕ ನಿರ್ದೇಶಕ ಡಿ.ಮಹೇಶ್ ಕುಮಾರ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ವಿಶ್ವಕರ್ಮ ಸೇವಾ ಟ್ರಸ್ಟ್ ವಾರ್ಷಿಕೋತ್ಸವ



ಮೈಸೂರು,ಆ.25(ಎಂಟಿವೈ)- ಮೈಸೂರಿನ ಜೆ.ಕೆ.ಮೈದಾನದಲ್ಲಿರುವ ಮೈಸೂರು ಮೆಡಿಕಲ್ ಕಾಲೇಜಿನ ಅಮೃತೋತ್ಸವ ಭವನದಲ್ಲಿ ಆ.27ರಂದು ಬೆಳಗ್ಗೆ 11ಕ್ಕೆ ವಿಶ್ವಕರ್ಮ ಸೇವಾ ಟ್ರಸ್ಟ್ ವಾರ್ಷಿಕೋತ್ಸವ ಮತ್ತು ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ನಡೆಯಲಿದೆ ಎಂದು ಪ್ರಧಾನ ಕಾರ್ಯದರ್ಶಿ ಕೆಂಡಗಣ್ಣ ವಿಶ್ವಕರ್ಮ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಸಮುದಾಯದ ಸ್ವಾಮೀಜಿ ನೀಲಕಂಠಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸುವ ಕಾರ್ಯಕ್ರಮದಲ್ಲಿ ಶಾಸಕ ಜಿ.ಟಿ. ದೇವೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎನ್. ನಂದಕುಮಾರ್ ಪ್ರತಿಭಾ ಪುರಸ್ಕಾರ ವಿತರಿಸಲಿದ್ದಾರೆ. ಈ ಬಾರಿ ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಗಳಲ್ಲಿ ಶೈಕ್ಷಣಿಕವಾಗಿ ಸಾಧನೆ ಮಾಡಿದ ಸಮುದಾಯದ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುತ್ತಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಿಶ್ವಕರ್ಮ ಟ್ರಸ್ಟ್ ಪದಾಧಿಕಾರಿಗಳಾದ ಆನಂದೂರು ಪುಟ್ಟಸ್ವಾಮಾಚಾರ್, ರಾಮಚಂದ್ರಾಚಾರ್, ರವಿಕುಮಾರ್, ರಾಮಲಿಂಗಾಚಾರ್, ಚಂದ್ರು, ಜನಾರ್ಧನ್ ಇದ್ದರು.

ತಲಕಾಡು ಬಳಿ ಕಾವೇರಿ ನಿಸರ್ಗಧಾಮದಲ್ಲಿ ಈಜಲು ಹೋದ ವಿದ್ಯಾರ್ಥಿ ಕಣ್ಮರೆ

10 ದಿನವಾದರೂ ಪತ್ತೆಯಿಲ್ಲ, ಎನ್‌ಡಿಆರ್‌ಎಫ್ ತುಕಡಿಯ 20 ಯೋಧರು, ಅಗ್ನಿಶಾಮಕ ದಳ, ಪೊಲೀಸರ ಜಂಟಿ ಕಾರ್ಯಾಚರಣೆ





ಮೈಸೂರು, ಆ. 25(ಆರ್‌ಕೆ)- ತನ್ನ ಮೂವರು ಸ್ನೇಹಿತರೊಂದಿಗೆ ಈಜಲು ಹೋಗಿದ್ದ ವಿದ್ಯಾರ್ಥಿಯೋರ್ವ ಕಣ್ಮರೆಯಾಗಿ 10 ದಿನ ಕಳೆದರೂ ಯಾವುದೇ ಸುಳಿವೇ ಸಿಕ್ಕಿಲ್ಲ. ಈ ಘಟನೆ ತಿ.ನರಸೀಪುರ ತಾಲೂಕು, ತಲಕಾಡು ಬಳಿಯ ಕಾವೇರಿ ನಿಸರ್ಗಧಾಮದಲ್ಲಿ ಆಗಸ್ಟ್ 15ರಂದು ಸಂಭವಿಸಿದೆ.

ಉತ್ತರ ಕನ್ನಡ ಜಿಲ್ಲೆ ಹೊನ್ನಾವರ ತಾಲೂಕು ಹಡಿನಬಾಳು ಗ್ರಾಮದ ಮಂಜುನಾಥ ಭಟ್ ಅವರ ಪುತ್ರ ಅಮಿತ್(20) ನಾಪತ್ತೆಯಾದ ವಿದ್ಯಾರ್ಥಿ. ತನ್ನ ಮೂವರು ಸ್ನೇಹಿತರೊಂದಿಗೆ ಪ್ರವಾಸಕ್ಕೆ ಬಂದಿದ್ದ ಆತ ಆಗಸ್ಟ್ 15ರಂದು ತಲಕಾಡು ಬಳಿಯ ಕಾವೇರಿ ನಿಸರ್ಗಧಾಮದಲ್ಲಿ ಈಜಾಡುತ್ತಿದ್ದಾಗ ನೀರಿನ ಸೆಳೆತದಿಂದ ಕಣ್ಮರೆಯಾಗಿದ್ದ.

ಉಳಿದ ಮೂವರನ್ನು ಸ್ಥಳೀಯರು ರಕ್ಷಿಸಿದ್ದರು. ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ್ದ ತಲಕಾಡು ಠಾಣೆ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ನುರಿತ ಈಜುಗಾರರಿಂದ ಶೋಧ' ಕಾರ್ಯಾಚರಣೆ ನಡೆಸಿದ್ದರಲ್ಲದೇ ಡ್ರೋಣ್ ಮೂಲಕವೂ ಪರಿಶೀಲಿಸಿದರೂ ಪತ್ತೆಯಾಗಿಲ್ಲ.

ಈ ಹಿನ್ನೆಲೆಯಲ್ಲಿ ಜಿಲ್ಲಾಡಳಿತವು ಕೊಡಗಿನಲ್ಲಿ ಕ್ಯಾಂಪ್ ಮಾಡಿದ್ದ ಕೇಂದ್ರ ಸರ್ಕಾರದ ಎನ್‌ಡಿಆರ್‌ಎಫ್ ತುಕಡಿಯ 20 ಮಂದಿ ಯೋಧರನ್ನು ಕರೆಸಿ, ಶುಕ್ರವಾರ ಬೆಳಗ್ಗೆ 8 ಗಂಟೆಯಿಂದ ಕಾವೇರಿ ನಿಸರ್ಗಧಾಮದಲ್ಲಿ ನಾಲ್ಕು ರಬ್ಬರ್ ಬೋಟ್‌ಗಳ ಮೂಲಕ ಅಗ್ನಿಶಾಮಕ ದಳ, ಪೊಲೀಸ್ ತಂಡದೊಂದಿಗೆ ನಾಪತ್ತೆಯಾಗಿರುವ ವಿದ್ಯಾರ್ಥಿಯ ಪತ್ತೆಗಾಗಿ ಶೋಧ ನಡೆಸುತ್ತಿದೆ.

ಅವರೊಂದಿಗೆ ಬೆಂಗಳೂರಿನ ಎನ್‌ಡಿಆರ್‌ಎಫ್ ಘಟಕದಿಂದ ನುರಿತ ಈಜುಗಾರರನ್ನೂ ಕರೆಸಿಕೊಂಡು ತಿ.ನರಸೀಪುರ ತಹಸೀಲ್ದಾರ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳು ಪತ್ತೆ ಕಾರ್ಯಾಚರಣೆಯ ಮೇಲ್ವಿಚಾರಣೆ ನಡೆಸುತ್ತಿದ್ದರೂ, ಇಂದು ಸಂಜೆವರೆಗೂ ಯಾವುದೇ ಸುಳಿವು ಸಿಕ್ಕಿಲ್ಲ ಎಂದು ತಲಕಾಡು ಠಾಣೆ ಪೊಲೀಸರು ತಿಳಿಸಿದ್ದಾರೆ.

ಈ ಘಟನೆ ಸಂಭವಿಸಿದ ದಿನ (ಆ. 15)ವೇ ಚಾಮರಾಜನಗರ ಜಿಲ್ಲೆ, ಯಳಂದೂರು ಪಿಎಲ್‌ಡಿ ಬ್ಯಾಂಕ್ ಮ್ಯಾನೇಜರ್ ವಿನೋದ್ ದಾಮೋದರ್ ನಾಯಕ(32) ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದರು. ಘಟನಾ ಸ್ಥಳದಿಂದ ಎಂಟು ಕಿಮೀ ದೂರದ ಕಾವೇರಿಪುರದ ನದಿಯಲ್ಲಿ ಅವರ ದೇಹ ಪತ್ತೆಯಾಗಿತ್ತು. ಆದರೆ ಅಮಿತ್ ದೇಹ ಈವರೆಗೂ ಪತ್ತೆಯಾಗಿಲ್ಲ. ಆ ದಿನ ನೀರಿನ ಹರಿವು ಕಡಿಮೆ ಇತ್ತು. ಇವರೊಂದಿಗಿದ್ದ ಸ್ನೇಹಿತರನ್ನು ಸ್ಥಳೀಯರೇ ರಕ್ಷಿಸಿದರು.

ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ರಾಮರಾಜನ್, ನಂಜನಗೂಡು ಉಪ ವಿಭಾಗದ ಡಿವೈಎಸ್ಪಿ ಗೋವಿಂದ ರಾಜು. ತಲಕಾಡು ಇನ್ಸ್‌ಪೆಕ್ಟರ್ ಆನಂದ್ ಹಾಗೂ ಸಿಬ್ಬಂದಿ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಇಂದಿನಿಂದ ಮೈಸೂರಲ್ಲಿ ಸಿರಿಧಾನ್ಯ ಮೇಳ

ಮೈಸೂರು, ಆ. 25(ಆರ್‌ಕೆ)- ಮೈಸೂರಲ್ಲಿ ಶನಿವಾರದಿಂದ ಎರಡು ದಿನಗಳ ಕಾಲ ಸಿರಿಧಾನ್ಯ ಮೇಳ ನಡೆಯಲಿದೆ.

ಸಹಜ ಸಮೃದ್ಧ ಸಂಸ್ಥೆಯು ಮೈಸೂರಿನ ನಂಜರಾಜ ಬಹದ್ದೂರ್ ಕಲ್ಯಾಣ ಮಂಟಪದಲ್ಲಿ ಆಯೋಜಿಸಿರುವ ಈ ಮೇಳವನ್ನು ಶನಿವಾರ ಮಧ್ಯಾಹ್ನ 3 ಗಂಟೆಗೆ ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳು ಉದ್ಘಾಟಿಸುವರು.



ಅಂತರರಾಷ್ಟ್ರೀಯ ಸಿರಿಧಾನ್ಯ ವರ್ಷಾಚರಣೆ ಅಂಗವಾಗಿ ಸಾರ್ವಜನಿಕರಿಗೆ ಆರೋಗ್ಯ ಮತ್ತು ಪೌಷ್ಟಿಕಾಂಶಯುಕ್ತ ಮೌಲ್ಯಗಳ ಬಗ್ಗೆ ಅರಿವು ಮೂಡಿಸಲು ಆಯೋಜಿಸಿರುವ ಮೇಳದಲ್ಲಿ ಸಿರಿಧಾನ್ಯ ಬೆಳೆಯುವುದು, ಮಳೆ ಆಶ್ರಿತ ಒಣ ಭೂಮಿಯಲ್ಲಿ ಬೆಳೆ ವಿಧಾನದ ಬಗ್ಗೆ ರೈತರಿಗೆ ಮಾಹಿತಿ ನೀಡುವುದು ಮೇಳದ ಮುಖ್ಯ ಉದ್ದೇಶವಾಗಿದೆ.

ಕರ್ನಾಟಕವಲ್ಲದೆ ತಮಿಳುನಾಡು, ಮಹಾರಾಷ್ಟ್ರ, ಛತ್ತೀಸ್‌ಗಢ, ಒಡಿಶಾ ರಾಜ್ಯಗಳ ರೈತರೂ ಸಿರಿಧಾನ್ಯ ಬೆಳೆಯುತ್ತಿದ್ದು, ಬುಡಕಟ್ಟು ಸಮುದಾಯದ ನಾಗಲ್ಯಾಂಡ್, ಮಧ್ಯಪ್ರದೇಶಗಳಲ್ಲೂ ರೈತರು ಈ ಕೃಷಿಯನ್ನು ಅವಲಂಬಿಸಿದ್ದಾರೆ ಎಂದು ಸಹಜ ಸಮೃದ್ಧದ ಕೃಷ್ಣಪ್ರಸಾದ್ ತಿಳಿಸಿದ್ದಾರೆ. ಸುಮಾರು 250 ಬಗೆಯ ಸಿರಿಧಾನ್ಯಗಳನ್ನು ಮೇಳದಲ್ಲಿ ಪ್ರದರ್ಶಿಸಲಿದ್ದು, ಅವುಗಳು ಆರೋಗ್ಯ ರಕ್ಷಣೆಗೆ ಪೂರಕವಾಗಿರುವ ಬಗ್ಗೆ ಮಾಹಿತಿ ನೀಡ ಲಾಗುವುದು ಎಂದು ಅವರು ತಿಳಿಸಿದ್ದಾರೆ.

ಮಧ್ಯಪ್ರದೇಶ, ಛತ್ತೀಸ್‌ಗಢ ರೈತರು ದೇವಧಾನ್ಯ ಫಾರ್ಮರ್ಸ್ ಪ್ರೊಡಕ್ಷನ್‌ನ ಕಂಪನಿಯು ಸಿರಿಧಾನ್ಯ ಬೀಜ, ಬೆಳೆ ಹಾಗೂ ಆರ್ಗಾನಿಕ್ ಪ್ರಾಡಕ್ಟ್‌ಗಳನ್ನು ಮೇಳದಲ್ಲಿ ಮಾರಾಟ ಮಾಡುವರು. ವಿವಿಧ ಹಣ್ಣಿನ ಗಿಡಗಳು, ತರಕಾರಿಗಳು, ಗೆಡ್ಡೆ-ಗೆಣಸು, ನೈಸರ್ಗಿಕ ಎಣ್ಣೆ ಮನೆಯಲ್ಲಿ ತಯಾರಿಸಿದ ಉಪ್ಪಿನಕಾಯಿ, ಕರಕುಶಲ ವಸ್ತುಗಳೂ ಮೇಳದ ಆಕರ್ಷಣೆಯಾಗಲಿದೆ ಎಂದು ಅವರು ತಿಳಿಸಿದರು. ಭಾನುವಾರ ಮಧ್ಯಾಹ್ನ ಸಿರಿಧಾನ್ಯಗಳಿಂದ ಅಡುಗೆ ಸ್ಪರ್ಧೆ, ರಾಗಿ ಮುದ್ದೆ ಸೇವಿಸುವ ಸ್ಪರ್ಧೆಯನ್ನೂ ಏರ್ಪಡಿಸ ಲಾಗಿದ್ದು, ಆಸಕ್ತರು ಹೆಚ್ಚಿನ ಮಾಹಿತಿಗಾಗಿ ಕೆಎಸ್.ಮಂಜು (7090009944) ಅಥವಾ ಕೋಮಲ್ (9880908608) ಅವರನ್ನು ಸಂಪರ್ಕಿಸಬಹುದಾಗಿದೆ.

ಇಂದು ಶ್ರೀ ಆದಿಶಕ್ತಿ ಬಂದಂತಮ್ಮ, ಶ್ರೀ ಕಾಳಮ್ಮ ಅಮ್ಮನವರ ಉತ್ಸವ

ಮೈಸೂರು, ಆ.25(ಎಸ್‌ಪಿಎನ್)- ಶ್ರೀ ಆದಿಶಕ್ತಿ ಬಂದಂತಮ್ಮ ಮತ್ತು ಶ್ರೀ ಕಾಳಮ್ಮ ಸೇವಾ ಸಮಿತಿ ವತಿಯಿಂದ ದೇವಸ್ಥಾನದ 20ನೇ ವಾರ್ಷಿಕ ಕುಂಬಾಭಿಷೇಕ ಹಾಗೂ ದಿವ್ಯ ಬ್ರಹ್ಮ ರಥೋತ್ಸವದ ಪ್ರಯುಕ್ತ ನಾಳೆ (ಆ.26) ಅಮ್ಮನವರ ಉತ್ಸವ ಮೂರ್ತಿಗೆ ವಿಶೇಷ ಅಲಂಕಾರ ಮಾಡಿ ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತ ಮೆರವಣಿಗೆ ನಡೆಸಲು ತೀರ್ಮಾನಿಸಲಾಗಿದೆ.



ಶನಿವಾರದಂದು ಕನ್ನೇಗೌಡನ ಕೊಪ್ಪಲು ಸುತ್ತಮುತ್ತ ಮಂಗಳವಾದ್ಯದೊಡನೆ, ಜಾನಪದ ತಂಡಗಳ ಮುಖೇನ ಶ್ರೀ ಆದಿಶಕ್ತಿ ಬಂದಂತಮ್ಮ, ಶ್ರೀ ಕಾಳಮ್ಮ ಅಮ್ಮನವರ ಉತ್ಸವ ಮೂರ್ತಿಗಳನ್ನು ಮರದ ತೇರಿನಲ್ಲಿ ಕೂರಿಸಿ ಮೆರವಣಿಗೆ ಮಾಡಲಾಗುತ್ತದೆ. ಅಂದು ಬೆಳಗ್ಗೆ 8.30ಕ್ಕೆ ಈ ಮೆರವಣಿಗೆಯು ದೇವಸ್ಥಾನದಿಂದ ಹೊರಟು ಶ್ರೀ ಬರಕ್ಕಿ ರಾಮೇಗೌಡರ ವೃತ್ತ ತಲುಪುವುದು. ನಂತರ ನ್ಯೂ ಕಾಂತ ರಾಜೇ ಅರಸು ರಸ್ತೆಯಲ್ಲಿ ಮುಖಾಂತರ ಶ್ರೀ ಸಿದ್ದಪ್ಪಾಜಿ ದೇವಸ್ಥಾನ ಮುಂಭಾಗ ತಲುಪಿ, ಅಲ್ಲಿಂದ ಶ್ರೀ ಚಾಮುಂಡೇಶ್ವರಿ ದೇವಸ್ಥಾನ ತಲುಪುವುದು. ನಂತರ ನ್ಯೂ ಕಾಂತರಾಜೇ ಅರಸು ರಸ್ತೆ ಮೂಲಕ ಪುನಃ ದೇವಸ್ಥಾನ ಆವರಣ ತಲುಪುವುದು ಎಂದು ಸಮಿತಿ ಅಧ್ಯಕ್ಷ ಎಸ್.ಬಾಲು, ಕಾರ್ಯದರ್ಶಿ ಡಿ.ರಮೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೆ. 2ರಂದು ಶ್ರಾವಣ ಮಾಸದ ವಿಶೇಷ ಪೂಜೆ

ಮೈಸೂರು,ಆ.25-ಮೈಸೂರಿನ ಶ್ರೀ ಸೂರ್ಯಪುತ್ರ ಶನೈಶ್ಚರಸ್ವಾಮಿ ಸನ್ನಿಧಿ ಟ್ರಸ್ಟ್ ವತಿಯಿಂದ ಸೆ.2ರಂದು 9ನೇ ವರ್ಷದ ಶ್ರಾವಣ ಮಾಸದ ವಾರ್ಷಿಕ ಪೂಜಾ ಮಹೋತ್ಸವವನ್ನು ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8.30ಕ್ಕೆ ಗಣಪತಿ ಪೂಜೆ, ಪುಣ್ಯಾಹ, ಶನೈಶ್ಚರ ಸ್ವಾಮಿಗೆ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ ನೆರವೇರಲಿದ್ದು, 10 ಗಂಟೆಗೆ ಶ್ರೀ ಬೃಹಸ್ಪತಿಯುಕ್ತಿ ಮೇದಾ ದಕ್ಷಿಣಾಮೂರ್ತಿ ಪುರಸ್ಸರ ಶನೈಶ್ಚರ ಹೋಮ ನಡೆಯಲಿದೆ. ನಂತರ 11.30ಕ್ಕೆ ಪೂರ್ಣಾಹುತಿ, ಮಹಾಮಂಗಳಾರತಿ ಮತ್ತ ತೀರ್ಥ ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ.

ಮಧ್ಯಾಹ್ನ 1.30ಕ್ಕೆ ಹರಿಕಥೆ ಮತ್ತು ಅನ್ನದಾಸೋಹ, ಶನಿಪ್ರಭಾವ ಅಥವಾ ರಾಜಾ ವಿಕ್ರಮ ಪೌರಾಣಿಕ ಹರಿಕಥೆ ಇದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಸೆ. 16ರಿಂದ 24ರವರೆಗೆ ಗಣೇಶ ಉತ್ಸವ, ಕಲಾವಿದರಿಂದ ವಿಶೇಷ ಕಾರ್ಯಕ್ರಮ

ಮೈಸೂರು,ಆ.25(ಜಿಎ)-ಮೈಸೂರು ಧಾರ್ಮಿಕ ಪ್ರತಿಷ್ಠಾನದ ವತಿಯಿಂದ ಸೆ16ರಿಂದ 24ರವರೆಗೆ ಮೈಸೂರಿನ ಮಾಧವ ಕೃಪಾದ ಆವರಣದಲ್ಲಿ ಗಣೇಶ ಉತ್ಸವ ಆಯೋಜಿಸಲಾಗುತ್ತಿದೆ ಎಂದು ಪ್ರತಿಷ್ಠಾನದ ಸದಸ್ಯ ಮಂಜುನಾಥ್ ತಿಳಿಸಿದರು.



ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಮಾಧವ ಕೃಪಾದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಣೇಶನ ವಿಗ್ರಹವನ್ನು ಭಾರತದ 21 ಪವಿತ್ರ ಕ್ಷೇತ್ರಗಳ ಮಣ್ಣು ಮತ್ತು ಗಂಗಾ, ಯಮುನಾ, ಗೋದಾವರಿ, ತುಂಗಾ, ಕಾವೇರಿ ಮುಂತಾದ 7 ಪವಿತ್ರ ನದಿಗಳ ತೀರ್ಥವನ್ನು ಬಳಸಿ ಶುದ್ಧ ಪರಿಸರ ಸ್ನೇಹಿ ವಿಧಾನದಲ್ಲಿ ತಯಾರಿಸಲಾಗುತ್ತದೆ ಎಂದರು.

ಸೆ.16 ರಂದು ಸ್ಥಳೀಯ ಕಲಾವಿದರ ಮಾರ್ಗದರ್ಶನದಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಹಕಾರದೊಂದಿಗೆ ಸಾರ್ವಜನಿಕರಿಗೆ ಹಾಗೂ ಶಾಲಾ ಮಕ್ಕಳಿಗಾಗಿ ಸಾಮೂಹಿಕ ಪರಿಸರ ಸ್ನೇಹಿ ಗಣೇಶ ಮೂರ್ತಿ ತಯಾರಿಕಾ ಕಾರ್ಯಾಗಾರ ನಡೆಯಲಿದೆ. ನಗರದ ವಿವಿಧ ಶಾಲೆಗಳಲ್ಲಿ ಈ ವರ್ಷ 5 ಸಾವಿರಕ್ಕೂ ಹೆಚ್ಚು ಮಕ್ಕಳಿಗೆ ಪರಿಸರ ಸ್ನೇಹಿ ಗಣೇಶ ವಿಗ್ರಹವನ್ನು ತಯಾರಿಸುವ ತರಬೇತಿ ನೀಡುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು.

ಮಕ್ಕಳು ನಾವು ತಯಾರಿಸಿದ ಬೀಜ ದುಂಡೆಯು ಗಣೇಶನನ್ನು ತಮ್ಮ ಮನೆಗಳಿಗೆ ಕೊಂಡೊಯ್ದು, ಪೂಜಿಸಿ ನಂತರ ಕುಂಡದಲ್ಲಿ ವಿಸರ್ಜಿಸುತ್ತಾರೆ. ಆ ಗಣೇಶ ವಿಗ್ರಹದ ಒಳಗಿರುವ ಬೀಜದ ಚೆಂಡುಗಳು ಮೊಳೆತು ಬೆಳೆಯುವುದನ್ನು ನೋಡುವ ಮಕ್ಕಳು ಮುಂದೆ ಪರಿಸರ ಪ್ರೇಮಿಗಳಾಗಿ ರೂಪುಗೊಳ್ಳುವುದನ್ನು ಕಾಣುವ ತವಕ ನಮ್ಮದಾಗಿದೆ ಎಂದರು.

ಸಾಂಸ್ಕೃತಿಕ ಕಾರ್ಯಕ್ರಮ: ಮೈಸೂರು ಗಣೇಶ ಉತ್ಸವದಲ್ಲಿ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಹಾಗೂ ಹಲವಾರು ಸ್ಥಳೀಯ ಕಲಾವಿದರು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲಿದ್ದಾರೆ. ಕೊಳಲು, ಸ್ಯಾಕ್ಸೋಫೋನ್, ಸುಗಮ ಸಂಗೀತ, ನೃತ್ಯ ಸೇರಿದಂತೆ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜಿಸಲಾಗಿದೆ ಎಂದು ತಿಳಿಸಿದರು.

ಮನೋಲ್ಲಾಸ ಹಾಗೂ ಜ್ಞಾನಾರ್ಜನೆಯ ಉದ್ದೇಶವಾಗಿ ಮಕ್ಕಳು ಹಿರಿಯರು ಸೇರಿದಂತ ಎಲ್ಲಾ ವಯೋಮಾನದ ನಾಗರಿಕರಿಗೆ ವಿವಿಧ ಸ್ಪರ್ಧೆಗಳು ಕಾರ್ಯಕ್ರಮದುದ್ದಕ್ಕೂ ನಡೆಯಲಿವೆ.

ನಗರದ ಎಲ್ಲ ಸಮುದಾಯದ ಮುಖಂಡರು, ಗಣ್ಯರು, ಜನಸಾಮಾನ್ಯರು ಆಗಮಿಸಿ ಪ್ರತಿದಿನ ವಿನಾಯಕನಿಗೆ ಪೂಜೆಯನ್ನು ನೆರವೇರಿಸಲಿದ್ದಾರೆ. 21 ದಂಪತಿಗಳಿಂದ ಸಾಮೂಹಿಕ ಪೂಜೆ, ಅಥರ್ವಶೀರ್ಷ ಹೋಮ, ಶತ ಮೋದಕ ಹೋಮ, ಶತ ನಾರಿಕೇಳ ಹೋಮ ಸೇರಿದಂತೆ ವಿನಾಯಕನಿಗೆ ಪ್ರತಿನಿತ್ಯ ವಿಶೇಷ ಪೂಜೆಗಳು ನೆರವೇರಲಿವೆ ಎಂದು ಅವರು ವಿವರಿಸಿದರು.

ಮೆರವಣಿಗೆ ಮತ್ತು ವಿಸರ್ಜನೆ: ಮೈಸೂರು ಧಾರ್ಮಿಕ ಪ್ರತಿಷ್ಠಾನದ ಸದಸ್ಯ ಲೋಹಿತ್ ಅರಸ್ ಮಾತನಾಡಿ, ನಗರಾದ್ಯಂತ ಇರುವ ಸುಮಾರು 50 ಪ್ರತಿಷ್ಠಿತ ಗಣೇಶ ಪೆಂಡಾಲ್‌ಗಳು ಸಾಮೂಹಿಕ ಮೆರವಣಿಗೆಯಲ್ಲಿ ಪಾಲ್ಗೊಳ್ಳಲಿವೆ. ಉತ್ಸವದ ಅಂತಿಮ ದಿನವಾದ ಸೆ.24 ರಂದು ಸಾಮೂಹಿಕ ಗಣಹೋಮ ನೆರವೇರಲಿದ್ದು, ಅಂದು ಸಂಜೆ ಮೈಸೂರಿನ ವಿವಿಧ ಬಡಾವಣೆಗಳಿಂದ ಬರುವ ಗಣೇಶ ಮೂರ್ತಿಗಳ ಬೃಹತ್ ಮೆರವಣಿಗೆಯೊಂದಿಗೆ ಸಾಮೂಹಿಕ ವಿಸರ್ಜನೆ ಮಹೋತ್ಸವವನ್ನು ಅರಮನೆಯ ಕೋಟೆ ಆಂಜನೇಯ ದೇವಸ್ಥಾನದ ಮುಂಭಾಗದಲ್ಲಿ ಆಯೋಜಿಸಲಾಗುತ್ತದೆ ಎಂದು ತಿಳಿಸಿದರು.

ಪೋಸ್ಟರ್ ಬಿಡುಗಡೆ : ಇದಕ್ಕೂ ಮುನ್ನ ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಅವರು 21 ಪುಣ್ಯ ಕ್ಷೇತ್ರಗಳ ಮೃತ್ತಿಕೆ, ಸಪ್ತ ನದಿಗಳ ಪವಿತ್ರ ತೀರ್ಥ ಪೂಜೆ ನೆರವೇರಿಸಿ, ಮೈಸೂರು ಗಣೇಶ ಉತ್ಸವದ ಪೋಸ್ಟರ್ ಬಿಡುಗಡೆಗೊಳಿಸಿದರು.

ಈ ವೇಳೆ ಶಾಸಕ ಟಿ.ಎಸ್. ಶ್ರೀವತ್ಸ, ಮೇಯರ್ ಶಿವಕುಮಾರ್, ಮುಖಂಡರಾದ ಕವೀಶ್‌ಗೌಡ, ಆರ್.ವಾಸುವೇದ ಭಟ್, ಗಿರೀಶ್, ರಾಕೇಶ್, ಗಿರೀಶ್‌ಗೌಡ, ಮೈಸೂರು ಧಾರ್ಮಿಕ ಪ್ರತಿಷ್ಠಾನದ ಅಕ್ಷಯ್, ಚರಣ್, ಸದಸ್ಯರಾದ ಎನ್.ಆರ್. ಮಂಜುನಾಥ್, ಲೋಹಿತ್ ಅರಸ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ ಶನಿವಾರ 26 ಆಗಸ್ಟ್ 2023

ಜಿಲ್ಲಾದ್ಯಂತ ಸಂಭ್ರಮದ ವರಮಹಾಲಕ್ಷ್ಮಿ ಹಬ್ಬ ಆಚರಣೆ



ಮಂಡ್ಯ, ಆ.25– ಜಿಲ್ಲೆಯಾದ್ಯಂತ ಶುಕ್ರವಾರ ವರಮಹಾಲಕ್ಷ್ಮಿ ಹಬ್ಬವನ್ನು ಸಾರ್ವಜನಿಕರು ಶ್ರದ್ಧಾಭಕ್ತಿಯಿಂದ ಆಚರಿಸಿದರು.

ಜಿಲ್ಲೆಯ ಹಲವೆಡೆ ಮಹಿಳೆಯರು ಮನೆ ಮನೆಗಳಲ್ಲಿ ಲಕ್ಷ್ಮಿಯನ್ನು ಪ್ರತಿಷ್ಠಾಪಿಸಿ, ವಿಶೇಷ ಅಲಂಕಾರ ಮಾಡಿ, ಪೂಜೆ, ಪುನಸ್ಕಾರ ಮಾಡಿ, ಸಿಹಿ ಊಟ ಹಾಕಿಸುತ್ತಿದ್ದ ದೃಶ್ಯಗಳು ಕಂಡು ಬಂದವು. ಜೊತೆಗೆ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಜಿಲ್ಲೆಯ ವಿವಿಧ ದೇವಾಲಯಗಳಲ್ಲಿ ವಿಶೇಷ ಪೂಜೆ, ಪುನಸ್ಕಾರಗಳನ್ನು ಮಾಡಲಾಯಿತು. ಮಂಡ್ಯ ನಗರದ ಪೇಟೆ ಬೀದಿಯಲ್ಲಿರುವ ಲಕ್ಷ್ಮಿ ದೇಗುಲದಲ್ಲಿ ದೇವರಿಗೆ ವಿಶೇಷ ಅಲಂಕಾರಗೊಳಿಸಿ, ವಿಶೇಷ ಪೂಜೆ ಮಾಡಲಾಯಿತು. ಭಕ್ತರಿಗೆ ಪ್ರಸಾದ ವಿನಿಯೋಗ ಸಹ ಮಾಡಲಾಯಿತು. ಶಾಸಕ ಗಣಿಗ ರವಿಕುಮಾರ್ ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಅದೇ ರೀತಿ ಪೇಟೆ ಬೀದಿಯಲ್ಲಿರುವ ಲಕ್ಷ್ಮಿ ಜನಾರ್ದನ ದೇಗುಲ, ತಾಲೂಕಿನ ಸಾತನೂರಿನಲ್ಲಿರುವ ಲಕ್ಷ್ಮಿ ನರಸಿಂಹಸ್ವಾಮಿ ದೇಗುಲ, ಕಾಳಿಕಾಂಭ ದೇಗುಲ, ಶ್ರೀರಂಗಪಟ್ಟಣದ ನಿಮಿಷಾಂಭ ಹಾಗೂ ಕೋಟೆ ಬೀದಿಯಲ್ಲಿರುವ ಶ್ರೀ ಲಕ್ಷ್ಮಿದೇವಿ ದೇವಸ್ಥಾನದಲ್ಲಿ ಶ್ರೀ ಲಕ್ಷ್ಮಿದೇವಿಗೆ ವಿಶೇಷ ಅಲಂಕಾರ ಮಾಡಿರುವ ದೃಶ್ಯಗಳು ಕಂಡು ಬಂದವು.

ಶ್ರೀರಂಗಪಟ್ಟಣದ ಕಾವೇರಿ ದಡದಲ್ಲಿರುವ ಪ್ರಸಿದ್ದ ನಿಮಿಷಾಂಭ ದೇಗುಲದಲ್ಲಿ ಕಳಶ ಪ್ರತಿಷ್ಠಾಪಿಸುವ ಮೂಲಕ ಲಕ್ಷ್ಮೀದೇವಿ ಪೂಜೆ ನೆರವೇರಿಸಲಾಯಿತು. ದೇವಾಲಯಕ್ಕೆ ಬಂದ ಭಕ್ತರಿಗೆ ಅರಿಸಿನ, ಕುಂಕುಮ, ಬಳೆ, ಬ್ಲೌಸ್ ಪೀಸ್ ವಿತರಣೆ ಮಾಡಲಾಯಿತು. ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಚಾಮುಂಡೇಶ್ವರಿ ದೇವಾಲಯದಲ್ಲಿ ದೇವಿಗೆ ಧನಲಕ್ಷ್ಮಿ ಅಲಂಕಾರ ಮಾಡಲಾಗಿತ್ತು. 2.50 ಲಕ್ಷ ರೂ. ಮೌಲ್ಯದ ನೋಟುಗಳನ್ನು ಬಳಸಿ ದೇವಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. 500, 100, 50, 20 ಹಾಗೂ 10 ರೂ. ಮುಖಬೆಲೆಯ ನೋಟುಗಳಿಂದ ಅಲಂಕರಿಸಿ, ಭಕ್ತರಿಂದಲೇ ಹಣ ಸಂಗ್ರಹಿಸಿ ದೇವಾಲಯದ ಸಿಬ್ಬಂದಿ ಅಲಂಕಾರ ಮಾಡಿದ್ದರು.



ಕಿಕ್ಕೇರಿಯಲ್ಲಿ ಮಹಿಳೆಯರು ವರಮಹಾಲಕ್ಷ್ಮೀ ದೇವಿಯನ್ನು ಕಳಶದೊಂದಿಗೆ ಶುಕ್ರವಾರ ಪ್ರತಿಷ್ಠಾಪಿಸಿ ಪೂಜಿಸಿದರು.

ಪಾಂಡವಪುರ ವರದಿ: ವರಮಹಾಲಕ್ಷ್ಮಿ ಹಬ್ಬವನ್ನು ಪಟ್ಟಣ ಸೇರಿದಂತೆ ತಾಲೂಕಿನಾದ್ಯಂತ ಮಹಿಳೆಯರು ಸಂಭ್ರಮ ಸಡಗರದಿಂದ ಶುಕ್ರವಾರ ಆಚರಣೆ ಮಾಡಿದರು.

ಮಹಿಳೆಯರು ತಮ್ಮ ಮನೆಗಳಲ್ಲಿ ಶುಕ್ರವಾರ ಮುಂಜಾನೆಯಿಂದಲೇ ಪೂಜೆ ಪುನಸ್ಕಾರಗಳೊಂದಿದೆ ವರಮಹಾಲಕ್ಷ್ಮಿ ಮೂರ್ತಿಯನ್ನು ಪ್ರತಿಷ್ಠಾಪಿಸಿ ವಿವಿಧ ಬಗೆಯ ಹೂಗಳಿಂದ ಸಿಂಗರಿ, ವರಮಹಾಲಕ್ಷ್ಮಿಗೆ ಚಿನ್ನಾಭರಣೆ ಧರಿಸಿ, ಹಣ್ಣು ಹಂಪಲು, ಬಳೆಗಳು, ಸೀರೆ, ವಿವಿಧ ಬಗೆಯ ತಿಂಡಿ ತಿನಿಸುಗಳನಿಟ್ಟು ಭಕ್ತಿಯಿಂದ ಪೂಜೆ ಸಲ್ಲಿಸಿದರು. ಮನೆಗಳಿಗೆ ಮಹಿಳೆಯರು, ಹೆಣ್ಣುಮಕ್ಕಳನ್ನು ಕರೆಸಿ ಹರಿಸಿಣ, ಕುಂಕಮ, ಹೂ, ಬಳೆ, ಸಹಿಕೊಟ್ಟು ವರಮಹಾಲಕ್ಷ್ಮಿ ಹಬ್ಬ ಆಚರಣೆ ಮಾಡಿದರು.

ಹಬ್ಬದ ಅಂಗವಾಗಿ ಪಟ್ಟಣದ ಶ್ರೀ ಬನ್ನಾರಿಮಾರಮ್ಮ, ಮಹಾಂಕಾಳೇಶ್ವರಿ, ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ವಿಶೇಷ ಪೂಜೆಪುನಸ್ಕಾರಗಳು ನಡೆದವು. ಮಹಿಳೆಯರು, ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವರ ದರ್ಶನಪಡೆದರು.

ಕಿಕ್ಕೇರಿ ವರದಿ: ಹೋಬಳಿಯಾದ್ಯಂತ ವರಮಹಾಲಕ್ಷ್ಮೀ ಹಬ್ಬ ವಿಜೃಂಭಣೆ ಯಿಂದ ಆಚರಿಸಲಾಯಿತು. ಪಟ್ಟಣದ ಕಿಕ್ಕೇರಮ್ಮ, ಅಂಗಳಪರಮೇಶ್ವರಿ, ಪಾರ್ವತಿದೇವಿ, ಶ್ರವಣನಹಳ್ಳಿಯ ಚಾಮುಂಡೇಶ್ವರಿ, ವಡಕಹಳ್ಳಿಯ ಚಿಕ್ಕಳಮ್ಮ ದೇವಿಗೆ ವಿಶೇಷವಾಗಿ ವಸ್ತ್ರ, ವಿವಿಧ ಆಭರಣ, ನಾನಾ ಸುಗಂಧ ಪುಷ್ಪಗಳಿಂದ ಅಲಂಕರಿಸಲಾಗಿತ್ತು. ದೇವಿಯ ಮುಖವಾಡವನ್ನು ತೆಂಗಿನಕಾಯಿ ಕಳಶಕ್ಕೆ ಧಾರಣೆ ಮಾಡಿ ಪೂಜಿಸಿದರು.

ದೇವಿಗೆ ಪಂಚಾಮೃತಾಭಿಷೇಕ ಮಾಡಿ ಶಾಸ್ತ್ರೋಕವಾಗಿ ದೇವಿಗೆ ಪೂಜಿಸಿದರು. ಕ್ಷೀರ, ಮಧು, ಶರ್ಕರ(ಸಕ್ಕರೆ), ದಧಿ (ಮೊಸರು), ಗೃಥ(ತುಪ್ಪ)ದಲ್ಲಿ ಅಭಿಷೇಕ ನೆರವೇರಿಸಿದರು. ನೈವೇದ್ಯ ಸಮರ್ಪಣೆ ಮಾಡಿದರು. ದೇವಿಗೆ ಪ್ರಿಯವಾದ ಕಡಲೆ ಬೇಳೆ, ಸಿಹಿ ಪೊಂಗಲು, ಹುಗ್ಗೆ, ಚಕ್ಕುಲಿ, ನಿಪ್ಪಟ್ಟು, ಕೋಡಬಳಿ, ಪಾಯಸ, ವಿವಿಧ ಫಲಗಳ ನೈವೇದ್ಯ ಅರ್ಪಿಸಿದರು. ರ್ಪಿಣೆ, ಮಹಾಮಂಗಳಾರತಿ, ದೇವಿವ್ರಥ ಕಥಾ ಪಾರಾಯಣ ಮಾಡಿದರು. ಸುಮಂಗಲಿಯರಿಗೆ ಅರಿಷಿಣ, ಕುಂಕುಮ ನೀಡಿದರು.



ಪಾಂಡವಪುರ ತಾಲೂಕಿನ ಚಿಕ್ಕಮರಳಿ ಗ್ರಾಮದಲ್ಲಿ ವರಮಹಾಲಕ್ಷ್ಮಿ ಹಬ್ಬದ ಅಂಗವಾಗಿ ವರ ಮಹಾಲಕ್ಷ್ಮಿಯನ್ನು ವಿಶೇಷ ವಾಗಿ ಪೂಜಿಸಿರುವುದು.

ಭಾರತೀನಗರ ವರದಿ: ಇಲ್ಲಿನ ಶ್ರೀವೆಂಕಟೇಶ್ವರ ದೇವಸ್ಥಾನದಲ್ಲಿ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ವಿಶೇಷ ಪೂಜಾಕಾರ್ಯಕ್ರಮ ಜರುಗಿತು. ಪದ್ಮಾವತಿ ಮಂಟಪದಲ್ಲಿ ಲಕ್ಷ್ಮಿ ದೇವಿಯನ್ನು ಪ್ರತಿಷ್ಠಾಪಿಸಿ ಶ್ರೀವೆಂಕಟೇಶ್ವರ ಮೂರ್ತಿಯೊಂದಿಗೆ ಶ್ರೀದೇವಿ, ಭೂದೇವಿಯನ್ನು ಮಂಟಪದಲ್ಲಿಟ್ಟು ವಿಶೇಷ ಪೂಜೆ ಸಲ್ಲಿಸಲಾಯಿತು. ಬಂದಂತಹ ಮಹಿಳೆಯರಿಗೆ ಅರಿಶಿಣ, ಕುಂಕುಮ, ಬಳೆ ಮತ್ತು ಸಿಹಿಯನ್ನು ವಿತರಣೆ ಮಾಡಲಾಯಿತು. ಶ್ರೀವೆಂಕಟೇಶ್ವರ ಮೂರ್ತಿಗೂ ಸಹ ವಿಶೇಷವಾಗಿ ಹೂವಿನಿಂದ ಅಲಂಕರಿಸಲಾಗಿತ್ತು. ಭಕ್ತಾಧಿಗಳು ಸರಥಿ ಸಾಲಿನಲ್ಲಿ ನಿಂತು ದರ್ಶನ ಪಡೆದು ಪುನೀತರಾದರು. ಶ್ರೀವೆಂಕಟೇಶ್ವರ ಸೇವಾಟ್ರಸ್ಟ್‌ನ ಪದಾಧಿಕಾರಿಗಳು ಲಕ್ಷ್ಮಿ ಪೂಜಾ ಕಾರ್ಯಕ್ರಮದಲ್ಲಿ ನೇತೃತ್ವ ವಹಿಸಿದ್ದರು.

ಬುದ್ಧಿ ಹೇಳಿದ್ದ ಶಿಕ್ಷಕನಿಗೆ ಲಾಂಗ್ ತೋರಿಸಿ ಬೆದರಿಸಿದ ವಿದ್ಯಾರ್ಥಿ



ನಾಗಮಂಗಲ, ಆ.25– ವಿದ್ಯಾರ್ಥಿ ತರಗತಿಗಳಿಗೆ ಸರಿಯಾಗಿ ಹಾಜರಾಗುತ್ತಿಲ್ಲ ಎಂದು ಪೋಷಕರಿಗೆ ಮಾಹಿತಿ ನೀಡಿದ್ದಕ್ಕೆ ಆಕ್ರೋಶಗೊಂಡ ವಿದ್ಯಾರ್ಥಿ ತನ್ನ ಉಪನ್ಯಾಸಕನಿಗೆ ಲಾಂಗ್ ತೋರಿಸಿ ಬೆದರಿಕೆ ಹಾಕಿದ ಘಟನೆ ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಬಿ.ಜಿ ನಗರ ಡಿಪ್ಲೊಮಾ ಕಾಲೇಜಿನಲ್ಲಿ ನಡೆದಿದೆ.

ಬಿ.ಜಿ ನಗರ ಡಿಪ್ಲೊಮಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ತುಮಕೂರು ಜಿಲ್ಲೆ ಕುಣಿಗಲ್ ತಾಲೂಕಿನ ಅವರೇಗೆರಿ ಗ್ರಾಮದ ಉದಯ್ ಗೌಡ ಎಂಬ ವಿದ್ಯಾರ್ಥಿ ಸರಿಯಾಗಿ ತರಗತಿಗೆ ಹಾಜರಾಗುತ್ತಿರಲಿಲ್ಲ ಹಾಗೂ ಈತನ ವರ್ತನೆಯೂ ಸರಿಯಿಲ್ಲ. ಹೀಗಾಗಿ ಅವನಿಗೆ ಬುದ್ಧಿವಾದ ಹೇಳಿ ಎಂದು ಉಪನ್ಯಾಸಕ ಚಂದನ್ ಎಂಬುವರು ಉದಯ್ ಗೌಡನ ಪೋಷಕರಿಗೆ ತಿಳಿಸಿದ್ದಾರೆ.

ಇದರಿಂದ ಕೋಪಗೊಂಡ ವಿದ್ಯಾರ್ಥಿ ಬೈಕ್‌ನಲ್ಲಿ ಲಾಂಗ್ ಹಿಡಿದು, ಮಾಸ್ಕ್ ಧರಿಸಿ ಬಂದು ಉಪನ್ಯಾಸಕರಿದ್ದ ಕೊಠಡಿಗೆ ತೆರಳಿ ನನ್ನ ವಿಷಯ ತಂದೆ–ತಾಯಿಗೆ ಯಾಕೆ ಹೇಳಿದ್ದು ಎಂದು ಅವಾಜ್ ಹಾಕಿದ್ದಾನೆ. ಇದನ್ನು ಕಂಡ ಇತರ ಉಪನ್ಯಾಸಕರು ಪೊಲೀಸರಿಗೆ ಮಾಹಿತಿ ನೀಡಿದ್ದು, ತಕ್ಷಣವೇ ಕಾಲೇಜಿಗೆ ಆಗಮಿಸಿದ ಪೊಲೀಸರು ಉದಯ್ ಗೌಡನನ್ನು ವಶಕ್ಕೆ ಪಡೆದು ಠಾಣೆಗೆ ಕರೆದೊಯ್ದರು. ನಂತರ ಆತನ ಪೋಷಕರನ್ನು ಕರೆಸಿ, ವಿದ್ಯಾರ್ಥಿಗೆ ಬುದ್ಧಿವಾದ ಹೇಳಿ ತಪ್ಪೊಪ್ಪಿಗೆ ಪತ್ರ ಬರೆಸಿಕೊಂಡು ಕಳುಹಿಸಿದ್ದಾರೆ.

ಮನ್‌ಮುಲ್‌ನಿಂದ ಹೊಸ ಉತ್ಪನ್ನಗಳು ಮಾರುಕಟ್ಟೆಗೆ



ಮಂಡ್ಯ, ಆ.25– ಜಿಲ್ಲಾ ಹಾಲು ಒಕ್ಕೂಟದಿಂದ ನಂದಿನಿ ಪನ್ನೀರ್ ನಿಪ್ಪಟ್ಟು ಹಾಗೂ ನಂದಿನಿ ಸ್ಪೆಷಲ್ ಹಾಲಿನ ಬರ್ಫಿ ನೂತನ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಲಾಯಿತು.

ಗೆಜ್ಜಲಗೆರೆಯಲ್ಲಿರುವ ಮನ್‌ಮುಲ್‌ನ ಡಾ.ವರ್ಗೀಸ್ ಕುರಿಯನ್ ಸಭಾಂಗಣದಲ್ಲಿ ಒಕ್ಕೂಟದ ಅಧ್ಯಕ್ಷ ಬಿ.ಬೋರೇಗೌಡ ನೂತನ ಉತ್ಪನ್ನ ಬಿಡುಗಡೆ ಮಾಡಿದರು. ಬಳಿಕ ಮಾತನಾಡಿದ ಅವರು, ಮಂಡ್ಯ ಹಾಲು ಒಕ್ಕೂಟದಿಂದ ಹೊಸ ಉತ್ಪನ್ನ ಮಾರುಕಟ್ಟೆಗೆ ಬರುತ್ತಿದೆ. ಈಗಾಗಲೇ ನಂದಿನಿ ತುಪ್ಪ ಸಾಕಷ್ಟು ಪ್ರಮಾಣದಲ್ಲಿ ಖರೀದಿಯಾಗುತ್ತಿವೆ. ಇದು ಕೂಡ ಹಾಗೆಯೇ ಖರೀದಿಯಾಗಿ ಜನಮನ್ನಣೆಗಳಿಸಲಿದೆ ಎಂಬ ವಿಶ್ವಾಸವಿದೆ ಎಂದರು.

ಮನ್‌ಮುಲ್‌ನಿಂದ ಇನ್ನು ಹೊಸ ಹೊಸ ರೀತಿಯಲ್ಲಿ ಉತ್ಪನ್ನ ಕೊಡುತ್ತೇವೆ. ಹೊಸ ಉತ್ಪನ್ನ ತಯಾರಿಕೆಯಿಂದ ಮನ್‌ಮುಲ್‌ಗೆ ಮತ್ತಷ್ಟು ಆದಾಯ ಬರಲು ಸಾಧ್ಯವಾಗಿದೆ. ಸಾರ್ವಜನಿಕರು ಮನ್‌ಮುಲ್ ಪ್ರಾಡಕ್ಟ್‌ಗಳನ್ನು ಮತ್ತಷ್ಟು ಖರೀದಿಸಿ ಸಹಕರಿಸುವಂತೆ ಮನವಿ ಮಾಡಿದರು.

ನಂದಿನಿ ಉತ್ಪನ್ನದ ವಿಶೇಷತೆ: ನಂದಿನಿ ಸ್ಪೆಷಲ್ ಹಾಲಿನ ಬರ್ಫಿಯು ಹಾಲಿನ ಪುಡಿ, ತುಪ್ಪ, ಸಕ್ಕರೆ ಮತ್ತು ಡ್ರೈ ಫ್ರೂಟ್‌ನೊಂದಿಗೆ ತಯಾರಿಸಿದ ಸ್ವಾದಿಷ್ಟ ಸಿಹಿ ಉತ್ಪನ್ನವಾಗಿದೆ. ಇದು ವಿಟಮಿನ್ ಎ, ಬಿ ಮತ್ತು ಡಿ, ಕ್ಯಾಲ್ಸಿಯಂ ಹಾಗೂ ಪ್ರೋಟೀನ್ ಮುಂತಾದ ಪೌಷ್ಠಿಕಾಂಶಗಳನ್ನು ಹೊಂದಿದೆ.

ಇದು ರಾಸಾಯನಿಕ ಮುಕ್ತ ಸಿಹಿ ತಿಂಡಿಯಾಗಿದ್ದು ಶಕ್ತಿಯ ಉತ್ತಮ ಮೂಲವಾಗಿದೆ. 200 ಗ್ರಾಂ ತೂಕದ ಪ್ಯಾಕೆಟ್‌ಗಳಲ್ಲಿ 110ರೂ ಗಳಿಗೆ ಗ್ರಾಹಕರಿಗೆ ದೊರಕಲಿದೆ. ನಂದಿನಿ ಪನ್ನೀರ್ ನಿಪ್ಪಟ್ಟು ಒಂದು ಕುರುಕಲು ಖಾರದ ರುಚಿಕರ ತಿಂಡಿ,ಇದೊಂದು ಅಂಟು ಹಾಗೂ ರಾಸಾಯನಿಕ ಮುಕ್ತ ಖಾರದ ತಿಂಡಿಯಾಗಿದೆ

ಪನ್ನೀರ್ ನಿಪ್ಪಟ್ಟನ್ನು ನಂದಿನಿ ಪನ್ನೀರ್, ಅಕ್ಕಿ ಹಿಟ್ಟು, ಉಪ್ಪು, ಉರಿಗಡಲೆ ಸಂಸ್ಕರಿಸಿದ ಸೂರ್ಯ ಕಾಂತಿ ಎಣ್ಣೆ, ಬಿಳಿ ಎಳ್ಳು, ಜೀರಿಗೆ, ಒಣಮೆಣಸಿನ ಕಾಯಿ, ಒಣ ಕೊಬ್ಬರಿ ಪುಡಿ ಉಪಯೋಗಿಸಿ ತಯಾರಿಸಲಾಗಿದೆ. ಪ್ರಥಮ ಬಾರಿಗೆ ನಂದಿನಿ ಪನ್ನೀರ್ ಬಳಸಿ ತಯಾರಿಸಲಾಗಿರುವ ವಿಶಿಷ್ಟ ಮಾದರಿಯ ಗರಿಗರಿಯಾದ ನಿಪ್ಪಟ್ಟು ಇದಾಗಿದ್ದು ಇದನ್ನು ಟೀ ಟೈಮ್ ಸ್ನ್ಯಾಕ್ಸ್ ಆಗಿ ಸವಿಯಬಹುದು. ಇದು ಪ್ರೋಟೀನ್, ಫೈಬರ್, ವಿಟಮಿನ್ ಬಿ1, ಕಬ್ಬಿಣ ಅಂಶ, ಕ್ಯಾಲ್ಸಿಯಂ ಮತ್ತು ರಂಜಕ ಮುಂತಾದ ಪೌಷ್ಠಿಕಾಂಶಗಳನ್ನು ಹೊಂದಿದೆ.40 ಗ್ರಾಂ ತೂಕದ ಪ್ಯಾಕೆಟ್‌ಗಳಲ್ಲಿ 25 ರೂಗಳಿಗೆ ಗ್ರಾಹಕರಿಗೆ ದೊರಕಲಿದೆ. ಕಾರ್ಯಕ್ರಮದಲ್ಲಿ ಮನ್‌ಮುಲ್ ಉಪಾ ಧ್ಯಕ್ಷ ರಘುನಂದನ್, ನಿರ್ದೇಶಕರಾದ ಉಮ್ಮಡಳ್ಳಿ ಶಿವಪ್ಪ, ರೂಪ, ಹಣಕಾಸು ವ್ಯವಸ್ಥಾಪಕಿ ಪುಷ್ಪಲತಾ ಸೇರಿದಂತೆ ಇನ್ನಿತರರು ಇದ್ದರು.

ಅರ್ಜಿ ಆಹ್ವಾನ

ಮಂಡ್ಯ, ಆ.25– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಚಿನಕುರಳಿಯಲ್ಲಿ 2023ನೇ ಸಾಲಿಗೆ ನೇರ ಪ್ರವೇಶಾತಿ ಆರಂಭಗೊಂಡಿದ್ದು, ಆಫ್‌ಲೈನ್ ಮೂಲಕ ಅರ್ಜಿ ಭರ್ತಿ ಮಾಡಿ ಪ್ರವೇಶ ಪಡೆಯಲು ಆ.31 ಕೊನೆ ದಿನ ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿನಕುರಳಿ ಉಪತಹಶೀಲ್ದಾರ್ ರಾಮಚಂದ್ರು ನಿಧನ

ಕೆ.ಆರ್.ಪೇಟೆ, ಆ.25– ಚಿನಕುರಳಿ ಉಪ ತಹಶೀಲ್ದಾರ್ ರಾಮಚಂದ್ರು (58) ಅವರು ಗುರುವಾರ ರಾತ್ರಿ ನಿಧನರಾಗಿದ್ದಾರೆ.



ಕೆ.ಆರ್.ಪೇಟೆ ತಾಲೂಕಿನ ಸಂತೇಬಾಚಹಳ್ಳಿ ಹೋಬಳಿ ರಾಜಸ್ವ ನಿರೀಕ್ಷಕರಾಗಿ ಸೇವೆ ಸಲ್ಲಿಸಿ, 4 ತಿಂಗಳ ಹಿಂದಷ್ಟೇ ಮುಂಬಡ್ತಿ ಪಡೆದು ಚಿನಕುರಳಿ ನಾಡಕಚೇರಿಯ ಉಪ ತಹಶೀಲ್ದಾರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಇವರು ಗುಂಡ್ಲುಪೇಟೆ ತಾಲೂಕು ಸೋಮನಹಳ್ಳಿ ಗ್ರಾಮದವರಾಗಿದ್ದು, ಪತ್ನಿ ತ್ರಿವೇಣಿ, ಓರ್ವ ಪುತ್ರ ಸಂಜು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಶ್ರೀರಂಗಪಟ್ಟಣ–ಮೈಸೂರು ರಸ್ತೆಯಲ್ಲಿರುವ ಮೊಗರಳ್ಳಿ ಮಂಟಿ ಗ್ರಾಮದಲ್ಲಿ ನೆರವೇರಿತು.

ಸಂತಾಪ: ರಾಮಚಂದ್ರು ಅವರ ನಿಧನಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚೆಲುವರಾಯಸ್ವಾಮಿ, ಶಾಸಕರಾದ ಹೆಚ್.ಟಿ.ಮಂಜು, ದರ್ಶನ್ ಪುಟ್ಟಣ್ಣಯ್ಯ, ರಮೇಶ್ ಬಾಬು ಬಂಡಿಸಿದ್ದೇಗೌಡ, ದರ್ಶನ್ ಧ್ರುವನಾರಾಯಣ್, ಮಾಜಿ ಸಚಿವರಾದ ನಾರಾಯಣಗೌಡ, ಸಿ.ಎಸ್.ಪುಟ್ಟರಾಜು, ಮಾಜಿ ಶಾಸಕರಾದ ಕೆ.ಬಿ. ಚಂದ್ರಶೇಖರ್, ಬಿ.ಪ್ರಕಾಶ್, ಟಿಎಪಿಸಿಎಂಎಸ್ ಅಧ್ಯಕ್ಷ ಬಿ.ಎಲ್.ದೇವರಾಜು, ಜಿಪಂ ಮಾಜಿ ಅಧ್ಯಕ್ಷೆ ಜೆ.ಪ್ರೇಮಕುಮಾರಿ, ಜಿಪಂ ಮಾಜಿ ಉಪಾಧ್ಯಕ್ಷೆ ಗಾಯಿತ್ರಿರೇವಣ್ಣ, ಮಾಜಿ ಜಿಪಂ ಸದಸ್ಯರಾದ ವಿ.ಮಂಜೇಗೌಡ, ಅಘಲಯ ಮಂಜುನಾಥ್, ಚಿನಕುರುಳಿ ಜಿಪಂ ಸದಸ್ಯ ಅಶೋಕ್, ಟಿಎಪಿಸಿಎಂಎಸ್ ಮಾಜಿ ಅಧ್ಯಕ್ಷ ಅಘಲಯ ಶ್ರೀಧರ್, ತಹಸೀಲ್ದಾರ್ ನಿಸರ್ಗ ಪ್ರಿಯ, ಪಾಂಡವಪುರ ತಹಸೀಲ್ದಾರ್ ಸಂತೋಷ್, ಉಪ ತಹಸೀಲ್ದಾರ್ ಲಕ್ಷ್ಮೀಕಾಂತ್, ಸಂತೇಬಾಚಹಳ್ಳಿ ಗೆಳೆಯರ ಬಳಗದ ಸಂಸ್ಥಾಪಕ ಅಧ್ಯಕ್ಷ ಎಸ್.ಬಿ. ಶಿವಪ್ಪ ಅಧ್ಯಕ್ಷ ಜಯಕುಮಾರ್ ಸೇರಿದಂತೆ ವಿವಿಧ ಗಣ್ಯರು ಸಂತಾಪ ಸೂಚಿಸಿದ್ದಾರೆ.

ಒಂದನೇ ಪುಟದಿಂದ

ಜನವರಿಯಲ್ಲಿ ಭೂಮಿ ಪೂಜೆ

ಈ ವೇಳೆ ಮಾತನಾಡಿದ ಕೆಐಎಡಿಬಿ ವಿಶೇಷ ಭೂಸ್ವಾಧೀನಾಧಿಕಾರಿ ಪ್ರಿಯದರ್ಶಿನಿ, ರನ್ ವೇ ವಿಸ್ತರಣೆ ಮಾಡಲು ಈಗಾಗಲೇ 240 ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಲ್ಲಿ 50 ಎಕರೆ ಸರ್ಕಾರಿ ಭೂಮಿ ಇದೆ. ರೈತರಿಂದ ಭೂಸ್ವಾಧೀನಪಡಿಸಿಕೊಂಡಿರುವ 160 ಎಕರೆಗೆ ಈಗಾಗಲೇ ಪರಿಹಾರ ಕೂಡ ನೀಡಲಾಗಿದೆ. ರನ್ ವೇ ವಿಸ್ತರಣೆಗೆ ಇನ್ನು 46 ಎಕರೆ ಭೂಮಿ ಅವಶ್ಯಕತೆ ಇದ್ದು, ಇದಕ್ಕಾಗಿ ಅಂತಿಮ ಅಧಿಸೂಚನೆ ಹೊರಡಿಸಿ ಪರಿಹಾರ ನೀಡಬೇಕಿದೆ ಎಂದು ತಿಳಿಸಿದರು.

ತರುವಾಯ ಮಾತನಾಡಿದ ಪ್ರತಾಪ್ ಸಿಂಹ, ರೈತರಿಗೆ ತಲಾ ಒಂದು ಎಕರೆಗೆ 1.50 ಕೋಟಿ ರೂಪಾಯಿ ಪರಿಹಾರ ನೀಡಲಾಗಿದೆ. ಈಗ 46 ಎಕರೆಗೆ ಅಂತಿಮ ಅಧಿಸೂಚನೆ ಹೊರಡಿಸಿ ಪರಿಹಾರ ನೀಡಬೇಕಿದೆ. ರೈತರಿಗೆ ಪರಿಹಾರ ನೀಡಲು ರಾಜ್ಯ ಸರ್ಕಾರದ ಹಣಕಾಸು ಇಲಾಖೆ 90 ಕೋಟಿ ರೂಪಾಯಿ ಕೆಐಎಡಿಬಿಗೆ ನೀಡಿದರೆ, ರೈತರಿಗೆ ಪರಿಹಾರ ನೀಡಬಹುದು. ಭೂಸ್ವಾಧೀನ ಸೇರಿದಂತೆ ಇತರೆ ಪ್ರಕ್ರಿಯೆ ಮುಗಿದ ಮೇಲೆ ಜನವರಿ ವೇಳೆಗೆ ರನ್ ವೇ ವಿಸ್ತರಣೆಗೆ ಭೂಮಿ ಪೂಜೆ ಮಾಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ವಿಮಾನ ನಿಲ್ದಾಣದಲ್ಲಿ ರನ್ ವೇ ವಿಸ್ತರಣೆಗೆ ನಂಜನಗೂಡು ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂಡರ್ ಪಾಸ್ ನಿರ್ಮಿಸಲು ಈ ಮೊದಲು ತೀರ್ಮಾನಿಸಲಾಗಿತ್ತು. ಆದರೆ ಭದ್ರತಾ ದೃಷ್ಟಿಯಿಂದ ಅಂಡರ್ ಪಾಸ್ ಮಾಡುವುದು ಸೂಕ್ತವಲ್ಲ ಎಂಬ ನಿರ್ಧಾರಕ್ಕೆ ಬರಲಾಗಿದೆ. ಏಕೆಂದರೆ ವಿಮಾನ ಇಳಿಯುವ ವೇಳೆ ಅಂಡರ್ ಪಾಸ್ ನಿರ್ಮಾಣಕ್ಕೆ ಸ್ಫೋಟ ನಡೆಸುವ ಸಾಧ್ಯತೆ ಇರುವ ಕಾರಣದಿಂದ ಈ ತೀರ್ಮಾನ ಕೈಗೊಳ್ಳಲಾಗಿದೆ. ಈಗ ಅಂಡರ್ ಪಾಸ್‌ಗೆ ಪರ್ಯಾಯವಾಗಿ ವಿಮಾನ ನಿಲ್ದಾಣದ ಪಕ್ಕ ಹಾದು ಹೋಗಿರುವ ಮೈಸೂರು ನಂಜನಗೂಡು ರಾಷ್ಟ್ರೀಯ ಹೆದ್ದಾರಿಯ ಮಾರ್ಗ ಬದಲಾವಣೆ ಮಾಡಲು ತೀರ್ಮಾನ ಮಾಡಲಾಗಿದೆ. ಮಾರ್ಗ ಪರಿವರ್ತನೆಯಾಗುವ ರಾಷ್ಟ್ರೀಯ ಹೆದ್ದಾರಿಯ ಸ್ಥಳವನ್ನು ಈಗಾಗಲೇ ಏರ್ ಮಾರ್ಕ್ ಮಾಡಲಾಗಿದೆ ಎಂದು ತಿಳಿಸಿದರು. ಒಟ್ಟು 6 ಪಥದ ರಾಷ್ಟ್ರೀಯ ಹೆದ್ದಾರಿ ನಿರ್ಮಾಣಕ್ಕೆ 510 ಕೋಟಿ ರೂಪಾಯಿ ವೆಚ್ಚವಾಗಲಿದೆ. ವಿಮಾನ ನಿಲ್ದಾಣ ಪ್ರಾಧಿಕಾರ ಈ ಹಣವನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ನೀಡಲಿದೆ. ಹಣ ಬಂದ ಕೂಡಲೇ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ 6 ಪಥದ ಹೆದ್ದಾರಿಯನ್ನು ನಿರ್ಮಾಣ ಮಾಡಲಿದೆ. ಈ ಹೆದ್ದಾರಿಯಿಂದ ಹಳ್ಳಿಗಳಿಗೆ ಯಾವುದೇ ತೊಂದರೆ ಆಗುವುದಿಲ್ಲ ಎಂದು ಪ್ರತಾಪ್ ಸಿಂಹ ಸ್ಪಷ್ಟಪಡಿಸಿದರು. ಪ್ರಸ್ತುತ ಮೈಸೂರು ವಿಮಾನ ನಿಲ್ದಾಣದ ರನ್ ವೇ 1.75 ಕಿಲೋಮೀಟರ್ ಇದೆ. ಇದನ್ನು 2.75 ಕಿಲೋಮೀಟರ್‌ಗೆ ವಿಸ್ತರಣೆ ಮಾಡಲು ತೀರ್ಮಾನ ಮಾಡಲಾಗಿದೆ. ಭವಿಷ್ಯದ ಹಿತದೃಷ್ಟಿಯಿಂದ ಈಗಲೇ 3.5 ಕಿಲೋಮೀಟರ್ ರನ್ ವೇ ನಿರ್ಮಿಸಲು ನಿರ್ಧಾರ ಮಾಡಲಾಗುವುದು. ಈಗ ಸಣ್ಣ ಪ್ರಮಾಣದ ವಿಮಾನಗಳು ಹಾರಾಟ ನಡೆಸುತ್ತಿವೆ. ರನ್ ವೇ ವಿಸ್ತರಣೆಯಾದರೆ ಏರ್ ಬಸ್ ಹಾಗೂ ಬೋಯಿಂಗ್ ವಿಮಾನಗಳ ಹಾರಾಟವಾಗಲಿದೆ. ಇದರಿಂದ ಸಹಜವಾಗಿಯೇ ಮೈಸೂರು ಕೈಗಾರಿಕೆ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಾರ್ಗ ಬದಲಾವಣೆ ವೇಳೆ ಅಡ್ಡಲಾಗಿ ಬರುವ ಕಾಲುವೆ ಹಾಗೂ ವಿದ್ಯುತ್ ಮಾರ್ಗ ಕೂಡ ಸ್ಥಳಾಂತರ ಮಾಡಬೇಕು. ಕಾಲುವೆ ಸ್ಥಳಾಂತರಕ್ಕೆ 76 ಕೋಟಿ ರೂಪಾಯಿ ಹಾಗೂ ವಿದ್ಯುತ್ ಮಾರ್ಗ ಬದಲಾವಣೆಗೆ 68 ಕೋಟಿ ರೂಪಾಯಿಗಳ ಅವಶ್ಯಕತೆ ಇದೆ. ಈ ಹಣವನ್ನು ರಾಜ್ಯ ಸರ್ಕಾರ ನೀಡಲಿದೆ ಎಂದು ಪ್ರತಾಪ್ ಸಿಂಹ ಮಾಹಿತಿ ನೀಡಿದರು. ಇದೇ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ, ರನ್ ವೇ ವಿಸ್ತರಣೆಯಿಂದ ಭಾರೀ ಪ್ರಮಾಣದ ವಿಮಾನಗಳು ಹಾರಾಟ ನಡೆಸಬಹುದು. ಇದರಿಂದ ಮೈಸೂರಿನ ಕೈಗಾರಿಕಾ ಬೆಳವಣಿಗೆ ಸೇರಿದಂತೆ ಇತರೆ ಅಭಿವೃದ್ಧಿಯಾಗಲಿದೆ. ಈ ಬಗ್ಗೆ ಈಗಾಗಲೇ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಅವರಿಗೆ ವಿವರಿಸಿದ್ದೇನೆ. ರನ್ ವೇ ವಿಸ್ತರಣೆಗೆ ಹಣಕಾಸು ಇಲಾಖೆ ನೀಡಬೇಕಿರುವ 90 ಕೋಟಿ ರೂಪಾಯಿಗಳನ್ನು ಕೂಡಲೇ ಬಿಡಗಡೆ ಮಾಡಿಸುವುದಾಗಿ ಅವರು ಭರವಸೆ ನೀಡಿದ್ದಾರೆ ಎಂದು ತಿಳಿಸಿದರು.

ಸಭೆಯಲ್ಲಿ ಹಾಜರಿದ್ದ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಹಣಕಾಸು, ಕೈಗಾರಿಕಾ ಇಲಾಖೆ ಸೇರಿದಂತೆ ಇತರೆ ಇಲಾಖೆಯ ಅಧಿಕಾರಿಗಳ ಜೊತೆ ದೂರವಾಣಿಯಲ್ಲಿ ಮಾತನಾಡಿ ರನ್ ವೇ ವಿಸ್ತರಣೆಗೆ ಪ್ರಕ್ರಿಯೆಗಳನ್ನು ತ್ವರಿತವಾಗಿ ಕೈಗೊಳ್ಳುವಂತೆ ಸೂಚನೆ ನೀಡಿದರು. ಇದಕ್ಕೆ ಎಲ್ಲಾ ಅಧಿಕಾರಿಗಳು ಸಕರಾತ್ಮಕವಾಗಿ ಸ್ಪಂದಿಸಿ, ತಮ್ಮ ಬಳಿ ಫೈಲ್ ಬಂದ ಕೂಡಲೇ ಕ್ಲಿಯರ್ ಮಾಡುವುದಾಗಿ ಭರವಸೆ ನೀಡಿದರು. ಸಲಹಾ ಸಮಿತಿ ಸದಸ್ಯರಾದ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಮಾಜಿ ಅಧ್ಯಕ್ಷ ಸಿ.ಎ.ಜಯಕುಮಾರ್, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ್, ಭಾಗ್ಯಶ್ರೀ ಭಟ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಬೈಕ್ ಹ್ಯಾಂಡಲ್‌ಗೆ ಸಾರಿಗೆ ಬಸ್ ತಾಗಿ ಅಪಘಾತ

ಪತ್ನಿ ಸಾವು, ಪತಿಗೆ ಗಾಯ

ಮೈಸೂರು,ಆ.25(ಸಿಎನ್)–ಚಲಿಸುತ್ತಿದ್ದ ಬೈಕ್ ಹ್ಯಾಂಡಲ್‌ಗೆ ಕೆಎಸ್‌ಆರ್‌ಟಿಸಿ ಬಸ್ ತಾಗಿದ ಪರಿಣಾಮ, ಬೈಕ್‌ನಿಂದ ಆಯತಪ್ಪಿ ಬಿದ್ದ ಪತ್ನಿ ಬಸ್ ಚಕ್ರಕ್ಕೆ ಸಿಲುಕಿ ಮೃತಪಟ್ಟ ಘಟನೆ ಮೈಸೂರು–ನಂಜನಗೂಡು ರಸ್ತೆಯ ದಳವಾಯಿಕೆರೆ ಬಳಿ ಶುಕ್ರವಾರ ಸಂಭವಿಸಿದೆ.

ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ತಾಲೂಕಿನ ಚನ್ನವಡೆಯನಪುರ ಗ್ರಾಮದ ಮೇಘ(26) ಮೃತಪಟ್ಟವರಾಗಿದ್ದು, ಬೈಕ್ ಚಾಲನೆ ಮಾಡುತ್ತಿದ್ದ ಇವರ ಪತಿ ಮಹೇಂದ್ರ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಮೈಸೂರಿನ ಸಂಬಂಧಿಕರ ಗೃಹಪ್ರವೇಶಕ್ಕೆ, ಮಹೇಂದ್ರ ಮತ್ತು ಮೇಘ ದಂಪತಿ ತಮ್ಮ ಬೈಕ್‌ನಲ್ಲಿ ಆಗಮಿಸಿದ್ದರು. ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ ಮನೆಗೆ ಹೋಗುತ್ತಿದ್ದ ವೇಳೆ ನಂಜನಗೂಡು ರಸ್ತೆಯ ದಳವಾಯಿಕೆರೆ ಬಳಿ ಹಿಂದಿ ನಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಬೈಕ್‌ನ ಹ್ಯಾಂಡಲ್‌ಗೆ ತಾಗಿದೆ. ನಿಯಂತ್ರಣ ಕಳೆದುಕೊಂಡ ಬೈಕ್‌ನಿಂದ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಈ ವೇಳೆ ಬೈಕ್‌ನ ಹಿಂಬದಿ ಕುಳಿತ್ತಿದ್ದ ಮೇಘ ಕೆಳಗೆ ಬಿದ್ದ ತಕ್ಷಣ ಅವರ ಮೇಲೆ ಬಸ್ ಚಕ್ರ ಹರಿದು ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಶುಕ್ರವಾರ ಮೈಸೂರಿನ ಜಲದರ್ಶಿನಿ ಅತಿಥಿಗೃಹದ ಆವರಣದಲ್ಲಿನ ನೂತನ ಕಟ್ಟಡದ ಮೊದಲ ಮಹಡಿಯಲ್ಲಿ ಅಧಿಕೃತವಾಗಿ ಕಚೇರಿ ಆರಂಭಿಸಿದ ಶಾಸಕ ಕೆ. ಹರೀಶ್‌ಗೌಡ ಅವರನ್ನು ಶ್ರೀಕೃಷ್ಣ ಎಂಟರ್‌ಪ್ರೈಸಸ್ ಮಾಲೀಕರಾದ ಕೆ. ಪ್ರದೀಪ್‌ಸಿಂಗ್, ಉದ್ಯಮಿಗಳಾದ ಅರ್ಷಾದ್, ಅಫ್ಸರ್, ಗಗನ್‌ದೀಪ್ ಇತರರು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು.

ಲಯನ್ಸ್ ಕ್ಲಬ್ ಇಂದಿರಾನಗರ ಪದಾಧಿಕಾರಿಗಳ ಪದಗ್ರಹಣ



ಮೈಸೂರು, ಆ. 25– ಮೈಸೂರಿನ ಲಯನ್ಸ್ ಕ್ಲಬ್ ಇಂದಿರಾನಗರದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಮತ್ತು ಸೇವಾ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಲಯನ್ ಸಂಸ್ಥೆಯ ಪ್ರಥಮ ಜಿಲ್ಲಾ ರಾಜ್ಯಪಾಲರಾದ ಎನ್.ಸುಬ್ರಹ್ಮಣ್ಯ, ಅಧ್ಯಕ್ಷರು ಮತ್ತು ನೂತನ ಪದಾಧಿಕಾರಿಗಳಿಗೆ ಪ್ರಮಾಣವಚನವನ್ನು ಬೋಧಿಸಿದರು.

ಕೆ.ಆರ್. ವಿಭಾಗದ ಸಹಾಯಕ ಪೊಲೀಸ್ ಆಯುಕ್ತ ಗಂಗಾಧರಸ್ವಾಮಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಲಯನ್ಸ್ ಕ್ಲಬ್ ಇಂದಿರಾನಗರದ ನೂತನ ಅಧ್ಯಕ್ಷ ಲಯನ್ ಡಾ.ಟಿ.ಎಮ್. ಪ್ರಶಾಂತ್ ಅವರು ಲಯನ್ಸ್ ಸಂಸ್ಥೆಯ ಅಧ್ಯಕ್ಷರಾಗಿ ಪದಗ್ರಹಣ ಮಾಡಿ, 2023–24ನೇ ಸಾಲಿನಲ್ಲಿ ಸಂಸ್ಥೆಯಿಂದ ಮಾಡಬೇಕಾದ ಸಾಮಾಜಿಕ ಸೇವಾ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.

ಪದಗ್ರಹಣ ಸಮಿತಿಯ ಅಧ್ಯಕ್ಷ ಲಯನ್ ದೇವಪ್ರಕಾಶ್, ನೂತನ ಕಾರ್ಯದರ್ಶಿ ಲಯನ್ ರಾಜು ದೇಶಾನಿ, ಖಜಾಂಚಿ ಲಯನ್ ಆನಂದ ಕುಮಾರ್, ನಿರ್ದೇಶಕ ಮಂಡಳಿ ಸದಸ್ಯರು ಹಾಗೂ ಸದಸ್ಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ವೃದ್ಧಾಶ್ರಮಕ್ಕೆ ಸೇವಾ ಕಾರ್ಯಕ್ರಮದ ಅಡಿಯಲ್ಲಿ ಆಹಾರ ಪದಾರ್ಥಗಳನ್ನು ಒದಗಿಸುವ ಮೂಲಕ ಕ್ಲಬ್ಬಿನ ಚಟುವಟಿಕೆಗಳಿಗೆ ಚಾಲನೆ ನೀಡಲಾಯಿತು.

ವಲಯ ಅರಣ್ಯಾಧಿಕಾರಿಗಳ ವರ್ಗಾವಣೆ

ಮೈಸೂರು, ಆ.25(ಎಸ್‌ಪಿಎನ್)– 61 ವಲಯ ಅರಣ್ಯಾಧಿಕಾರಿಗಳ ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ.

ಮೈಸೂರು ಅರಣ್ಯ ಸಂಚಾರಿ ದಳದ ವಲಯ ಅರಣ್ಯಾಧಿಕಾರಿ ವಿವೇಕ್ ಅವರನ್ನು ವರ್ಗಾವಣೆ ಮಾಡಿದ್ದು, ಸಕ್ಷಮ ಪ್ರಾಧಿಕಾರಕ್ಕೆ, ಮದ್ದೂರು ಸಾಮಾಜಿಕ ಅರಣ್ಯ ವಲಯದ ಅರಣ್ಯಾಧಿಕಾರಿ ಪಿ.ಎಸ್. ಅಭಿಷೇಕ್ ಅವರನ್ನು, ನಾಗರಹೊಳೆ ರಾಷ್ಟ್ರೀಯ ಉದ್ಯಾನವನದ ವೀರಹೊಸಹಳ್ಳಿಯ ವಲಯ ಅರಣ್ಯಾಧಿಕಾರಿಯಾಗಿ, ಮೈಸೂರು ಪ್ರಾದೇಶಿಕ ವಿಭಾಗದ ಕಾನೂನು ಮತ್ತು ಮಾಹಿತಿ ಸಂವಹನ ತಂತ್ರಜ್ಞಾನ ಘಟಕದ ವಲಯ ಅರಣ್ಯಾಧಿಕಾರಿ ಎಂ.ಸಿ.ನಿತಿನ್‌ಕುಮಾರ್ ಅವರನ್ನು ಮೈಸೂರು ಪ್ರಾದೇಶಿಕ ವಿಭಾಗದ ನಂಜನಗೂಡು ಪ್ರಾದೇಶಿಕ ವಲಯದ ಅರಣ್ಯಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದೆ.

ಹಾಸನ ವಿಭಾಗದ ಲೀಗಲ್ ಮತ್ತು ಐಸಿಟಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ ವಲಯ ಅರಣ್ಯಾಧಿಕಾರಿ ಬಿ.ಎಂ.ಶೃತಿ ಅವರನ್ನು ಹೊಳೆನರಸೀಪುರದ ಸಾಮಾಜಿಕ ಅರಣ್ಯ ವಲಯ ಅರಣ್ಯಾಧಿಕಾರಿ ಹುದ್ದೆಗೆ, ಕೊಡಗು ವಿರಾಜಪೇಟೆಯ ಸಾಮಾಜಿಕ ಅರಣ್ಯ ವಲಯದ ಅರಣ್ಯಾಧಿಕಾರಿ ಎಂ. ರಾಘವೇಂದ್ರ ಅಗಸೆ ಅವರನ್ನು ಸಾಗರ ಪ್ರಾದೇಶಿಕ ವಿಭಾಗದ ಕಾರ್ಗಲ್ ಪ್ರಾದೇಶಿಕ ವಿಭಾಗಕ್ಕೆ, ಮೇಲುಕೋಟೆ ವನ್ಯಜೀವಿ ಅರಣ್ಯವಲಯದ ಅರಣ್ಯಾಧಿಕಾರಿ ಕೆ.ಇ.ಸುಬ್ರಮಣ್ಯ ಅವರನ್ನು ಹುಣಸೂರು ವನ್ಯಜೀವಿ ವಲಯದ ಅರಣ್ಯಾಧಿಕಾರಿಯಾಗಿ ವರ್ಗಾವಣೆ ಮಾಡಲಾಗಿದ್ದು, ಈ ಹಿಂದೆ 13 ವಲಯ ಅರಣ್ಯಾಧಿಕಾರಿಗಳ ವರ್ಗಾವಣೆಯನ್ನು ರದ್ದುಪಡಿಸಿ ರಾಜ್ಯ ಸರ್ಕಾರ ಆದೇಶಿಸಿದೆ.

ಚುನಾವಣೆ ವಂಚನೆ ಪ್ರಕರಣ

ಅಮೆರಿಕ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬಂಧನ, ಬಿಡುಗಡೆ

ಅಟ್ಲಾಂಟಾ: ಚುನಾವಣೆ ವಂಚನೆ ಪ್ರಕರಣದಲ್ಲಿ ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರನ್ನು ಗುರುವಾರ ಬಂಧಿಸಿ, ಜಾರ್ಜಿಯಾ ಜೈಲಿನಲ್ಲಿ ಇಡಲಾಗಿತ್ತು. ತದನಂತರ 200,000 ಡಾಲರ್ ಬಾಂಡ್ ಸಲ್ಲಿಸಿ, ಜಾಮೀನು ಪಡೆದು ಸುಮಾರು ಜೈಲಿನಿಂದ ಹೊರ ಬಂದಿದ್ದಾರೆ. 2020 ರ ಚುನಾವಣಾ ಫಲಿತಾಂಶ ರದ್ದತಿಯಲ್ಲಿ ಇತರ 18 ಆರೋಪಿಗಳೊಂದಿಗೆ ಸಹಕರಿಸಿದ ಆರೋಪ ಹೊತ್ತಿರುವ ಟ್ರಂಪ್ ಅವರನ್ನು ಬಂಧಿಸಿ ಅಟ್ಲಾಂಟಾದ ಫುಲ್ಟನ್ ಕೌಂಟಿ ಜೈಲಿನಲ್ಲಿ ಇಡಲಾಗಿತ್ತು. 20 ನಿಮಿಷಗಳ ನಂತರ ಅವರನ್ನು ಜೈಲಿನಿಂದ ಬಿಡುಗಡೆ ಮಾಡಲಾಗಿದೆ ಎಂದು ವರದಿಯಾಗಿದೆ.



ಈ ಪ್ರಕರಣದ ಇತರ ಆರೋಪಿಗಳಂತೆ 77 ವರ್ಷದ ಟ್ರಂಪ್ ಕೂಡ ಕಾನೂನಿಗೆ ಶರಣಾ ಗಿದ್ದಾರೆ. ಅಮೆರಿಕದಲ್ಲಿ ಈ ರೀತಿ ಜೈಲಿಗೆ ಹೋದ ಅಮೆರಿಕದ ಮಾಜಿ ಅಧ್ಯಕ್ಷರಲ್ಲಿ ಟ್ರಂಪ್ ಅವರೇ ಮೊದಲಿಗರಾಗಿದ್ದಾರೆ. ಜೈಲಿನಿಂದ ಬಿಡುಗಡೆಯಾದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಟ್ರಂಪ್, ಇದು "ಅಮೆರಿಕಕ್ಕೆ ಬಹಳ ದುಃಖದ ದಿನವಾಗಿದೆ. ಇಲ್ಲಿ ನಡೆದಿರುವುದು ನ್ಯಾಯದ ಅಣಕವಾಗಿದೆ. ನಾನು ಯಾವುದೇ ತಪ್ಪು ಮಾಡಿಲ್ಲ" ಎಂದರು.



ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಪಡುವಾರಹಳ್ಳಿಯ ಕೆಲ ನಿವಾಸಿಗಳಿಗೆ ಗೃಹಲಕ್ಷ್ಮೀ ಮಂಜೂರಾತಿ ಪತ್ರ ಹಾಗೂ ಸಿಹಿಯನ್ನು ಬಡವರ ಬಂಧು ಗೆಳೆಯರ ಬಳಗದ ವತಿಯಿಂದ ವಿತರಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ನಗರಪಾಲಿಕೆ ಸದಸ್ಯರಾದ ಶ್ರೀಮತಿ ಭಾಗ್ಯ ಮಹದೇಶ್, ಮಾಜಿ ಸದಸ್ಯರಾದ ಸಿ. ಮಹದೇಶ್, ಕಾರ್ಮಿಕ ಮುಖಂಡರಾದ ಶ್ರೀಪಾಲ್, ಪಡುವಾರಹಳ್ಳಿ ಪಾಪಣ್ಣ, ಸುಣ್ಣದಕೇರಿ ರಮೇಶ್, ಕೃಪಾನಂದ, ಕೃಷ್ಣ, ರಾಮಚಂದ್ರ, ನಿಂಗಪ್ಪ ಇತರರು ಉಪಸ್ಥಿತರಿದ್ದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

WANTED TEACHERS FOR HIGH SCHOOL
Reputed Educational Institution Situated in Mandya Experienced Teachers Required for Science (Chemistry & Biology) Social Science & English
Attractive salary will be paid. Hostel facility available. Contact
7899903375

ಗ್ಯಾಸ್ ಪೈಪ್ ಲೈನಿಂಗ್
ಸುರಕ್ಷತೆ ದೃಷ್ಟಿಯಿಂದ ರಿಜಿಸ್ಟರ್ಡ್ ಕಂಪನಿಯಿಂದ ಪೈಪ್ ಲೈನಿಂಗ್ ಮಾಡಿಸಿ ಗ್ಯಾಸ್ ಸ್ಟೌವ್+ ಗ್ಯಾಸ್ ಗೀಜರ್+ಹಬ್ ಸ್ಟೌವ್ ಚಿಮಿನಿ ಸೇಲ್ + ಸರ್ವಿಸ್ ಲಭ್ಯ
22 + ವರ್ಷಗಳ ನಿರಂತರ ಸೇವೆಯಲ್ಲಿ
8088888115

SITES FOR SALE
30x40,20x40 Sites, Bank Loan upto 80%, near Gurur Bus Stop, Ramabainagar, Mysore. DTCP approved (Corporation limits)
1.5 Kms from JP Nagar Ring Road
8660105902

ಪರಿಶುದ್ಧ ಮರದ ಗಾಣದ ಎಣ್ಣೆ ದೊರೆಯುತ್ತದೆ
ಕಡ್ಲೆಕಾಯಿ, ಸೂರ್ಯಕಾಂತಿ, ಕೊಬ್ಬರಿ, ಅಡುಗೆ ಎಣ್ಣೆ ಸೇರಿದಂತೆ ಪರಿಶುದ್ಧ ಮರದ ಗಾಣದಿಂದ ತಯಾರಿಸಿದ ಎಲ್ಲಾ ರೀತಿಯ ಎಣ್ಣೆಗಳು ಚಾಮರಾಜನಗರದಲ್ಲಿ ದೊರೆಯುತ್ತದೆ.
9731422223,7019441918

ಶ್ರೀ ಬನಶಂಕರಿ ರಿಯಲ್ ಎಸ್ಟೇಟ್
20x30 ಡ್ಯೂಪ್ಲೆಕ್ಸ್ ಹೊಸಮನೆ
30x40 ಡ್ಯೂಪ್ಲೆಕ್ಸ್ ಹೊಸಮನೆ
40x60 ಡ್ಯೂಪ್ಲೆಕ್ಸ್ ಹೊಸಮನೆ
ಎಲ್ಲಾ ಅಳತೆ ಸೈಟ್ ಹೊಸ ಮನೆ ಹಳೇಮನೆ, ಎಲ್ಲಾ ಬಡಾವಣೆಗಳಲ್ಲಿ ಮಾರುವವರು, ಕೊಳ್ಳುವವರು
8618495118

ಮುಡಾ ಖಾತಾ ಸೈಟ್ ಸೇಲ್
30x40, ಈಸ್ಟ್ ಫೇಸಿಂಗ್, ಜ್ಞಾನಭಾರತಿ ಲೇಔಟ್, ದಡದಹಳ್ಳಿ, ಜೆ.ಪಿ.ನಗರದ ರಿಂಗ್ ರೋಡ್ ನಿಂದ ಕೇವಲ 5 ಕಿ.ಮೀ. ದೂರ, ಬೆಲೆ : 30 ಲಕ್ಷ
ಡೈರೆಕ್ಟ್ ಓನರ್
9342123373

WANTED
* Room boys for Hotel
* Housekeeping (Female).
Contact:
8050936432, 9743221781

SITE FOR SALE
30x40 S.No. 09 Sy. No 5/2, Srirampura Final Price 44 Lakhs
40x60 S.No.315 ವಿಶ್ವಪ್ರಜ್ಞ ಗೃಹ ನಿರ್ಮಾಣ, Near R.T. Nagar Rs. 3500/- Sqft Final
Owner Mahesh
9448254453
Both North Face

SITE FOR SALE
40X45 South Face Price: 4250/- Sqft, (Slightly Negotiable) Just 100 Mtrs from Surya Bakery main Road, Hebbal, Mysore-16 (Brokers Excuse)
9901212321
8880883339

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

40x60 ಸೈಟು N/F @ Rs.22 ಲಕ್ಷ
DTCP APPROVED LAYOUT
ಬ್ರಾಹ್ಮಿನ್ಸ್ ಲೇಔಟ್ 'E' ಬ್ಲಾಕ್ ದೇವಗಳ್ಳಿ ಹತ್ತಿರ, ಹೆಚ್.ಡಿ.ಕೋಟೆ ರೋಡ್, 17 ಕಿ.ಮೀ. ಮೈಸೂರು ಸಿಟಿ ಇಂದ
9538583377

WANTED
MALE SALES EXECUTIVE (Vehicle mandatory)
TELECALLING (FEMALE)
Qulification: 10th, PUC...
Salary, incentive 12 to 35K for MAAN CERAMICS TILES SHOWROOM, Opp. SBI Bank, Vidyaranyapuram, Mysore-570 008
9113998991, 9620967801

ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್
ಜರ್ಮನ್ ಟೆಕ್ನಾಲಜಿ ಬಳಸಿ ಸಂಪು, ಟ್ಯಾಂಕ್ ಮತ್ತು ಸೋಲಾರ್ ಸರ್ವೀಸ್ ಮಾಡಲಾಗುತ್ತದೆ.
Mob: 9008711654

WANTED
Office Clerk / Receptionist (Female) Qualification - Graduate with Good English Fluency and Computer Knowledge.
Place: Thirumala Public School Sardar Vallabhbhai Patel Nagar, Mysuru
9148102123

ಬೇಕಾಗಿದ್ದಾರೆ PEOPLE REQUIRED
Ayurveda Products Govt of India Certified Ayushpremium Certification ಹೊಂದಿರುವ Products SALES PROMOTION
For More Details
9731299766

(30x40) 2 Sites For Sale
@ Olive Enclave Mys-B'lore Highway 3Km From Columbia Hospital, 26 Lakhs
9538839926

ಬೇಕಾಗಿದ್ದಾರೆ
ಡ್ರೈವರ್–10 ಜನ
ಸ್ಥಳ: ಮೈಸೂರು–ಬೆಂಗಳೂರು
ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ (2 ವರ್ಷ Exp)
ಮಾರ್ಕೆಟಿಂಗ್ ಮ್ಯಾನೇಜರ್ (2 ವರ್ಷ Exp)
MOVE MY GOODS
9019029036



8184000444

AQUAGUARD & KENT SALES AND SERVICE
Service Charge : 300/-
9901200444

ಅಂಜನ ಶಾಸ್ತ್ರದ ಮೂಲಕ ಪರಿಹಾರ
ಶ್ರೀ ಅಂಜನ ದೇವಿ ಆರಾಧಕರು ಪಂ॥ ಶ್ರೀನಿವಾಸ್ ಆಚಾರ್ಯ
ಮೈಸೂರಿನಲ್ಲಿ ಬಹು ವರ್ಷದಿಂದ ಖಾಯಂ ಆಗಿ ನೆಲೆಸಿರುತ್ತಾರೆ. ಅನೇಕ ಜನರು ಇವರಲ್ಲಿ ಪರಿಹಾರ ಪಡೆದಿರುತ್ತಾರೆ. ಇವರು ವಂಶ ಪಾರಂಪರ್ಯ ಜ್ಯೋತಿಷ್ಯರು ಇವರಲ್ಲಿ ಜ್ಯೋತಿಷ್ಯ ಕೇಳಿದರೆ ನಿರಾಶೆ ಆಗುವ ಮಾತೆ ಇಲ್ಲ. ಫೋನಿನ ಮೂಲಕ ಪರಿಹಾರ
9663466548

DTCP SITES FOR SALE
DTCP Sites Rs. 699 per sq.ft., Near Jayapura, H.D. Kote Road, Mysore.
9590491194,9606783264

NEW DUPLEX HOUSE FOR SALE
30x40 ಡ್ಯೂಪ್ಲೆಕ್ಸ್ ಮನೆ
20x30 ಡ್ಯೂಪ್ಲೆಕ್ಸ್ ಮನೆ
ವಿಜಯನಗರ 4ನೇ ಹಂತ, ಮೈಸೂರು
8050245332

ಸೈಟು ಮಾರಾಟಕ್ಕಿದೆ
18x40 ಕುವೆಂಪುನಗರ ಪೂರ್ವದಿಕ್ಕು
9741076619

JOB VACANCY
(Company appointed)
Security Guards, Assistant Security Officer, Supervisors for Mysore City, Madikeri, Nanjangud, Gundlupet, Hunsur, H.D. Kote.
Salary: 12000 to 16000.
04 Weekly Off, Bonus, Gratuity.
Mob: 8618291971

ನೀವು ಒಬ್ಬ ಟೀಚರ್ ಆಗಲು ಬಯಸುತ್ತೀರಾ?
SSLC ಪಾಸ್ ಆಗಿದೆಯಾ, PUC, Degree ಪಾಸ್ ಅಥವಾ ಫೇಲ್ ಆಗಿದೆಯಾ ? ಚಿಂತೆ ಬೇಡ NURSERY TEACHER TRAINING ಪ್ರವೇಶ ಪಡೆದು ತರಬೇತಿಯೊಂದಿಗೆ ಅರ್ಹತೆ ಪಡೆದ ಶಿಕ್ಷಕಿಯಾಗಬಹುದು ಶಿಕ್ಷಕಿಯಾಗಿ ಗೌರವ ಕೀರ್ತಿ ಪಡೆಯಿರಿ ಮತ್ತು ಸಂಪಾದನೆಯನ್ನು ಮಾಡಿ. ವಿವರಗಳಿಗೆ JNANA GANGOTRI CONVENT RAJENDRA NAGARA, MYSORE-570007
9243580672

ಬೋಳು ತಲೆಯ ಸಮಸ್ಯೆಯೇ?

ಆಧುನಿಕ ಜಗತ್ತಿಗೆ ಒಳಪಡುತ್ತಿರುವ ರೋಗಿಗಳಿಗೆ ಪ್ರಥಾತ್ಮಕ ಬೆಲೆಯಲ್ಲಿ ಹೇರ್ ವಿಗ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Anikethana Road, kuvempunagar, Mysuru
MYSURU 9611028523 MANGALORE 9343142258

RV CONSTRUCTIONS
RATE STARTS FROM Rs. 1690/- Per Sqft.
NO ADVANCE
BILLING ON STAGE By Stage Completion
Office : 0821-2002063
7975110915
D.Subbaiah Road, Mysore

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಕಳೆದಿದೆ
ಇಂದಿರಾ ಪಿ.ರೈ ರವರು ದೊಡ್ಡ ಮಾದೇಗೌಡರಿಂದ ವಿಜಯನಗರ 4ನೇ ಹಂತ, 3ನೇ ಫೇಸ್‌ನಲ್ಲಿರುವ ಸೈಟ್ ನಂ. 125ರ 40x60 ಅಳತೆಯ ಸೈಟನ್ನು ಕೊಂಡುಕೊಂಡಿದ್ದು, ಅದರ ದೊಡ್ಡಮಾದೇಗೌಡರ ಹೆಸರಿನ ಸೈಟಿನ ಅಸಲು ಮಂಜೂರಾತಿ ಪತ್ರ ಕಳೆದು ಹೋಗಿರುತ್ತದೆ ಸಿಕ್ಕಿದವರು ಕೂಡಲೇ ಸಂಪರ್ಕಿಸಿ. ಮೊಬೈಲ್ ಸಂಖ್ಯೆ
9449292576

HOUSES & OFFICE SPACE FOR RENT
@ SARASWATHIPURAM, KUVEMPUNAGAR & SURROUNDINGS.
S.S. PROPERTY SERVICES
(Opp.Kuvempu School), S.S.Puram)
93421-25252

ಉದ್ಯೋಗ ಅವಕಾಶ
ಬಂದ ದಿನವೇ ಕೆಲಸ (ಮಾರ್ಕೆಟಿಂಗ್ ಅಲ್ಲ) ಮೈಸೂರಿನ ಪ್ರತಿಷ್ಠಿತ MNC ಹಾಗೂ IT ಕಂಪನಿಗಳಿಗೆ 4th SSLC, PUC, ITI, Any Degree ಪಾಸ್ / ಫೇಲ್ ಆದ ಯುವಕ/ಯುವತಿಯರು ಇಂದೇ ಬೇಕಾಗಿದ್ದಾರೆ. ESI/PF ನೊಂದಿಗೆ ಊಟ ವಸತಿಯಿರುತ್ತದೆ.
ಸಂಬಳ+ಟಿಎ 15,200/- to 86,000/-
9740733021, 9535028750

ಸಂಪು ಕ್ಲೀನಿಂಗ್‌ಗಾಗಿ
ಸಂಪರ್ಕಿಸಿ:
8861612486

ಟಿವಿ ರಿಪೇರಿ
ಎಲ್‌ಸಿಡಿ, ಎಲ್‌ಇಡಿ ಟಿವಿ
Service at your doorstep.
Mob: 9880066886

WANTED
Experienced Sales Boys and Sales Girls for Textile Shop.
Attractive salary + ESI, PF + Incentive.
Gandhi Circle, Mysore
Mob: 9740309995
Call after 10.30 am

MUDA APPROVED SITES FOR SALE
* New Project Ready to Registration.
* Near Rastrothana School, Airport backside.
* 3 km from JP Nagar Ring Road.
At just 26.5L for 30x40
Mob: 78923 28320

ಸುವರ್ಣಾವಕಾಶ
ನಿವೃತ್ತಿ, ಸ್ವಯಂನಿವೃತ್ತಿ, ಗೃಹಿಣಿಯರಿಗೆ ಸ್ವಯಂ ಉದ್ಯಮದಾರರಿಗೆ ಪ್ರಖ್ಯಾತ ಬ್ಯಾಂಕ್ ಸಮೂಹದಿಂದ Part Time-Full TIme ಕೆಲಸಕ್ಕೆ ಅರ್ಜಿಗಳನ್ನು ಆಹ್ವಾನಿಸಲಾಗಿದೆ.
Basic ಸಂಬಳ / PF-ESI
Age - above 30 Years
9008799156
8660521596

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಏರಿಯಾದಲ್ಲಿ ಕೆಲಸ ಮಾಡಲು Firemanಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : ಅನುಭವವುಳ್ಳ Fireman
ಸಂಬಳ: 21000+W/o (8hrs)
9620667819
9620777819

Plan & Build
Construction starts @ Rs. 1,750
Free plan and enquiry.
Mob: 9113099752

ಸೈಟು ಮಾರಾಟಕ್ಕಿದೆ
1) JSS ಲೇಔಟ್
2) BVL ಪ್ರಿಮಿಯೊ ಲೇಔಟ್
3) ಸಪ್ತಮಾತೃಕ ಲೇಔಟ್
Mob: 9844436672

Change of Name
I, Mukhtar Ahmed, residing at Door No. 84, 4th Cross, Jail Quarters, Ashoka Road, Mysore-570 007, changed my name as Mukhtar Ahmed Siddiqui, on my own free will in front of Notary Asadulla Khan on 23-8-2023. I declare that I shall at all times hereafter in all records, deeds and writings and in all proceedings, dealings and transactions, private as well as upon all occasions whatsoever, use and sign the name of Mukhtar Ahmed Siddiqui.
Sd/- Mukhtar Ahmed Siddiqui

ನಿವೇಶನ ಮಾರಾಟಕ್ಕೆ ಇದೆ
ದಟ್ಟಗಳ್ಳಿ 30x40 East Face
9901351633

3 BHK House for Sale
Fully furnished MUDA, 20x30, N/F Door at Dattagalli, Near Kadamba Bakery.
Price: Rs. 79 Lakhs.
Contact owner.
Mob: 6361295132

SITE FOR SALE
20x30 South Face M Block, Kuvempunagara Mysuru (MUDA SITE)
7204104576
9901309272
(ಮಧ್ಯವರ್ತಿಗಳಿಗೆ ಅವಕಾಶವಿಲ್ಲ)

40x60 SITE FOR SALE
In Vidyashankar Layout Near Devegowda Circle, Satagalli, Price: 1.15 Cr (Negotiable)
8197707001
9611460634

WANTED
1) **Office Assistant:** 2 years experience in office maintenance, MS Word, Excel, Kannada typing.
2) **Supervisor:** 2 years experience in field works, handling civil works. Experience in field work handling manpower service. *Contact:*
Ph: 0821-3588801, 9538320877, 9481232316

WANTED
Security Guard Field Officer (M) (Min. 2-3 years exp. in Security Agency)
Accountant (Female) (Min. 2-3 yrs. exp.)
Driver (M) - (Min. 2-3 yrs. exp. as Driver)
Contact: Mob: 6366366388
Call between 9.30 am to 5.30 pm
Mail your CV: acpltd123@gmail.com

ಕೇರಳ ಶ್ರೀ ಪ್ರಸಿದ್ಧ ಜ್ಯೋತಿಷ್ಯರು
Famous Astrologer
ಪಂಡಿತ್ ಸಂತೋಷ್. 9741250896
ಕಾಣತೂರ್ ನಾಲ್ವರ ದೈವ, ಕಲ್ಲುಟಿ ಭಗವತಿ ಶಕ್ತಿಯಿಂದ ದಾಂಪತ್ಯ ಸಮಸ್ಯೆ, ಲೈಂಗಿಕ ಸಮಸ್ಯೆ, ಸ್ತ್ರೀ ಪುರುಷ ಪ್ರೇಮ ವಿಚಾರ, ಶತ್ರು ಬಾಧೆ, ಹಣಕಾಸಿನ ತೊಂದರೆ, ಮಾನಸಿಕ ಚಿಂತೆ, ಪ್ರೇತ ಬಾಧೆ, ವಿದೇಶ ಪ್ರಯಾಣ ಇನ್ನೂ ಮುಂತಾದ ಯಾವುದೇ ಕಠಿಣ ಸಮಸ್ಯೆಗಳಿಗೆ 3 ದಿನದಲ್ಲಿ ಶಾಶ್ವತ ಪರಿಹಾರ ಮಾಡಿಕೊಡುತ್ತಾರೆ.
ಖಾಯಂ ವಿಳಾಸ: ವಿನಯ ಮಾರ್ಗ ರಸ್ತೆ,, ಶ್ರೀ ಸಿದ್ಧಿವಿನಾಯಕ ದೇವಸ್ಥಾನದ ಎದುರು, ಬ್ಯಾಂಕ್ ಆಫ್ ಬರೋಡ ಪಕ್ಕ, ಸಿದ್ಧಾರ್ಥ ನಗರ, ಮೈಸೂರು

ಮಾಂತ್ರಿಕ ಕೇರಳ ಶ್ರೀ ಭಗವತಿ ಜ್ಯೋತಿಷ್ಯರು ಶ್ರೀ ಎಸ್.ಎಸ್.ಪ್ರಸಾದ್ ಪೊದುವಾಳ್
ಮೊ.: 9731839596
ಇವರು ಕುಟ್ಟಿಚೇತನ್ ರುದ್ರಿಮಾರ್ತಾಂಡ ದೇವಿ ಭಗವತಿ ಮಳಯಾಲಿ ಮಾಂತ್ರಿಕ ಶಕ್ತಿಯಿಂದ ಸ್ತ್ರೀ ಪುರುಷ, ಪ್ರೇಮ, ದಾಂಪತ್ಯ ಸಮಸ್ಯೆ, ಸಂತಾನ, ದುಷ್ಟಶಕ್ತಿ, ಶತ್ರುಭಾಧೆ, ವ್ಯಾಪಾರ, ಅತ್ತೆ ಸೊಸೆ ಕಿರಿಕಿರಿ, ಸಾಲಭಾಧೆ, ಆರೋಗ್ಯ, ಮಾನಸಿಕ ಚಿಂತೆ, ನಿಮ್ಮ ಯಾವುದೇ ಗುಪ್ತ ಸಮಸ್ಯೆಗಳಿಗೆ ತಕ್ಷಣದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ಮನೆ ವಿಳಾಸ:– ಮನೆ ನಂ.68, ಸತ್ಯ ಮಾರ್ಗ ಗೀತಾ ಸ್ಕೂಲ್ ಹಿಂಭಾಗ, ಹೊಸ ಡಿ.ಸಿ ಆಫೀಸ್ ಎದುರು, ಸಿದ್ಧಾರ್ಥನಗರ, ಮೈಸೂರು.

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೂರ ನಾಲ್ವರ ದೈವ ಚೌಡಮ್ಮ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಃಸಿದ್ಧ. ಖಾಯಂ ವಿಳಾಸ: ಸುಬರ್ಬ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಆಂಧ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳಕೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

SC ಆದಿಕರ್ನಾಟಕ (ಬಲಗೈ)
B.E, M.Tech, MBBS, MD, MS, BAMS, MSC, MBA, MCA, MCom, MAPhd, BSc, Bcom, BCA, BA Bed ವಧುವರಿಗೆ ಸಂಪರ್ಕಿಸಿ:"ನವಿಲೂರು ರಂಗಸ್ವಾಮಿ" ಮೈಸೂರು ಸಿಟಿ ವಧುವರರ ಮಾಹಿತಿ ಕೇಂದ್ರ, ಎನ್.ಆರ್.ಮೊಹಲ್ಲಾ, ಮೈಸೂರು
8711974172

ಶ್ರೀಕೃಷ್ಣ ಸೌಹಾರ್ದ ಸಹಕಾರಿ ನಿಯಮಿತ (ನೋ.)
ನಂ.67, ಹುಣಸೂರು ರಸ್ತೆ, ಹುಟಗಳ್ಳಿ, ಬೆಳವಾಡಿ ಅಂಚೆ, ಮೈಸೂರು–18
ಸರ್ವ ಸದಸ್ಯರ ಗಮನಕ್ಕೆ
ಮೇಲ್ಕಂಡ ನಮ್ಮ ಸಹಕಾರಿಯ 2022–23ನೇ ಸಾಲಿನ ವಾರ್ಷಿಕ ಮಹಾಸಭೆಯನ್ನು ದಿ.27–08–2023ರ ಭಾನುವಾರದಂದು ನಮ್ಮ ಸಹಕಾರಿಯ ಕಚೇರಿ ಆವರಣದಲ್ಲಿ ಬೆ.11.00ಗಂಟೆಗೆ ಏರ್ಪಡಿಸಿದ್ದು, ಈ ಸಂಬಂಧ ಆಹ್ವಾನ ಪತ್ರಿಕೆಯನ್ನು ಎಲ್ಲಾ ಸದಸ್ಯರುಗಳಿಗೆ ಅಂಚೆ ಮೂಲಕ ಕಳುಹಿಸಿದ್ದೇವೆ. ಸಕಾಲದಲ್ಲಿ ಆಹ್ವಾನ ಕೈ ಸೇರದ ಸದಸ್ಯರು ಈ ತಿಳುವಳಿಕೆ ಮೇರೆಗೆ ಮಹಾಸಭೆಗೆ ಬರಬೇಕೆಂದು ಕೋರುತ್ತೇವೆ.
ಸಹಿ/– ಎಸ್.ಆರ್.ನಾರಾಯಣರಾವ್, ಅಧ್ಯಕ್ಷರು

ನೀರಾವರಿ ಜಮೀನು ಬಾಡಿಗೆಗಿದೆ
ಬೋಗಾದಿ ರಿಂಗ್ ರಸ್ತೆಯಿಂದ 3 ಕಿ.ಮೀ. ದೂರದಲ್ಲಿ $2^1/_2$ ಎಕರೆ ನೀರಾವರಿ ಜಮೀನು ಕಾಂಪೌಂಡು, ಮನೆ, ವಿದ್ಯುಚ್ಛಕ್ತಿ ಸಮೇತ ತಿಂಗಳಿಗೆ ರೂ. 15,000 ಕ್ಕೆ ಬಾಡಿಗೆಗಿದೆ ಹಾಗೂ ಅಪೋಲೋ ಆಸ್ಪತ್ರೆ ರಸ್ತೆಯಲ್ಲಿ ಮಳಿಗೆ ಮನೆ, 9 ರೂಮಿನ ಪಿಜಿ ಪೀಠೋಪಕರಣಗಳೊಂದಿಗೆ ಬಾಡಿಗೆಗಿದೆ. ಸಂಪರ್ಕಿಸಿ:
Mob: 8197609290

100% NEEM WOOD PLYWOOD & DOORS
@ FACTORY DEPOT RATES
NEEM BOND PLATINUM® 10yrs WARRANTY
ISO 9001:2015 Certified Depot
CALL 9731591267
9901291267

SITE FOR SALE
30x40, East face site sale at Railway Layout, Bogadi (Near Hari Vidyalaya). Contact:
Call: 98802-73834

ಸೈಟುಗಳು ಮಾರಾಟಕ್ಕಿವೆ
ಶ್ರೀರಾಂಪುರ ರಿಂಗ್ ರೋಡ್ ಮತ್ತು ಶ್ರೀನಗರ ಹಿಂಭಾಗ ಮತ್ತು ಹೊಸ ಮನೆ ಮಾರಾಟಕ್ಕಿದೆ. ಮೈಸೂರು.
Mob: 8050345574

SITE FOR SALE
40x60, MUDA Approved, East facing. Location in Srinagar 2nd Stage.
Price: Rs. 70 Lakhs (Negotiable). Contact:
Mob: 9844539729

ಶಾದಿ ಗುರೂಜಿ.ಕಾಂ
ವಧುವರರನ್ನು ಹುಡುಕಲು ಸಹಾಯ ಬೇಕೆ? ನಮಗೆ ಕರೆಮಾಡಿ
6361740552

WANTED IMMIDETLY ACCOUNTANT FOR AIRCONDITIONER FIRM
Prefered male & female candidate Experinced or Freshers can also apply with Basic Computer, Tally with GST and ITR Knowldge Expected
Salary - 10 to 12 Thousand
9243505461,7624968220

ACCOUNTANT
B.Com. / M.Com., good knowledge with minimum 3 to 5 years experience in handling the accounts on Tally ERP.9 with good knowledge of GST, TDS, EPF, ESIC, Salary payments etc. Contact:
Mob: 9538320877, 9481232316, 0821-3588801

Best Cleary CCTV
LAPTOP-DESKTOP-PRINTERS
We deal best brands product -very aggressive price.
contact
7348977948

Wanted
House Keeping staff (Female)
Office Boy (Good communication Skills)
Contact
9538320877, 9481232316, 0821-3588801

40x54 N/W ಕಾರ್ನರ್ ಸೈಟು @ Rs.42 ಲಕ್ಷ
MUDA APPROVED LAYOUT
ರಿಂಗ್ ರೋಡ್ ನಿಂದ 3 ಕಿ.ಮೀ ಮೈಸೂರು ಸಿಟಿ ಇಂದ 12 ಕಿ.ಮೀ ಚಾಮುಂಡಿಬೆಟ್ಟದ ಹಿಂಭಾಗ
9538583377

3 BHK HOUSE FOR SALE
3 Yrs Old, N/E Corner, Park Facing,27x40, MUDA App, Panchacharya layout, Vijayanagar 4th Stage, Mysuru Near SVEI School
Price - Rs 1.18 cr
8660105902

ವಧು–ವರರ ಮಾಹಿತಿ ಕೇಂದ್ರ
ಒಕ್ಕಲಿಗ/ಕುರುಬ/ ಲಿಂಗಾಯಿತ/ನಾಯಕ/SC & ಎಲ್ಲಾ ಜಾತಿಯ ವಧು ವರರಿಗಾಗಿ ಸಂಪರ್ಕಿಸಿ
(II Marriage Also)
9343175000

ಹೊಸದಾಗಿ ಪ್ರಾರಂಭವಾಗಿರುವ ಸಸ್ಯಹಾರಿ ಹೋಟೆಲ್‌ಗೆ ಈ ಕೆಳಕಂಡ ಕೆಲಸಗಾರರು ಬೇಕಾಗಿದ್ದಾರೆ.
ಮ್ಯಾನೇಜರ್–2,
ಕಿಚನ್ ಸೂಪರ್‌ವೈಸರ್–2,
ದೋಸೆಭಟ್ಟರು–2,
ಸೌತ್ ಅಸಿಸ್ಟೆಂಟ್–2,
ಕಾಫೀ/ಟೀ, ಜ್ಯೂಸ್ ಮೇಕರ್–2,
ತಂದೂರಿ ಭಟ್ಟರು–2,
7899929233

ಬೇಕಾಗಿದ್ದಾರೆ
ಬಸ್ ಡ್ರೈವರ್ ಹೆವಿ ಡ್ರೈವಿಂಗ್ ಲೈಸೆನ್ಸ್ ಹೊಂದಿರುವುದು ಹಾಗೂ ಅನುಭವವುಳ್ಳ ಚಾಲಕರು ಬೇಕಾಗಿದ್ದಾರೆ.
ಸ್ಥಳ: ತಿರುಮಲ ಪಬ್ಲಿಕ್ ಸ್ಕೂಲ್ ಸರ್ದಾರ್ ವಲ್ಲಭಬಾಯ್ ಪಟೇಲ್ ನಗರ, ಮೈಸೂರು
9148102123

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ
9880813586
6360884930

WANTED
An advertising company related to promotional activities requires Marketing Executives. Salary as per Industry Standards.
9743931983

HOUSE FOR LEASE
Newly Built 2BHK Independent House, Fully Furnished with Solar Ground Floor Only @ Lalithadri Nagar, Near Ring Road Behind Indian Oil Petrol Bunk
9964414484

ಬಾಡಿಗೆಗೆ ಇದೆ
2/3 ರೂಂ ಇರುವ ಹೊಸ ಮನೆ ಬಾಡಿಗೆಗೆ ಇದೆ ಕೆ.ಆರ್. ಶ್ರೀನಿವಾಸನ್ IPS ನಗರ, ಮೈಸೂರು
9980664774
9845570559

HOUSE FOR RENT
30X40, 2BHK, Ground Floor, House N/F Door Muninarayanappa Layout, Srirampura, Mysore
9945046621
9342188460

ಮನೆಯಿಂದಲೇ ಕೆಲಸ
ಮೊಬೈಲ್‌ನಿಂದ ಟೈಪಿಂಗ್ ಕೆಲಸ ಹಾಗೂ ಫಾರಂ ಬರವಣಿಗೆ ಕೆಲಸ ಮಾಡಿ ವಾರಕ್ಕೆ 3600/– ಹಾಗೂ ತಿಂಗಳಿಗೆ 15000/– ವರೆಗೆ ಸಂಪಾದಿಸಿ
9844365756
8073439137

ಬೇಕಾಗಿದ್ದಾರೆ
ಫರ್ನಿಶಿಂಗ್ ಅಂಗಡಿಗೆ ಮಹಿಳೆಯರು Telecallers ಕೆಲಸಕ್ಕೆ ಬೇಕಾಗಿದ್ದಾರೆ. With good communication Skill in Hindi & Kannda 1 year Experience
Address : Akbar Road, Near Ashoka Road,
9916459786

N/E CORNER SITE FOR SALE
32×57 N/E corner site is for sale in Muda approved layout near Srinagar . Loan available from all major banks.
9448019967
9448573721

ಮೈಸೂರಿನ ಸಸ್ಯಹಾರಿ ಹೋಟೆಲ್ ಒಂದಕ್ಕೆ ಅನುಭವವುಳ್ಳ
* ಆಲ್‌ರೌಂಡರ್ ಭಟ್ಟರು – 1
* ರುಬ್ಬುವವರು – 1
* ಕಾಫೀ & ಟೀ ಭಟ್ಟರು – 1
* ಭಜ್ಜಿ ಭಟ್ಟರು – 1
* ಸೌತ್ ಅಸಿಸ್ಟೆಂಟ್ – 1
9449646645

ಮೈಸೂರು ಮಿತ್ರ ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಲಕ್ಷ್ಮಿ ಹಬ್ಬದಂದು ಕಸದ ತೊಟ್ಟಿಯಲ್ಲಿ ಹೆಣ್ಣು ಶಿಶುವಿನ ಮೃತದೇಹ ಪತ್ತೆ

ಕುಶಾಲನಗರ, ಆ.25– ಮಕ್ಕಳಿಗಾಗಿ ನೂರಾರು ದೇವರಿಗೆ ಹರಕೆ ಹೊತ್ತು ಜೊತೆಗೆ ಮಕ್ಕಳನ್ನು ದೇವರೆಂದು ಪೂಜಿಸುವ ಈ ಪುಣ್ಯಭೂಮಿಯಲ್ಲಿ ಮೃತಪಟ್ಟ ಶಿಶುವಿನ ಮೃತದೇಹವನ್ನು ಶಾಸ್ತ್ರೋಕ್ತವಾಗಿ ಅಂತ್ಯಸಂಸ್ಕಾರ ನಡೆಸುವ ಬದಲು ಬಟ್ಟೆ ಸುತ್ತಿ ಕಸದ ತೊಟ್ಟಿಗೆ ಎಸೆಯುವಂತ ಅಮಾನವೀಯ ಘಟನೆಯೊಂದು ನಡೆದಿದೆ.

ವರಮಹಾಲಕ್ಷ್ಮಿ ಹಬ್ಬದಂದು ಕಸ ಸಂಗ್ರಹ ವಾಹನದಲ್ಲಿ ನವಜಾತ ಹೆಣ್ಣು ಶಿಶುವಿನ ಮೃತದೇಹ ಪತ್ತೆಯಾಗಿರುವುದು ಶೋಚನೀಯವಾಗಿದೆ.ಇಲ್ಲಿನ ಪುರಸಭೆಯ ಕಸ ಸಂಗ್ರಹ ಆಟೋ ಟಿಪ್ಪರ್ ನಲ್ಲಿ ಪ್ಲಾಸ್ಟಿಕ್ ನಿಂದ ಸುತ್ತಿದ್ದ ಮೃತದೇಹ ಕಂಡುಬಂದಿದೆ. ಬೆಳಗ್ಗೆ 6.30 ಗಂಟೆಗೆ ಕಸ ಸಂಗ್ರಹ ಕಾರ್ಯ ಆರಂಭಿಸಿದ ಆಟೋ ಟಿಪ್ಪರ್ ಬೈಚನಹಳ್ಳಿ ವ್ಯಾಪ್ತಿಯ ಯೋಗಾನಂದ, ಭವಾನಿ, ಕಾವೇರಿ, ಅಂಬೇಡ್ಕರ್ ಬಡಾವಣೆಯಲ್ಲಿ ಕಸ ಸಂಗ್ರಹಿಸಿ ಹಳೆ ಮಾರುಕಟ್ಟೆಯಲ್ಲಿರುವ ಗೊಬ್ಬರ ತಯಾರಿಕೆ ಘಟಕದಲ್ಲಿ ಕಸ ವಿಲೇವಾರಿ ಸಂದರ್ಭ ಘಟನೆ ಬೆಳಕಿಗೆ ಬಂದಿದೆ.

ಹುಟ್ಟಿ ಒಂದು ದಿನವಾದ ಮಗು ಮೃತಪಟ್ಟಿದ್ದು ದೇಹದಲ್ಲಿ ಯಾವುದೇ ಗಾಯದ ಕಲೆ ಕಂಡುಬಂದಿಲ್ಲ. ಕೂಡಲೆ ಕುಶಾಲನಗರ ಪೊಲೀಸ್ ಠಾಣೆಗೆ ಪುರಸಭೆ ಆರೋಗ್ಯ ನಿರೀಕ್ಷಕ ದೂರು ನೀಡಿದ್ದು ಮಗುವಿನ ಮರಣೋತ್ತರ ಪರೀಕ್ಷೆ ಬಳಿಕ ಅಂತ್ಯಕ್ರಿಯೆ ನಡೆಸಿದ ಪೊಲೀಸರು ಪತ್ತೆ ಕಾರ್ಯ ಕೈಗೊಂಡಿದ್ದಾರೆ.

ಕಳ್ಳನ ಬಂಧನ



ಮಡಿಕೇರಿ, ಆ.25– ಗೋಣಿಕೊಪ್ಪ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ 3 ಕಳ್ಳತನ ಪ್ರಕರಣದ ಆರೋಪಿಯನ್ನು ಗೋಣಿಕೊಪ್ಪ ಪೊಲೀಸರು ಬಂಧಿಸಿದ್ದಾರೆ. ಕೇರಳ ರಾಜ್ಯದ ಕಣ್ಣೂರು ಜಿಲ್ಲೆ ಚಾವಶೇರಿ ನಿವಾಸಿ ಪಿ.ಆರ್.ಸಾದಿಕ್(47) ಎಂಬಾತನೇ ಬಂಧಿತ ಆರೋಪಿ. ವಿರಾಜಪೇಟೆ ಡಿವೈಎಸ್‌ಪಿ ಆರ್.ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಎಂ.ವಿ.ಗೋವಿಂದರಾಜು, ಗೋಣಿಕೊಪ್ಪ ಠಾಣಾಧಿಕಾರಿ ರೂಪಾದೇವಿ ಬಿರಾದರ್ ಮತ್ತು ಸಿಬ್ಬಂದಿಗಳ ತಂಡ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಿದೆ.

ಹಸು ಹುಡುಕಿಕೊಂಡು ಹೋಗುತ್ತಿದ್ದವನ ಮೇಲೆ ಕಾಡಾನೆ ದಾಳಿ, ಸ್ಥಳದಲ್ಲೇ ಸಾವು

ಮಡಿಕೇರಿ, ಆ.25– ಹಸು ಹುಡುಕಿಕೊಂಡು ಹೋದ ವ್ಯಕ್ತಿಯ ಮೇಲೆ ಕಾಡಾನೆ ದಾಳಿ ನಡೆಸಿದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟ ಘಟನೆ ಸೋಮವಾರಪೇಟೆ ತಾಲೂಕಿನಲ್ಲಿ ನಡೆದಿದೆ. ಸೋಮವಾರಪೇಟೆ ತಾಲೂಕಿನ ಅಡಿಯನಾಡೂರು ಗ್ರಾಮದ ಈರಪ್ಪ(60) ಎಂಬವರೇ ಮೃತ ಕೃಷಿಕ. ಶುಕ್ರವಾರ ಬೆಳಿಗ್ಗೆ 7 ಗಂಟೆ ಸಮಯದಲ್ಲಿ ಹಾಲು ಕೊಡುವ ಹಸುವನ್ನು ಹುಡುಕಿಕೊಂಡು ಗೌರಿಗದ್ದೆ ಸಮೀಪದಲ್ಲಿ ಈರಪ್ಪ ಕಾಲ್ನಡಿಗೆಯಲ್ಲಿ ತೆರಳುತ್ತಿದ್ದರು. ಈ ವೇಳೆ ಪಕ್ಕದ ಅರಣ್ಯದಿಂದ ಓಡಿ ಬಂದ ಕಾಡಾನೆ ಹಠಾತ್ ಈರಪ್ಪ ಅವರ ಮೇಲೆ ದಾಳಿ ನಡೆಸಿದೆ. ಪರಿಣಾಮ ಈರಪ್ಪ ಸ್ಥಳದಲ್ಲೆ ಮೃತಪಟ್ಟಿದ್ದಾರೆ. ಘಟನಾ ಸ್ಥಳಕ್ಕೆ ಅರಣ್ಯ ಇಲಾಖೆ ಮತ್ತು ಸೋಮವಾರಪೇಟೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಸೋಮವಾರಪೇಟೆ ಸರಕಾರಿ ಆಸ್ಪತ್ರೆಯಲ್ಲಿ ಮೃತ ದೇಹದ ಮರಣೋತ್ತರ ಪರೀಕ್ಷೆ ನಡೆಸಿ ವಾರಸುದಾರರಿಗೆ ಹಸ್ತಾಂತರಿಸಲಾಯಿತು.

ತೋಟದಲ್ಲಿ ಜೂಜಾಡುತ್ತಿದ್ದ 8 ಮಂದಿ ಬಂಧನ

ಮಡಿಕೇರಿ, ಆ.25– ತೋಟದಲ್ಲಿ ಅಕ್ರಮವಾಗಿ ಜೂಜಾಡುತ್ತಿದ್ದ 8 ಮಂದಿಯನ್ನು ಮಡಿಕೇರಿ ಗ್ರಾಮಾಂತರ ಠಾಣೆ ಪೊಲೀಸರು ಬಂಧಿಸಿದ್ದಾರೆ.



ಕಾಂತೂರು–ಮೂರ್ನಾಡು ಗ್ರಾಮದ ನಿವಾಸಿ ಕೆ.ವಿ. ಚೇತನ್ ಎಂಬವರ ತೋಟದಲ್ಲಿ ಜೂಜಾಡುತ್ತಿರುವ ಬಗ್ಗೆ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಂದರ್ಭ ಆರೋಪಿಗಳು ಸೆರೆಯಾಗಿದ್ದಾರೆ.

ತೋಟದ ಮಾಲೀಕ ಚೇತನ್.ಕೆ.ವಿ(38), ಪಾಲೂರಿನ ಶೇಖರ್ ಪಿ.ಎಸ್.(50), ಅವಂದೂರು ಗ್ರಾಮದ ಶರತ್ ಕುಮಾರ್(42), ಹೊಸ್ಕೇರಿ ಗಣೇಶ್(48), ಕಟ್ಟೆಮಾಡುವಿನ ಸತೀಶ್ ಪಿ.ಟಿ(38), ಅಪ್ಪಂಗಾಳದ ಕೆ.ಎಂ.ಕಾರ್ಯಪ್ಪ(44), ಹೆರಮಾಡುವಿನ ಸಕೇಶ್ ಕುಮಾರ್(43), ದೇಚೂರಿನ ಬಿ.ಎಸ್.ರವಿ(35) ಎಂಬವರೇ ಬಂಧಿತ ಆರೋಪಿಗಳಾಗಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಎಂ.ಜಗದೀಶ್, ವೃತ್ತ ನಿರೀಕ್ಷಕ ಯು.ಉಮೇಶ್, ಠಾಣಾಧಿಕಾರಿ ಶ್ರೀನಿವಾಸಲು ಮತ್ತು ಗ್ರಾಮಾಂತರ ಪೊಲೀಸ್ ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಸೌಜನ್ಯ ಅತ್ಯಾಚಾರ, ಹತ್ಯಾ ಪ್ರಕರಣ ಮರುತನಿಖೆಗೆ ಆಗ್ರಹಿಸಿ

ಕಾಂಗ್ರೆಸ್‌ನಿಂದ ಡಿಸಿ ಕಚೇರಿ ಮುಂದೆ ಪ್ರತಿಭಟನೆ

ಮಡಿಕೇರಿ, ಆ.25– ಸೌಜನ್ಯ ಅತ್ಯಾಚಾರ ಮತ್ತು ಹತ್ಯಾ ಪ್ರಕರಣದ ಮರು ತನಿಖೆ ನಡೆಸುವ ಮೂಲಕ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿ ಕಾಂಗ್ರೆಸ್‌ನಿಂದ ನಗರದ ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಪ್ರತಿಭಟನೆ ನಡೆಸಲಾಯಿತು.



ಕೊಡಗು ಜಿಲ್ಲಾ ಯುವ ಕಾಂಗ್ರೆಸ್, ಮಡಿಕೇರಿ ಬ್ಲಾಕ್ ಯುವ ಕಾಂಗ್ರೆಸ್ ಮತ್ತು ಮಡಿಕೇರಿ ನಗರ ಯುವ ಕಾಂಗ್ರೆಸ್ ಸಂಯುಕ್ತಾಶ್ರಯದಲ್ಲಿ ಪಕ್ಷದ ಪ್ರಮುಖರು ಮತ್ತು ಸದಸ್ಯರು, ಜಿಲ್ಲಾಧಿಕಾರಿಗಳ ಕಚೇರಿ ಮುಂಭಾಗ ಸಮಾವೇಶಗೊಂಡು, ಘೋಷಣೆಗಳ ಕೂಗಿ ಪ್ರತಿಭಟನೆ ನಡೆಸಿದರು. ಸೌಜನ್ಯ ಹತ್ಯಾ ಪ್ರಕರಣದ ಮರು ತನಿಖೆ ನಡೆಸಿ, ತಪ್ಪಿತಸ್ಥರಿಗೆ ಗಲ್ಲು ಶಿಕ್ಷೆ ನೀಡಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಮಡಿಕೇರಿ ನಗರ ಯುವ ಕಾಂಗ್ರೆಸ್ ಅಧ್ಯಕ್ಷ ದರ್ಶನ್ ಪೂಣಚ್ಚ ಮಾತನಾಡಿ, ಕಳೆದ 11 ವರ್ಷಗಳ ಹಿಂದೆ ಸೌಜನ್ಯಳನ್ನು ಅತ್ಯಾಚಾರಗೈದು ಹತ್ಯೆ ಮಾಡಲಾಗಿತ್ತು. ಈ ಸಂಬಂಧ ಸಂತೋಷ್ ಎಂಬಾತನನ್ನು ಬಂಧಿಸಲಾಗಿತ್ತಾದರು, ಸಿಬಿಐ ನ್ಯಾಯಾಲಯ ಆತನನ್ನು ನಿರ್ದೋಷಿ ಎಂದು ಬಿಡುಗಡೆ ಮಾಡಿದೆ. ಈ ಹಿನ್ನೆಲೆ ಪ್ರಕರಣದ ನೈಜ ಆರೋಪಿಗಳನ್ನು ಕಂಡು ಹಿಡಿಯಲು ಮರು ತನಿಖೆ ನಡೆಸಬೇಕೆಂದು ಆಗ್ರಹಿಸಿ ಜಿಲ್ಲಾಡಳಿತದ ಮೂಲಕ ರಾಜ್ಯಪಾಲರಿಗೆ ಮನವಿ ಮಾಡುತ್ತಿರುವುದಾಗಿ ತಿಳಿಸಿದರು.

ಕಾಂಗ್ರೆಸ್ ವಕ್ತಾರ ತೆನ್ನಿರ ಮೈನ ಮಾತನಾಡಿ, 11 ವರ್ಷಗಳ ಹಿಂದೆ ಸೌಜನ್ಯ ಹತ್ಯೆ ನಡೆದ ಬಳಿಕ ಅಂದಿನ ಸರ್ಕಾರ ತನಿಖೆಯ ಹಾದಿಯನ್ನು ತಪ್ಪಿಸಿತೆಂದು ಆರೋಪಿಸಿದರು. ಅಂದು ಸಿಐಡಿ ತನಿಖೆಯ ಬಳಿಕ ಸಿಬಿಐ ತನಿಖೆ ನಡೆದಿತ್ತಾದರು, ಸೌಜನ್ಯ ಸಾವಿಗೆ ನ್ಯಾಯ ದೊರಕಿಲ್ಲ. ಈ ಹಿನ್ನೆಲೆ ಒಟ್ಟು ಪ್ರಕರಣದ ಮರು ತನಿಖೆಗೆ ಆಗ್ರಹಿಸಲಾಗುತ್ತಿದೆ ಎಂದು ತಿಳಿಸಿದರು.

ಅಮಾಯಕ ಹೆಣ್ಣು ಮಗಳ ಹತ್ಯೆಗೆ ಸಂಬಂಧಿಸಿದಂತೆ ಸೂಕ್ತ ತನಿಖೆ ನಡೆಸಿ, ತಪ್ಪಿತಸ್ಥರನ್ನು ಪತ್ತೆ ಹಚ್ಚಿ ಶಿಕ್ಷೆಗೆ ಒಳಪಡಿಸಲೇಬೇಕು. ಇಷ್ಟು ವರ್ಷಗಳಾದರು ವಿದ್ಯಾರ್ಥಿನಿ ಸೌಜನ್ಯಳ ಸಾವಿಗೆ ಸಂಬಂಧಿಸಿದ ಆರೋಪಿಗಳನ್ನು ಬಂಧಿಸದೆ ಇರುವುದು ಮಹಿಳಾ ಸಮುದಾಯಕ್ಕೆ ಮಾಡಿದ ಅವಮಾನವಾಗಿದೆ. ದುಷ್ಕೃತ್ಯವೆಸಗಿದವರನ್ನು ಬಂಧಿಸಿ ಕಠಿಣ ಕಾನೂನು ಕ್ರಮಕ್ಕೆ ಒಳಪಡಿಸಬೇಕೆಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಪ್ರತಿಭಟನೆಯಲ್ಲಿ ಮಡಿಕೇರಿ ನಗರ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್, ಮಡಿಕೇರಿ ನಗರಸಭಾ ಸದಸ್ಯ ರಾಜೇಶ್ ಯಲ್ಲಪ್ಪ, ಪಕ್ಷದ ಪ್ರಮುಖರಾದ ಕೊಟ್ಟಮುಡಿ ಹಂಸ, ಕೆ.ಜೆ.ಪೀಟರ್, ಜುಲೇಕಾಬಿ, ಸದಾ ಮುದ್ದಪ್ಪ ಪುಷ್ಪ ಪೂಣಚ್ಚ ಚಂದ್ರಶೇಖರ್ ಸೇರಿದಂತೆ ಹಲ ಪ್ರಮುಖರು ಪಾಲ್ಗೊಂಡಿದ್ದರು.

ಕರಾಟೆ ಪಟುಗಳಿಗೆ ಬ್ಲ್ಯಾಕ್‌ಬೆಲ್ಟ್ ವಿತರಣೆ



ಗೋಣಿಕೊಪ್ಪ, ಆ.25– ಕರಾಟೆ ಪರೀಕ್ಷೆಯಲ್ಲಿ ತೇರ್ಗಡೆಯಾದ ಕರಾಟೆಪಟುಗಳಿಗೆ ಲಯನ್ಸ್ ಶಾಲಾ ಸಭಾಂಗಣದಲ್ಲಿ ಕರಾಟೆ ಮುಖ್ಯ ತರಬೇತುದಾರ ಚೆಪ್ಪುಡೀರ ಅರುಣ್ ಮಾಚಯ್ಯ ಬ್ಲ್ಯಾಕ್‌ಬೆಲ್ಟ್ ಪ್ರದಾನ ಮಾಡಿದರು. ತನಿಕಾ ನೀಲಮ್ಮ, ತಶನ್ ನಂಜಪ್ಪ, ಜಶ್ ಕಾವೇರಪ್ಪ, ದಿಶಾ ಚೆಂಗಪ್ಪ, ಆಂಥೋನಿ, ಡೆರಿನ್ ದೇವಯ್ಯ ಬ್ಲ್ಯಾಕ್ ಬೆಲ್ಟ್ ಸ್ವೀಕರಿಸಿದರು. ಈ ಸಂದರ್ಭದಲ್ಲಿ ತರಬೇತುದಾರರಾದ ಜಮ್ಮಡ ಜಯ ಜೋಯಪ್ಪ, ಕಳ್ಳಿಕಂಡ ಕಿಶೋರ್ ಇತರರಿದ್ದರು.

ಇಂದು ಕೊಡಗಿಗೆ ಅರಣ್ಯ ಸಚಿವ



ಮಡಿಕೇರಿ, ಆ.25– ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು ಆ.26 ರಂದು ಕೊಡಗು ಜಿಲ್ಲಾ ಪ್ರವಾಸ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಸಚಿವರು ಆ.26 ರಂದು ಬೆಳಗ್ಗೆ 11.30 ಗಂಟೆಗೆ ತಿತಿಮತಿ ಬಂಬು ಕಾಡಿನಲ್ಲಿ ಆನೆ ದಾಳಿಯಿಂದ ಒಳಗಾದ ಸಂತ್ರಸ್ತರ ಮನೆಗೆ ಭೇಟಿ ನೀಡಲಿದ್ದಾರೆ. ನಂತರ ಮಧ್ಯಾಹ್ನ 12.30 ಗಂಟೆಗೆ ಮಾಲ್ದಾರೆ ಗ್ರಾಮ ಪಂಚಾಯಿತಿಯಲ್ಲಿ ಸ್ಥಳ ವೀಕ್ಷಣೆ ಮಾಡಲಿದ್ದಾರೆ. ಬಳಿಕ ಮಧ್ಯಾಹ್ನ 1.30 ಗಂಟೆಗೆ ಅರೆಕಾಡು ಪೈಸಾರಿಗೆ ಭೇಟಿ ನೀಡಲಿದ್ದಾರೆ. ಬಳಿಕ ಮಧ್ಯಾಹ್ನ 3.30 ಗಂಟೆಗೆ ನಗರದ ಜಿಲ್ಲಾ ಪಂಚಾಯತಿ ಕಚೇರಿ ಸಭಾಂಗಣದಲ್ಲಿ ಅರಣ್ಯ ಅಧಿಕಾರಿಗಳು ಮತ್ತು ಹಿರಿಯ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಎ.ಆರ್.ರವಿ ತಿಳಿಸಿದ್ದಾರೆ.

ಮಾಜಿ ಸೈನಿಕರ ಸಂಘದ ವಾರ್ಷಿಕ ಮಹಾಸಭೆ

ಮಡಿಕೇರಿ, ಆ.25– ಮಾಜಿ ಸೈನಿಕರ ಸಂಘ, ಮಡಿಕೇರಿ ಇದರ 2022–2023 ನೇ ಸಾಲಿನ ವಾರ್ಷಿಕ ಮಹಾಸಭೆಯು ಆ.27 ರಂದು ಬೆಳಗ್ಗೆ 10.30 ಗಂಟೆಗೆ ನಗರದ ರೋಟರಿ ಹಾಲ್‌ನಲ್ಲಿ ನಡೆಯಲಿದೆ ಎಂದು ಮಡಿಕೇರಿ ಮಾಜಿ ಸೈನಿಕರ ಸಂಘದ ಅಧ್ಯಕ್ಷ ಪಿ.ಕೆ.ಕುಟ್ಟಪ್ಪ ಅವರು ತಿಳಿಸಿದ್ದಾರೆ.

ವೀರಸೇನಾನಿ ಜನರಲ್ ತಿಮ್ಮಯ್ಯ ಪ್ರತಿಮೆ ಶೀಘ್ರ ಪುನರ್ ಸ್ಥಾಪಿಸಿ: ಎ.ಎಸ್.ಪೊನ್ನಣ್ಣ

ಮಡಿಕೇರಿ, ಆ.25– ರಾಷ್ಟ್ರಕಂಡ ಮಹಾನ್ ಸೇನಾ ನಾಯಕ, ವೀರಸೇನಾನಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಪ್ರತಿಮೆಯನ್ನು ಶೀಘ್ರ ಪುನರ್ ಸ್ಥಾಪಿಸಬೇಕು ಎಂದು ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರು ಹಾಗೂ ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರ ಎ.ಎಸ್.ಪೊನ್ನಣ್ಣ ಅವರು ತಿಳಿಸಿದ್ದಾರೆ.

ನಗರದ ಜನರಲ್ ತಿಮ್ಮಯ್ಯ ಸ್ಮಾರಕ ಭವನಕ್ಕೆ ಸ್ಥಳಾಂತರಿಸಲಾಗಿರುವ ವೀರಸೇನಾನಿ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ವೀಕ್ಷಿಸಿದ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದರು. ಮಾಜಿ ಸಚಿವರಾದ ಎಂ.ಸಿ.ನಾಣಯ್ಯ ಹಾಗೂ ಸ್ಥಳೀಯ ಶಾಸಕರಾದ ಡಾ. ಮಂಥರ್ ಗೌಡ ಅವರ ನೇತೃತ್ವದಲ್ಲಿ ಇತ್ತೀಚೆಗೆ ನಡೆದ ಸಭೆಯಲ್ಲಿ ಕೈಗೊಂಡಿರುವ ತೀರ್ಮಾನದಂತೆ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಪುನರ್ ನಿರ್ಮಾಣ ಮಾಡಬೇಕು ಎಂದು ಎ.ಎಸ್. ಪೊನ್ನಣ್ಣ ಹೇಳಿದರು.



ಪ್ರತಿಮೆ ಪುನರ್ ನಿರ್ಮಾಣ ಸಂಬಂಧ ಈಗಾಗಲೇ ಅಂದಾಜು ಪಟ್ಟಿ ತಯಾರಿಸಲಾಗಿದ್ದು, ಕೆಎಸ್‌ಆರ್ ಟಿಸಿ ವಿಭಾಗದಿಂದ 10 ಲಕ್ಷ ರೂ. ಭರಿಸಲಿದ್ದಾರೆ ಎಂದು ಅವರು ವಿವರಿಸಿದರು. ಕೊಡಗಿನ ಜನರ ಭಾವನೆಗೆ ಧಕ್ಕೆ ಆಗದಂತೆ ವೀರಸೇನಾನಿ ಜನರಲ್ ತಿಮ್ಮಯ್ಯ ಅವರ ಪ್ರತಿಮೆಯನ್ನು ಪುನರ್ ಸ್ಥಾಪಿಸಲಾಗುವುದು. ಆ ನಿಟ್ಟಿನಲ್ಲಿ ಜಿಲ್ಲಾಡಳಿತ ತುರ್ತು ಕ್ರಮವಹಿಸುವಂತೆ ನಿರ್ದೇಶನ ನೀಡಿದರು.

ಪ್ರತಿಮೆ ವೀಕ್ಷಣೆಗೂ ಮೊದಲು ಜನರಲ್ ತಿಮ್ಮಯ್ಯ ವೃತ್ತಕ್ಕೆ ಭೇಟಿ ನೀಡಿ ಶಾಸಕರು ವೀಕ್ಷಿಸಿದರು. ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ಅನಿತಾ ಪೂವಯ್ಯ, ಉಪ ವಿಭಾಗಾಧಿಕಾರಿ ಡಾ.ಯತೀಶ್ ಉಳ್ಳಾಲ್, ಕೆಎಸ್‌ಆರ್‌ಟಿಸಿ ಮಡಿಕೇರಿ ಘಟಕದ ವ್ಯವಸ್ಥಾಪಕರಾದ ಗೀತಾ, ಪ್ರಮುಖರಾದ ತೆನ್ನಿರಾ ಮೈನಾ, ಬಿ.ಎಸ್.ತಮ್ಮಯ್ಯ, ಧರ್ಮಜ ಉತ್ತಪ್ಪ ಇತರರು ಇದ್ದರು.

ಜಿಲ್ಲೆಯಾದ್ಯಂತ ವರಮಹಾಲಕ್ಷ್ಮಿ ಹಬ್ಬ ಶ್ರದ್ಧಾಭಕ್ತಿಯಿಂದ ಆಚರಣೆ





ಚಾಮರಾಜನಗರ, ಆ.25– ಜಿಲ್ಲೆಯಾದ್ಯಂತ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬವನ್ನು ಸಂಭ್ರಮ, ಸಡಗರ ಹಾಗೂ ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೇಗಾಲ, ಯಳಂದೂರು, ಹನೂರು ಸೇರಿದಂತೆ ಗ್ರಾಮೀಣ ಪ್ರದೇಶಗಳಲ್ಲಿ ವರಮಹಾಲಕ್ಷ್ಮೀ ವ್ರತಾಚರಣೆಯನ್ನು ಮಹಿಳೆಯರು ಸಂಭ್ರಮದಿಂದ ಆಚರಿಸಿದರು.

ಮನೆ–ಮನೆಗಳಲ್ಲಿ ಶುಕ್ರವಾರ ಹಬ್ಬದ ವಾತಾವರಣ ಕಂಡು ಬಂತು. ಮನೆಗಳನ್ನು ಬಾಳೆ ಕಂದು, ಮಾವಿನ ಸೊಪ್ಪು, ಕಬ್ಬಿನ ಪೈರಿನ ತೋರಣಗಳಿಂದ ಸಿಂಗರಿಸಲಾಗಿತ್ತು. ಮನೆಗಳ ಮುಂಭಾಗ ಮಹಿಳೆಯರು ಆಕರ್ಷಕ ಬಣ್ಣ ಬಣ್ಣದ ರಂಗೋಲಿ ಬಿಡಿಸಿ, ಹಬ್ಬಕ್ಕೆ ಕಳೆ ಕಟ್ಟಿಸಿದರು. ಹೊಸ ಸೀರೆ ಧರಿಸಿ ಕಂಗೊಳಿಸುತ್ತಿದ್ದ ಸುಮಂಗಲಿಯರು ಮನೆಗಳಲ್ಲಿ ಮಹಾಲಕ್ಷ್ಮೀಯ ವಿಗ್ರಹ ಸ್ಥಾಪಿಸಿ, ಹೂವು, ಚಿನ್ನಾಭರಣಗಳಿಂದ ಅಲಂಕರಿಸಿ ಪೂಜೆ ಸಲ್ಲಿಸಿದರು. ಇವರಿಗೆ ಹೆಣ್ಣು ಮಕ್ಕಳು ಜೊತೆಯಾದರು.

ಹಬ್ಬದ ವಿಶೇಷವಾಗಿ ಮನೆಯಲ್ಲಿ ಒಬ್ಬಟ್ಟು, ಚಕ್ಕುಲಿ, ಕೋಡುಬಳೆ, ಕರ್ಜಿಕಾಯಿ, ಪಾಯಸ ಇತರೆ ವಿಶೇಷ ತಿಂಡಿ, ತಿನಿಸುಗಳನ್ನು ತಯಾರಿಸಿ ಮಹಾಲಕ್ಷ್ಮೀಗೆ ನೈವೇದ್ಯ ಅರ್ಪಿಸಿದರು. ನಗ, ನಾಣ್ಯಗಳನ್ನು ಲಕ್ಷ್ಮೀಯ ಮುಂದೆ ಇಟ್ಟು ಪ್ರಾರ್ಥಿಸಿದರು. ಸಂಜೆ ವೇಳೆ ಮುತ್ತೈದೆಯರನ್ನು ಮನೆಗೆ ಕರೆದು, ಅವರಿಗೆ ಅರಿಶಿನ, ಕುಂಕುಮ, ಬಳೆ ಹಾಗೂ ಸಿಹಿಯನ್ನು ನೀಡಿ ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಂಡರು. ಹಬ್ಬದ ಅಂಗವಾಗಿ ಮನೆಗಳಲ್ಲಿ ವಿಶೇಷ ಅಡುಗೆ ಸಿದ್ಧಪಡಿಸಲಾಗಿತ್ತು. ನೆಂಟರಿಷ್ಟರು, ಸ್ನೇಹಿತರನ್ನು ಮನೆಗಳಿಗೆ ಆಹ್ವಾನಿಸಿ ಹೋಳಿಗೆ ಊಟ ಬಡಿಸಿ, ತಾವೂ ಸವಿದರು.



ಶ್ರಾವಣ ಮಾಸದ ಹುಣ್ಣಿಮೆಯ ಹಿಂದಿನ ಶುಕ್ರವಾರ ವರಮಹಾಲಕ್ಷ್ಮೀ ಹಬ್ಬ ಆಚರಿಸಲಾಗುತ್ತದೆ. ಈ ಹಬ್ಬದಂದು ಮಹಾ ಲಕ್ಷ್ಮಿಯನ್ನು ಪೂಜಿಸಿದರೆ ಕುಟುಂಬದಲ್ಲಿ ಸುಖ, ಶಾಂತಿ, ನೆಮ್ಮದಿ ನೆಲೆಸುತ್ತದೆ. ಅಷ್ಟ ಐಶ್ವರ್ಯ ಲಭಿಸುತ್ತದೆ ಎಂಬ ನಂಬಿಕೆ ಭಕ್ತರದ್ದು. ಹೊಸ ವಾಹನಗಳ ಖರೀದಿ, ಉದ್ಯಮ ಸ್ಥಾಪನೆ ಸೇರಿದಂತೆ ಹೊಸ ಕೆಲಸಗಳನ್ನು ಈ ದಿನ ಕೈಗೆತ್ತಿಕೊಂಡರೆ ಯಶಸ್ಸು ಸಿಗುತ್ತದೆ ಎಂಬ ನಂಬಿಕೆಯೂ ಜನರಲ್ಲಿದೆ.

ದೇವಾಲಯಗಳಲ್ಲಿ ವಿಶೇಷ ಪೂಜೆ: ಇನ್ನೂ ವರಮಹಾಲಕ್ಷ್ಮೀ ಹಬ್ಬದ ಅಂಗವಾಗಿ ನಗರದ ಹೊರವಲಯದಲ್ಲಿ ರುವ ಕರಿವರದರಾಜಸ್ವಾಮಿ ಬೆಟ್ಟ, ಗುಂಡ್ಲುಪೇಟೆ ವೃತ್ತದ ಸಮೀಪದ ಶ್ರೀದೇವಿ ಭೂದೇವಿ ಸಮೇತ ವರಾಹಸ್ವಾಮಿ, ಹಳೆ ಖಾಸಗಿ ಬಸ್ ನಿಲ್ದಾಣದಲ್ಲಿರುವ ಲಕ್ಷ್ಮೀಕಾಂತಸ್ವಾಮಿ ದೇವಾಲಯ, ಹರಳುಕೋಟೆ ಜನಾರ್ಧನ ಸ್ವಾಮಿ, ಆಂಜನೇಯ ಸ್ವಾಮಿ, ಸಂತೇಮರಹಳ್ಳಿ ವೃತ್ತದಲ್ಲಿನ ಕಾರ್ಯಸಿದ್ಧಿ ಆಂಜನೇಯ ಸ್ವಾಮಿ ದೇವಾಲಯ ಹಾಗೂ ಕೊಳದ ಬೀದಿಯಲ್ಲಿರುವ ಗಣಪತಿ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಶನೀಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಇನ್ನು, ಜಿಲ್ಲೆಯ ಗುಂಡ್ಲುಪೇಟೆ ತಾಲೂಕಿನ ಹಿಮವದ್ ಗೋಪಾಲಸ್ವಾಮಿ ಬೆಟ್ಟ, ಹುಲುಗನಮುರಡಿ ವೆಂಕಟರಮಣ ಸ್ವಾಮಿ, ಬಿಳಿಗಿರಿರಂಗನ ಬೆಟ್ಟದ ಬಿಳಿಗಿರಿ ರಂಗನಾಥ ಸ್ವಾಮಿ, ಯಳಂದೂರಿನ ಭೂವರಾಹ ನರಸಿಂಹಸ್ವಾಮಿ ದೇವಾಲಯ, ಚಿಕ್ಕಲ್ಲೂರು ಸಿದ್ದಪ್ಪಾಜಿ ದೇವಸ್ಥಾನ, ಕುರುಬನಕಟ್ಟೆ ದೇವಾಲಯಗಳಿಗೆ ಹೆಚ್ಚಿನ ಸಂಖ್ಯೆಯ ಭಕ್ತರು ಆಗಮಿಸಿ ಪೂಜೆ ಸಲ್ಲಿಸಿದರು.

ಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿಯೂ ಕೂಡ ಹಬ್ಬದ ಅಂಗವಾಗಿ ಮಾದಪ್ಪನಿಗೆ ವಿಶೇಷ ಹೂವಿನ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು. ಭಕ್ತರು ಮಾದಪ್ಪನ ದರ್ಶನ ಪಡೆದು, ತಮ್ಮ ಹರಕೆಗಳನ್ನು ಸಲ್ಲಿಸಿದರು. ಅಲ್ಲದೇ ಜಿಲ್ಲೆಯ ಕೊಳ್ಳೇಗಾಲ, ಯಳಂದೂರು, ಹನೂರು, ಚಾಮರಾಜನಗರ ಹಾಗೂ ಗುಂಡ್ಲುಪೇಟೆ ಪಟ್ಟಣ ಸೇರಿದಂತೆ ಜಿಲ್ಲೆಯ ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲಾ ದೇವಾಲಯಗಳಲ್ಲಿ ವಿಶೇಷ ಪೂಜೆ ಪುನಸ್ಕಾರಗಳು ನಡೆಯಿತು.

ಶ್ರಾವಣ ಮಾಸದ ಮೊದಲ ಹಬ್ಬ ಶ್ರೀ ಮಹಾಲಕ್ಷ್ಮಿ ಹಬ್ಬ ಆಚರಣೆ



ಗುಂಡ್ಲುಪೇಟೆ, ಆ.25– ಶ್ರಾವಣ ಮಾಸದ ಮೊದಲ ಹಬ್ಬ ಶ್ರೀ ವರಮಹಾಲಕ್ಷ್ಮೀ ಹಬ್ಬವನ್ನು ಪಟ್ಟಣ ಹಾಗೂ ತಾಲೂಕಿನಾದ್ಯಂತ ಶ್ರದ್ಧಾ–ಭಕ್ತಿ, ಸಂಭ್ರಮ ಮತ್ತು ಸಡಗರದಿಂದ ಆಚರಿಸಲಾಯಿತು.

ಪಟ್ಟಣದ ಬಹುತೇಕ ಮನೆಗಳಲ್ಲಿ ವಿವಿಧ ಬಣ್ಣ ಬಣ್ಣದ ರಂಗೋಲಿಗಳನ್ನು ಹಾಕಿ, ತಳಿರು ತೋರಣ ಮತ್ತು ಹೂವುಗಳಿಂದ ಅಲಂಕಾರ ಮಾಡಿ ಲಕ್ಷ್ಮೀದೇವಿಯ ಮುಖವಾಡವನ್ನು ಧರಿಸಿ ಚಿನ್ನಾಭರಣವನ್ನು ತೊಡಿಸಿ ಹೂವುಗಳಿಂದ ಅಲಂಕಾರ ಮಾಡಿ ಪೂಜೆ ಸಲ್ಲಿಸಲಾಯಿತು. ಹಬ್ಬದ ಹಿನ್ನೆಲೆಯಲ್ಲಿ ಬಂಧು ಮಿತ್ರರನ್ನು ಮನೆಗೆ ಆಹ್ವಾನಿಸಿ ಅರಿಶಿಣ, ಕುಂಕುಮ ಮತ್ತು ಹಸಿರು ಗಾಜಿನ ಬಳೆಗಳನ್ನು ಕಾಣಿಕೆಯಾಗಿ ನೀಡುವುದರೊಂದಿಗೆ ಸುಮಂಗಲಿಯರು ವಿಶೇಷ ಪೂಜೆ ಸಲ್ಲಿಸಿದರು.

ವಿವಿಧ ಬಗೆಯ ಹಣ್ಣು ಮತ್ತು ನೈವೇದ್ಯವನ್ನು ದೇವಿಗೆ ಅರ್ಪಿಸುವುದರೊಂದಿಗೆ ತಮ್ಮ ಭಕ್ತಿಭಾವವನ್ನು ಮೆರೆದರು. ಹೆಂಗಸರು ಮತ್ತು ಮಕ್ಕಳು ಹೊಸ ಬಟ್ಟೆಗಳನ್ನು ಧರಿಸಿ ಸ್ನೇಹಿತೆಯರ ಮನೆಗಳಿಗೆ ಭೇಟಿ ನೀಡಿ ಕುಂಕುಮವನ್ನು ತೆಗೆದುಕೊಂಡು ಹಬ್ಬದ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳುತ್ತಿದುದು ಸಾಮಾನ್ಯವಾಗಿತ್ತು.

ಮಾದಪ್ಪನ ಸನ್ನಿಧಿಯಲ್ಲಿ ಕುಡುಕರ ಪುಂಡಾಟ

- ನಾಗಮಲೆ ಭವನದಲ್ಲಿ ಯುವಕರ ದಾಂಧಲೆ
- ಐವರ ವಿರುದ್ಧ ಪ್ರಕರಣ ದಾಖಲು

ಚಾಮರಾಜನಗರ, ಆ.23– ರಾಜ್ಯದ ಪ್ರಸಿದ್ಧ ಯಾತ್ರಾಸ್ಥಳವಾದ ಮಲೆಮಹದೇಶ್ವರ ಬೆಟ್ಟದಲ್ಲಿ ಪುಂಡರ ಹಾವಳಿ ಹೆಚ್ಚಾಗಿದೆ. ಇಲ್ಲಿನ ವಸತಿಗೃಹಗಳಲ್ಲಿ ಭಕ್ತರ ಸೋಗಿನಲ್ಲಿ ವಾಸ್ತವ್ಯ ಹೂಡುವ ಕೆಲ ಯುವಕರು ಮದ್ಯಪಾನ ಮಾಡಿ ಪುಂಡಾಟ ನಡೆಸುವುದು ಇತ್ತೀಚೆಗೆ ಸರ್ವೇ ಸಾಮಾನ್ಯವಾಗಿದೆ.

ಗುರುವಾರ ರಾತ್ರಿ ಐವರು ಯುವಕರು ನಾಗಮಲೆ ಭವನದಲ್ಲಿ ಪಾನಮತ್ತರಾಗಿ ಪುಂಡಾಟ ಮೆರೆದಿದ್ದಾರೆ. ಇವರ ವರ್ತನೆಯಿಂದ ಬೇಸತ್ತ ಪಕ್ಕದ ಕೊಠಡಿಯಲ್ಲಿ ವಾಸ್ತವ್ಯವಿದ್ದ ಮಹಿಳೆ ನಾಗಮಲೆ ಭವನದ ಸಿಬ್ಬಂದಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಸಿಬ್ಬಂದಿಯು ಯುವಕರನ್ನು ಪ್ರಶ್ನಿಸಿದಾಗ, ಅವರ ಮೇಲೂ ದಬ್ಬಾಳಿಕೆ ನಡೆಸಲಾಗಿದೆ.

ಗುಂಡ್ಲುಪೇಟೆ ತಾಲೂಕಿನ ಮಹೇಂದ್ರ, ಸಿದ್ದಪ್ಪ, ಮಾದಪ್ಪ, ಆನಂದ್ ಸೇರಿದಂತೆ ಐವರು ಯುವಕರು ಕುಡಿದ ಮತ್ತಿನಲ್ಲಿ ಪುಂಡಾಟ ನಡೆಸಿದ್ದು, ಸಿಬ್ಬಂದಿಯು ಎಷ್ಟೇ ತಿಳಿವಳಿಕೆ ಹೇಳಿದರೂ ಅವರ ವಿರುದ್ಧವೇ ಗಲಾಟೆ ಮಾಡಿದ ಕಾರಣದಿಂದಾಗಿ ಸಿಬ್ಬಂದಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ತಕ್ಷಣವೇ ಸ್ಥಳಕ್ಕಾಗಮಿಸಿದ ಪೊಲೀಸರು ಯುವಕರನ್ನು ವಶಕ್ಕೆ ಪಡೆದು, ಪ್ರಕರಣ ದಾಖಲಿಸಿಕೊಂಡ ನಂತರ ಮುಚ್ಚಳಿಕೆ ಬರೆಸಿಕೊಂಡು ಯುವಕರನ್ನು ಬಿಡುಗಡೆ ಮಾಡಿದ್ದಾರೆ.

ಮಲೆ ಮಹದೇಶ್ವರ ಬೆಟ್ಟದಲ್ಲಿ ಮದ್ಯಪಾನ ಮಾರಾಟ ನಿಷೇಧವಿದೆ. ಇಲ್ಲಿ ಯಾವುದೇ ಮದ್ಯದಂಗಡಿ ಇಲ್ಲ. ಆದರೂ ಕೂಡ ಕೆಲವರು ಮನೆಗಳಲ್ಲಿ ಮದ್ಯವನ್ನು ಸಂಗ್ರಹಿಸಿಟ್ಟುಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಸ್ಥಳೀಯರು ಆರೋಪಿಸಿದ್ದಾರೆ. ಬೆಟ್ಟದಲ್ಲಿ ವಾಸ್ತವ್ಯ ಹೂಡುವ ಯುವಕರನ್ನು ಸಂಪರ್ಕಿಸುವ ಮದ್ಯ ಮಾರಾಟಗಾರರು ಅವರಿರುವ ಸ್ಥಳಕ್ಕೆ ಮದ್ಯದ ಬಾಟಲಿಗಳನ್ನು ಸರಬರಾಜು ಮಾಡುತ್ತಿದ್ದಾರೆ. ರಾಜಾರೋಷವಾಗಿ ಅಕ್ರಮ ಮದ್ಯ ಮಾರಾಟ ನಡೆಯುತ್ತಿದ್ದರೂ ಕೂಡ ಪೊಲೀಸರು ಯಾವುದೇ ಕ್ರಮ ಕೈಗೊಳ್ಳದೆ ನಿರ್ಲಕ್ಷ್ಯ ವಹಿಸಿದ್ದಾರೆ ಎಂಬ ಆರೋಪ ಸ್ಥಳೀಯರಿಂದ ಕೇಳಿಬಂದಿದೆ.

ಕರ್ತವ್ಯ ಲೋಪ : ಕಿರಿಯ ಎಂಜಿನಿಯರ್ ಅಮಾನತು

ಚಾಮರಾಜನಗರ, ಆ.25– ಕರ್ತವ್ಯ ಲೋಪ, ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅನುಷ್ಠಾನದಲ್ಲಿ ಉದಾಸೀನತೆ ತೋರಿದ ಹಿನ್ನೆಲೆಯಲ್ಲಿ ಗುಂಡ್ಲುಪೇಟೆ ಪಂಚಾಯತ್ ರಾಜ್ ಎಂಜಿನಿಯರಿಂಗ್ ಉಪ ವಿಭಾಗಕ್ಕೆ ನಿಯೋಜನೆಯಾಗಿದ್ದ (ಮೂಲ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಪಂಚಾಯತ್ ರಾಜ್ ಎಂಜಿನಿ ಯರಿಂಗ್ ಉಪವಿಭಾಗ ಕೊಳ್ಳೇಗಾಲ) ಕಿರಿಯ ಎಂಜಿನಿಯರ್ ಮಹದೇವ ಅವರನ್ನು ಸೇವೆಯಿಂದ ಅಮಾನತುಗೊಳಿಸಿ ಜಿಪಂ ಸಿಇಓ ಎಸ್. ಪೂವಿತಾ ಆದೇಶಿಸಿದ್ದಾರೆ.

ಅನಧಿಕೃತ ಗೈರು, ಕರ್ತವ್ಯ ಲೋಪ : ಪಿಡಿಓ ಅಮಾನತು

ಚಾಮರಾಜನಗರ, ಆ.25– ಅನಧಿಕೃತ ಗೈರು, ಕರ್ತವ್ಯ ಲೋಪದ ಹಿನ್ನೆಲೆಯಲ್ಲಿ ಮೂಲ ಗುಂಡ್ಲುಪೇಟೆ ತಾಲೂಕಿನ ಕೊತ ನೂರು ಗ್ರಾಮ ಪಂಚಾಯಿತಿಯ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ನಿಯೋಜನೆ ಮದ್ದೂರು ಗ್ರಾಮ ಪಂಚಾಯಿತಿ, ಯಳಂದೂರು ತಾಲೂಕು) ವಿಜಯ ಕುಮಾರ ದಿವಟಗಿ ಅವರನ್ನು ಸೇವೆ ಯಿಂದ ಅಮಾನತುಗೊಳಿಸಿ ಜಿಪಂ ಸಿಇಓ ಎಸ್. ಪೂವಿತಾ ಆದೇಶಿಸಿದ್ದಾರೆ.

ಕಾಡುಪ್ರಾಣಿ ದಾಳಿಯಿಂದ ಬಾಲಕಿ ಬಲಿ ಪ್ರಕರಣ

5 ಲಕ್ಷ ಪರಿಹಾರ ವಿತರಿಸಿದ ಶಾಸಕ ಎಆರ್‌ಕೆ



ಯಳಂದೂರು, ಆ.25– ತಾಲೂಕಿನ ಯರಿಯೂರು ಗ್ರಾಮದಲ್ಲಿ ಆಟವಾಡುತ್ತಿದ್ದ ಬಾಲಕಿ ಮೇಲೆ ಕಾಡುಪ್ರಾಣಿ ದಾಳಿ ನಡೆಸಿ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದರಿಂದ ಗುರುವಾರ ಅರಣ್ಯ ಇಲಾಖೆ ಬಳಿ ಪೋಷಕರು ಹಾಗೂ ಗ್ರಾಮಸ್ಥರು ಪ್ರತಿಭಟನೆ ನಡೆಸಿ ವಾಪಸ್ಸಾದ ಕೆಲವೇ ಗಂಟೆ ಒಳಗೆ ಶಾಸಕ ಎ.ಆರ್. ಕೃಷ್ಣಮೂರ್ತಿ ಪರಿಶ್ರಮದ ಫಲವಾಗಿ ಅರಣ್ಯ ಇಲಾಖೆಯ ವತಿಯಿಂದ 5 ಲಕ್ಷ ರೂ. ಮೌಲ್ಯದ ಪರಿಹಾರ ವಿತರಿಸಲಾಯಿತು.

ಗುರುವಾರ ರಾತ್ರಿ ಯರಿಯೂರು ಗ್ರಾಮಕ್ಕೆ ಭೇಟಿ ನೀಡಿದ ಶಾಸಕರು, ಮೃತ ಬಾಲಕಿ ರುಕ್ಮಿಣಿ ಪೋಷಕರಾದ ವಸಂತ ಹಾಗೂ ಆನಂದ್ ಅವರಿಗೆ ಅರಣ್ಯ ಇಲಾಖೆಯ ಟೈಗರ್ ಫೌಂಡೇಷನ್ ಫಂಡ್‌ನಿಂದ 5 ಲಕ್ಷ ರೂ. ಪರಿಹಾರದ ಚೆಕ್ ವಿತರಣೆ ಮಾಡಿದರು.

ಅರಣ್ಯ ಇಲಾಖೆಯ ಉನ್ನತ ಮಟ್ಟದ ಅಧಿಕಾರಿಗಳು ಜಿಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ್‌ನಾಯಕ್‌ರಿಗೆ ಸೂಚನೆ ನೀಡಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಟೈಗರ್ ಫೌಂಡೇಷನ್ ಫಂಡ್‌ನಿಂದ 5 ಲಕ್ಷ ರೂ.ಗಳ ಪರಿಹಾರ ಚೆಕ್‌ನ್ನು ವಿತರಣೆ ಮಾಡಲಾಗುತ್ತಿದೆ. ಇದಕ್ಕೆ ನಾನು ಮುಖ್ಯಮಂತ್ರಿ ಹಾಗೂ ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳಿಗೆ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು.

ಅರಣ್ಯ ಇಲಾಖೆಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಚಂದ್ರಶೇಖರ್ ನಾಯಕ್, ಎಸಿಎಫ್ ಸುರೇಶ್ ಡಿಎಫ್‌ಓ ಲೋಕೇಶ್ ಮೂರ್ತಿ, ಸಿಪಿಐ ಶಿವರಾಜ್ ಮುಧೋಳ್, ಪಿಎಸ್‌ಐ ಚಂದ್ರಹಾಸ್ ನಾಯಕ್. ಮಾಜಿ ಉಪಾಧ್ಯಕ್ಷ ಜೆ. ಯೋಗೇಶ್, ಕೊಪ್ಪಾಳಿ ಮಹದೇವನಾಯಕ ಸೇರಿದಂತೆ ಅನೇಕರು ಇದ್ದರು.

ಹಣ ದುರುಪಯೋಗ: ಶೆಟ್ಟಳ್ಳಿ ಗ್ರಾಪಂ ಪಿಡಿಓ ಅಮಾನತು

ಚಾಮರಾಜನಗರ, ಆ.25– ಸರ್ಕಾರದ ಹಣ ದುರುಪಯೋಗ, ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಮೇಲಾಧಿಕಾರಿಗಳ ಆದೇಶ ಉಲ್ಲಂಘನೆ ಆರೋಪದಡಿ ಹನೂರು ತಾಲೂಕಿನ ಶೆಟ್ಟಳ್ಳಿ ಗ್ರಾಪಂ ಗ್ರಾಮಾಭಿವೃದ್ಧಿ ಅಧಿಕಾರಿ ಡಿ. ಶಿವಕುಮಾರ್ ಅವರನ್ನು ಅಮಾನತುಗೊಳಿಸಿ ಜಿಪಂ ಸಿಇಓ ಎಸ್. ಪೂವಿತಾ ಆದೇಶಿಸಿದ್ದಾರೆ. ಗ್ರಾಪಂ ವ್ಯಾಪ್ತಿಯಲ್ಲಿ ಅನುಷ್ಠಾನಗೊಳಿಸಿರುವ ವಿವಿಧ ಯೋಜನೆಯ ಕಾಮಗಾರಿಗಳ ಕಡತಗಳನ್ನು ಮತ್ತು ಭರಿಸಿರುವ ವೆಚ್ಚಕ್ಕೆ ಸಂಬಂಧಿಸಿದಂತೆ ದಾಖಲಾತಿಗಳನ್ನು ಪರಿಶೀಲನೆಗೆ ಹಾಜರುಪಡಿಸದೆ ಸರ್ಕಾರದ ಹಣ ದುರುಪಯೋಗ ಮಾಡಿಕೊಂಡಿರುವುದು ಕರ್ತವ್ಯ ನಿರ್ಲಕ್ಷ್ಯತೆ ಹಾಗೂ ಮೇಲಾಧಿಕಾರಿಗಳ ಆದೇಶ ಉಲ್ಲಂಘನೆ ಮಾಡಿರುವ ಸಂಬಂಧ ಹನೂರು ತಾಪಂ ಇಓಗಳು ಸಲ್ಲಿಸಿರುವ ವರದಿ ಹಿನ್ನೆಲೆಯಲ್ಲಿ ಅವರನ್ನು ಅಮಾನತು ಮಾಡಿರುವುದಾಗಿ ಆದೇಶದಲ್ಲಿ ತಿಳಿಸಲಾಗಿದೆ.

ಮರಕ್ಕೆ ಬೈಕ್ ಡಿಕ್ಕಿ: ಸವಾರ ಸಾವು

ಹನೂರು, ಆ.25– ಮರಕ್ಕೆ ಬೈಕ್ ಡಿಕ್ಕಿ ಹೊಡೆದ ಪರಿಣಾಮ ಯುವಕ ಸಾವನ್ನಪ್ಪಿದ ಘಟನೆ ಹನೂರು ಹೊರವಲಯದ ಡಿಆರ್ ಹಾರ್ಡ್‌ವೇರ್ ಬಳಿ ಸಂಭವಿಸಿದೆ.



ಬೆಂಗಳೂರಿನ ಕುಂಬಳಗೂಡು ನಿವಾಸಿ ಆಕಾಶ್ (18) ಅಪಘಾತದಲ್ಲಿ ಸಾವನ್ನಪ್ಪಿದವರಾಗಿದ್ದು, ಇವರು ಸ್ನೇಹಿತ ನಾಗರಾಜು ಅವರೊಂದಿಗೆ ಬೆಂಗಳೂರಿನಿಂದ ಮಹದೇಶ್ವರ ಬೆಟ್ಟಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದರು.

ಇವರ ಬೈಕ್ ಹನೂರು ಪಟ್ಟಣದ ಹೊರವಲಯದ ಡಿ.ಆರ್ ಹಾರ್ಡ್‌ವೇರ್ ಸಮೀಪ ತೆರಳುತ್ತಿದ್ದಾಗ ನಿಯಂತ್ರಣ ತಪ್ಪಿ ರಸ್ತೆಬದಿಯ ಹುಣಸೆಮರಕ್ಕೆ ಡಿಕ್ಕಿ ಹೊಡೆದಿದೆ. ಇದರ ಪರಿಣಾಮ ಆಕಾಶ್ ಸ್ಥಳದಲ್ಲೇ ಮೃತಪಟ್ಟಿದ್ದು, ಹಿಂಬದಿ ಸವಾರ ನಾಗರಾಜು ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಹನೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ದೊಡ್ಡ ವ್ಯತ್ಯಾಸವಾಗದು

ಒಂದು ವೇಳೆ ಮಳೆಯಾದರೆ ರೈತರಿಗೆ ಅಲ್ಪಾವಧಿ ಬೆಳೆ ಬೆಳೆಯಲು ಅಗತ್ಯವಿರುವ ಬಿತ್ತನೆ ಬೀಜ, ಗೊಬ್ಬರ ಒದಗಿಸಲಾಗುವುದು. ಬಿತ್ತ ಮತ್ತು ರಾಗಿ ಬೆಳೆಯಲು ಈಗಲೂ ಕಾಲ ಮಿಂಚಿಲ್ಲ. ಸಂಕಷ್ಟದಲ್ಲಿರುವ ರೈತರ ನೆರವಿಗಾಗಿ ತಾವು ಮತ್ತು ಅಧಿಕಾರಿಗಳು ರಾಜ್ಯಾದ್ಯಂತ ಪ್ರವಾಸ ಕೈಗೊಳ್ಳುತ್ತೇವೆ. ಪ್ರತಿ ತಿಂಗಳು ಒಂದು ಜಿಲ್ಲೆಯಲ್ಲಿ ಪ್ರವಾಸ ಮಾಡಿ ಕೃಷಿಕರ ಜಮೀನಿಗೆ ಭೇಟಿಯಾಗಿ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲೇ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸಲಾಗುವುದು.

ಇದೇ 29ರಂದು ಚಿತ್ರದುರ್ಗ ಜಿಲ್ಲೆಯಲ್ಲಿ ರೈತರೊಂದಿಗೆ ಸಂವಾದ ನಡೆಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡುವುದಾಗಿ ಹೇಳಿದರು.

ಮಂಡ್ಯದಲ್ಲಿ ಸಿರಿ ಧಾನ್ಯ ಮೇಳ: ಮಂಡ್ಯದಲ್ಲಿ ಸಿರಿಧಾನ್ಯ ಮೇಳ ಮತ್ತು ಬೆಲ್ಲದ ಪರಿಷೆಯನ್ನು ಇದೇ 28ರಂದು ಹಮ್ಮಿಕೊಳ್ಳಲಾಗಿದೆ ಎಂದು ಅವರು ಇದೇ ಸಂದರ್ಭದಲ್ಲಿ ತಿಳಿಸಿದರು. ನಾಳೆಯಿಂದಲೇ ಸಿರಿಧಾನ್ಯಗಳ ಬಗ್ಗೆ ಜಾಗೃತಿ ಮೂಡಿಸುವ ಸಲುವಾಗಿ ಇಲಾಖಾಧಿಕಾರಿಗಳು ಸಾರ್ವಜನಿಕರು ಹಾಗೂ ಕಾಲೇಜು ವಿದ್ಯಾರ್ಥಿಗಳಿಗೆ ಸಿರಿಧಾನ್ಯಗಳ ನಡಿಗೆ ಏರ್ಪಡಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಮೋದಿ ಇಂದು ಇಸ್ರೋಗೆ ಭೇಟಿ

ಸುಮನಹಳ್ಳಿ) ಗುಬ್ಬಿ ತೋಟದಪ್ಪ ರಸ್ತೆ, ಜಾಲಹಳ್ಳಿ ಕ್ರಾಸ್ ರಸ್ತೆ, ಮುಂಜಾನೆ 4 ಗಂಟೆಯಿಂದ ಬೆಳಗ್ಗೆ 11.00 ಗಂಟೆಯವರೆಗೆ ಭಾರೀ ಸರಕು ಸಾಗಾಣಿಕೆ ವಾಹನ (Heavy Goods Vehicles) ಸಂಚಾರ ನಿಷೇಧಿಸಲಾಗಿದೆ. ಈ ಬಗ್ಗೆ ಬೆಂಗಳೂರು ಸಂಚಾರಿ ಪೊಲೀಸರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಧಾನಿ ಮೋದಿ ಕಾರ್ಯಕ್ರಮ ವೇಳಾಪಟ್ಟಿ: ನಾಳೆ ಬೆಳಗ್ಗೆ 5.55ಕ್ಕೆ ಹೆಚ್ ಎಎಲ್ ಏರ್‌ಪೋರ್ಟ್‌ಗೆ ಆಗಮನ, ಬೆಳಗ್ಗೆ 6.30ರವರೆಗೆ ಏರ್‌ಪೋರ್ಟ್‌ನಲ್ಲಿ ವಿಶ್ರಾಂತಿ, ಬೆಳಗ್ಗೆ 7 ಗಂಟೆಗೆ ಇಸ್ರೋ ಕೇಂದ್ರ ಕಚೇರಿಗೆ ಭೇಟಿ, ಬೆಳಗ್ಗೆ 8 ಗಂಟೆಯವರೆಗೆ ಇಸ್ರೋ ಕಚೇರಿಯಲ್ಲಿ ಪ್ರಧಾನಿ ಮೋದಿ ಸಭೆ, ಬೆಳಗ್ಗೆ 8.35ಕ್ಕೆ ಬೆಂಗಳೂರಿನಿಂದ ದೆಹಲಿಗೆ ನಿರ್ಗಮನ.

ಬಿಜೆಪಿ ಪ್ಲಾನ್: ಮುಂದಿನ ಏಪ್ರಿಲ್ ತಿಂಗಳಲ್ಲಿ ಲೋಕಸಭೆ ಚುನಾವಣೆ ನಡೆಯಲಿದ್ದು, ಪ್ರಧಾನಿ ಆಗಮನವನ್ನು ಸದ್ಬಳಕೆ ಮಾಡಿಕೊಳ್ಳಲು ಬಿಜೆಪಿ ಯೋಜಿಸಿದೆ. ಅದ್ದೂರಿಯಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಲು ಸಿದ್ಧತೆ ಮಾಡಿಕೊಳ್ಳುತ್ತಿದ್ದು, ಸ್ವಾಗತಕ್ಕೆ ಎಚ್‌ಎಎಲ್ ಏರ್‌ಪೋರ್ಟ್‌ನಲ್ಲಿ 5-6 ಸಾವಿರ ಜನರನ್ನು ಸೇರಿಸಲು ಉದ್ದೇಶಿಸಲಾಗಿದೆ. ಮೋದಿ ಅವರು ಏರ್‌ಪೋರ್ಟ್‌ನಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಭಾಷಣ ಮಾಡುವ ಸಾಧ್ಯತೆ ಇದೆ.

ರೋಡ್ ಶೋ ನಡೆಸಲ್ಲ: ನಾಳೆ ಬೆಂಗಳೂರಿನಲ್ಲಿ ಪ್ರಧಾನಿ ಮೋದಿಯವರ ರೋಡ್ ಶೋ ಇದೆ ಎಂಬ ಸುದ್ದಿ ಹರಡಿತ್ತು. ಇದಕ್ಕೆ ಇಂದು ಸ್ಪಷ್ಟನೆ ನೀಡಿದ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಪ್ರಧಾನಿ ನೇರವಾಗಿ ಬೆಂಗಳೂರಿಗೆ ಬರುತ್ತಾರೆ. ಇಸ್ರೋ ವಿಜ್ಞಾನಿಗಳ ಜತೆ ಸಭೆ ನಡೆಸುತ್ತಾರೆ. ಬೆಳಗ್ಗೆ ಏರ್‌ಪೋರ್ಟ್‌ನಲ್ಲಿ ಅವರಿಗೆ ಸ್ವಾಗತ ಕಾರ್ಯಕ್ರಮ ಇದೆ. ರೋಡ್ ಶೋ ಯೋಜನೆ ಇಲ್ಲ ಎಂದು ತಿಳಿಸಿದರು. ಕಳೆದ ಬಾರಿ ಸ್ವತಃ ಪ್ರಧಾನಿ ಬೆಂಗಳೂರಿಗೆ ಬಂದಿದ್ದರು. ಅತ್ಯಂತ ಕಡಿಮೆ ಸಮಯದಲ್ಲಿ ಚಂದ್ರಯಾನ-3 ರೂಪಿಸಲಾಗಿದೆ. ಚಂದ್ರನ ದಕ್ಷಿಣದಲ್ಲಿ ತಲುಪಿದ ಮೊದಲ ದೇಶ ಭಾರತವಾಗಿದೆ. ಕಳೆದ ಬಾರಿ ವಿಜ್ಞಾನಿಗಳನ್ನು ಪ್ರಧಾನಿ ಅಭಿನಂದಿಸಿ, ಹಣವನ್ನು ಕೊಟ್ಟಿದ್ದರು ಎಂದರು.

8 ಮೀಟರ್ ಕ್ರಮಿಸಿದ ಪ್ರಗ್ಯಾನ್ ರೋವರ್

ಲ್ಯಾಂಡರ್ ಮಾಡ್ಯೂಲ್ ಮತ್ತು ರೋವರ್‌ನಲ್ಲಿನ ಎಲ್ಲಾ ಪೇಲೋಡ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಅದು ಹೇಳಿದೆ. ಆಲ್ಫಾ ಪಾರ್ಟಿಕಲ್ ಎಕ್ಸ್-ರೇ ಸ್ಪೆಕ್ಟ್ರೋಮೀಟರ್ ರಾಸಾಯನಿಕ ಸಂಯೋಜನೆಯನ್ನು ಪಡೆಯುವ ಗುರಿಯನ್ನು ಹೊಂದಿದೆ ಮತ್ತು ಚಂದ್ರನ ಮೇಲ್ಮೈಯ ಖನಿಜ ಸಂಯೋಜನೆಯನ್ನು ಅರಿಯುವಿಕೆಗೆ ಕಾರ್ಯನಿರ್ವಹಿಸಲಿದೆ. ಲೇಸರ್-ಇಂಡ್ಯೂಸ್ಡ್ ಬ್ರೇಕ್‌ಡೌನ್ ಸ್ಪೆಕ್ಟ್ರೋಸ್ಕೋಪ್ ಚಂದ್ರನ ಲ್ಯಾಂಡಿಂಗ್ ಸೈಟ್ ಸುತ್ತಲೂ ಚಂದ್ರನ ಮಣ್ಣು ಮತ್ತು ಬಂಡೆಗಳ ಧಾತುರೂಪದ ಸಂಯೋಜನೆಯ (Mg, Al, Si, K, Ca, Ti, Fe) ಬಗ್ಗೆ ಮಾಹಿತಿ ನೀಡುತ್ತದೆ ಎಂದು ಇಸ್ರೋ ತಿಳಿಸಿದೆ. ಪ್ರಗ್ಯಾನ್ ರೋವರ್ ಹೊರಹೋಗುತ್ತಿರುವ ವಿಕ್ರಮ್ ಲ್ಯಾಂಡರ್ ಅದರ ರಾಂಪ್‌ನ ಚಿತ್ರಗಳನ್ನು ಮತ್ತು ವೀಡಿಯೊವನ್ನು ತೆಗೆದುಕೊಂಡಿತು. ಟ್ವೀಟ್‌ನಲ್ಲಿ ವೀಡಿಯೊವನ್ನು ಹಂಚಿಕೊಂಡ ಇಸ್ರೋ, ಚಂದ್ರಯಾನ-3 ರೋವರ್ ಲ್ಯಾಂಡರ್‌ನಿಂದ ಚಂದ್ರನ ಮೇಲ್ಮೈಗೆ ಹೇಗೆ ರಾಂಪ್ ಮಾಡಿತು ಎಂಬುದು ಇಲ್ಲಿದೆ ಎಂದು ಬರೆದಿದೆ.

ಚಂದ್ರಯಾನ-3 ಮೊನ್ನೆ ಆಗಸ್ಟ್ 23ರಂದು ಬುಧವಾರ ಸಂಜೆ 6.04ಕ್ಕೆ ಚಂದ್ರನ ಮೇಲೆ ಸಾಫ್ಟ್ ಲ್ಯಾಂಡಿಂಗ್ ಅನ್ನು ಯಶಸ್ವಿಯಾಗಿ ನಡೆಸಿತು, ಭಾರತವು ಚಂದ್ರನ ಮೇಲ್ಮೈಯಲ್ಲಿ ಯಶಸ್ವಿಯಾಗಿ ಇಳಿದ ನಾಲ್ಕನೇ ದೇಶವಾಗಿದೆ. ಸುಮಾರು 4 ಗಂಟೆಗಳ ನಂತರ, ಪ್ರಗ್ಯಾನ್ ರೋವರ್ ಮೇಲ್ಮೈಯನ್ನು ಹೊರಬಂದಿತ್ತು. ಈ ಕ್ಷಣವನ್ನು ಇಸ್ರೋ ಹಂಚಿಕೊಂಡ ಇತ್ತೀಚಿನ ವೀಡಿಯೊದಲ್ಲಿ ಸೆರೆಹಿಡಿಯಲಾಗಿದೆ. ಭಾರತೀಯ ಬಾಹ್ಯಾಕಾಶ ಸಂಸ್ಥೆ ಬಿಡುಗಡೆ ಮಾಡಿದ ಕಲರ್ ವೀಡಿಯೊದಲ್ಲಿ ಪ್ರಗ್ಯಾನ್ ರೋವರ್‌ನ ಸೌರ ಫಲಕವು ಸೂರ್ಯನ ಬೆಳಕನ್ನು ಪಡೆಯುತ್ತಿದೆ. ಚಂದ್ರನ ಮೇಲ್ಮೈಯಲ್ಲಿ ಪ್ರಗ್ಯಾನ್ ರೋವರ್‌ನ ಸುಂದರವಾದ ನೆರಳು ಕೂಡ ಕಂಡುಬರುತ್ತಿದೆ. ವಿಕ್ರಮ್ ಬಂದಿಳಿದ ಚಂದ್ರನ ಮೇಲೆ ಸೂರ್ಯನ ಬೆಳಕು 14 ದಿನಗಳ ಕಾಲ ಇರಲಿದ್ದು, ರೋವರ್ ಈಗಾಗಲೇ ವೈಜ್ಞಾನಿಕ ಪ್ರಯೋಗಗಳ ಸರಣಿಯನ್ನು ಆರಂಭಿಸಿದೆ. ಚಂದ್ರಯಾನ-3 ವಿಷನ್‌ನ ಸಂಶೋಧನೆಗಳು ಚಂದ್ರನ ನೀರಿನ ಮಂಜುಗಡ್ಡೆಯ ಜ್ಞಾನವನ್ನು ವಿಸ್ತರಿಸಬಹುದು. ಇದು ಚಂದ್ರನ ಅತ್ಯಮೂಲ್ಯ ಸಂಪನ್ಮೂಲಗಳಲ್ಲಿ ಒಂದಾಗಿದೆ.

ಕೈಲಿ ಹಣವಿದ್ದರಷ್ಟೇ ಆರ್ಥಿಕ ಬೆಳವಣಿಗೆ

ಗೃಹಲಕ್ಷ್ಮಿ, ಗೃಹಜ್ಯೋತಿ ಕಾರ್ಯಕ್ರಮಗಳನ್ನು ಜಾರಿ ಮಾಡಿ ಜನರ ಜೇಬಿಗೆ ಹಣ ಹಾಕುವ ಕೆಲಸಕ್ಕೆ ಮುಂದಾಗಿದ್ದೇವೆ. ಇದರಿಂದ ನಮ್ಮ ಆರ್ಥಿಕತೆಗೆ ಚೈತನ್ಯ ಪಡೆದುಕೊಳ್ಳುತ್ತದೆ ಎಂದು ವಿವರಿಸಿದರು. ಸಂವಿಧಾನದ ವಿರೋಧಿಗಳ ಕೈಗೆ ಅಧಿಕಾರ ಕೊಟ್ಟು ಸಮಾನತೆ ಬರಬೇಕು ಎಂದರೆ ಹೇಗೆ ಸಾಧ್ಯ? ಅಂಬಾನಿ-ಅದಾನಿಯವರ ಜೇಬು ತುಂಬಿಸುವವರ ಕೈಗೆ ಕೇಂದ್ರದಲ್ಲಿ ಅಧಿಕಾರ ಕೊಟ್ಟು ಬಡವರ, ಮಧ್ಯಮ ವರ್ಗದವರ ಉದ್ಧಾರ ಆಗಬೇಕು ಎಂದರೆ ಹೇಗೆ ಸಾಧ್ಯ ಎಂದು ಪ್ರಶ್ನಿಸಿದರು.

ಸಿದ್ದಲಿಂಗಯ್ಯ ಅವರ ಆಶಯಗಳನ್ನು ಬದುಕಿನಲ್ಲಿ ಇಟ್ಟುಕೊಂಡವರಿಗೆ ಜೀವ ಬೆದರಿಕೆ ಪತ್ರಗಳು ಬರುತ್ತಿವೆ. ಈ ಬೆದರಿಕೆ ಪತ್ರ ಬರೆಯುವವರನ್ನು ಬೆಂಬಲಿಸುವವರ ಕೈಗೆ ಅಧಿಕಾರ ಕೊಟ್ಟು ಯಾರಿಗೆ ಬಂತು, ಎಲ್ಲಿಗೆ ಬಂತು 47ರ ಸ್ವಾತಂತ್ರ್ಯ ಎಂದು ಪ್ರಶ್ನಿಸಿದರೆ ಹೇಗೆ? ಎಂದು ಸಭಿಕರನ್ನು ಪ್ರಶ್ನಿಸಿದರು.

ಸಿದ್ದಲಿಂಗಯ್ಯನವರ ಕವನಗಳು ಸಮಾಜದ ವಸ್ತು ಸ್ಥಿತಿಗೆ ಕನ್ನಡಿ ಹಿಡಿದವೆ. ಅಸಮಾನತೆ, ತಾರತಮ್ಯದ ವಿರುದ್ಧ ಸಮಾಜವನ್ನು ಎಚ್ಚರಿಸುವ ಧ್ವನಿ ಸಿದ್ದಲಿಂಗಯ್ಯ ಅವರ ಕವನಗಳಲ್ಲಿವೆ. ದೇಶಕ್ಕೆ ಬಂದಿರುವ ರಾಜಕೀಯ ಸ್ವಾತಂತ್ರ್ಯ ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಜಾರಿ ಆಗದಿದ್ದರೆ ಸ್ವಾತಂತ್ರ್ಯಕ್ಕೆ ಅರ್ಥ ಇಲ್ಲ ಎಂದು ಡಾ. ಬಾಬಾಸಾಹೇಬ್ ಅಂಬೇಡ್ಕರ್ ಹೇಳಿದ್ದರು ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನ ಚಳವಳಿಗಳ ಉತ್ಪತ್ತಿ. ಇವರು ಬಜೆಟ್‌ನಲ್ಲಿ ಕೊಟ್ಟಿರುವ ಕಾರ್ಯಕ್ರಮಗಳು, ದಲಿತರ ಪರವಾದ ಕಾಯ್ದೆ ಮತ್ತು ಕಾರ್ಯಕ್ರಮಗಳನ್ನು ಅವರು ಜಾರಿ ಮಾಡುತ್ತಿರುವುದು ಅವರು ಸಂವಿಧಾನದ ನಿಜವಾದ ರಕ್ಷಕರು ಮತ್ತು ಪಾಲಕರು ಎಂಬುದನ್ನು ಸಾರಿ ಸಾರಿ ಹೇಳುತ್ತಿದೆ ಎಂದು ಸಮಾಜ ಕಲ್ಯಾಣ ಸಚಿವ ಹೆಚ್.ಸಿ.ಮಹದೇವಪ್ಪ ಅಭಿಪ್ರಾಯಪಟ್ಟರು.

ಕುವೆಂಪು ಅವರು 40ರ ದಶಕದಲ್ಲಿ ದಲಿತ-ಬಡವರ ಏಳಿಗೆಗೆ ಕಲ್ಕಿಯ ಉದಯ ಆಗಬೇಕು ಎನ್ನುವ ಆಶಯದ ಕವನ ಬರೆದಿದ್ದರು. 1948ರಲ್ಲಿ ಕುವೆಂಪು ಕನಸಿನ ಕಲ್ಕಿ ಮೈಸೂರಿನ ಸಿದ್ದರಾಮನಹುಂಡಿಯಲ್ಲಿ ಜನಿಸಿದರು. ಅವರೇ ನಮ್ಮ ಮುಖ್ಯಮಂತ್ರಿ ಸಿದ್ದರಾಮಯ್ಯ ಎಂದು ಕಾರ್ಯಕ್ರಮದ ನಿರೂಪಕ ಲಕ್ಷ್ಮೀನಾರಾಯಣ್ ಬಣ್ಣಿಸಿದರು.

ವೃತ್ತಕ್ಕೆ ಸಾರಿಗೆ ಬಸ್ ಡಿಕ್ಕಿ

ಸೆಪ್ಟೆಂಬರ್ 4ರೊಳಗೆ ವೃತ್ತವನ್ನು ದುರಸ್ಥಿ ಮಾಡಬೇಕೆಂದು ಪಟ್ಟು ಹಿಡಿದರು. ಘಟನಾ ಸ್ಥಳಕ್ಕೆ ಆಗಮಿಸಿದ ಡಿಪೋ ವ್ಯವಸ್ಥಾಪಕಿ ಗೀತಾ, ಅಜಾಗರೂಕತೆಯಿಂದ ಬಸ್ ಚಾಲನೆ ಮಾಡಿದ ಚಾಲಕನ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ. ವೃತ್ತಕ್ಕೆ ಆಗಿರುವ ಹಾನಿಯನ್ನು ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು. ಈ ಹಿನ್ನೆಲೆಯಲ್ಲಿ ಪ್ರತಿಭಟನೆಯನ್ನು ಕೈಬಿಡಲಾಯಿತು.

ಶಾಸಕರಿಂದ ಪರಿಶೀಲನೆ: ಮಾಹಿತಿ ತಿಳಿದು ಘಟನಾ ಸ್ಥಳಕ್ಕೆ ಆಗಮಿಸಿದ ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ವೃತ್ತಕ್ಕಾದ ಹಾನಿಗೆ ವಿಷಾಧ ವ್ಯಕ್ತಪಡಿಸಿದರು. ಸ್ಥಳದಲ್ಲಿದ್ದ ಪೊಲೀಸ್ ಅಧಿಕಾರಿಗಳು ಮತ್ತು ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ ಅವರಿಂದ ಮಾಹಿತಿ ಪಡೆದ ಅವರು, ಕೆಎಸ್‌ಆರ್‌ಟಿಸಿಯಿಂದಲೇ ವೃತ್ತದ ದುರಸ್ಥಿ ಕಾರ್ಯ ನಡೆಸುವಂತೆ ಡಿಪೋ ವ್ಯವಸ್ಥಾಪಕಿಗೆ ಸೂಚಿಸಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಪೊನ್ನಣ್ಣ, ರಸ್ತೆ ಸಂಚಾರ ಒತ್ತಡದಿಂದ ಈ ಘಟನೆ ನಡೆದಿದೆ ಎಂದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಪೊಲೀಸ್ ಇಲಾಖೆ, ಸ್ಥಳೀಯ ಆಡಳಿತ ಚರ್ಚೆ ನಡೆಸಿ ಸಂಚಾರಿ ವ್ಯವಸ್ಥೆ ಸರಿಪಡಿಸಲು ಕ್ರಮ ಕೈಗೊಳ್ಳಲು ಹೇಳಿದ್ದೇನೆ. ಜನರಲ್ ತಿಮ್ಮಯ್ಯ ವೃತ್ತದ ದುರಸ್ಥಿಗೆ 10 ಲಕ್ಷ ರೂ.ಗಳ ಅಂದಾಜು ವೆಚ್ಚ ಸಲ್ಲಿಸಲಾಗಿದೆ. ಅದೇ ಸ್ಥಳದಲ್ಲಿ ಪ್ರತಿಮೆ ಸ್ಥಾಪನೆಗೂ ಸೂಚನೆ ನೀಡಲಾಗಿದೆ ಎಂದು ಶಾಸಕ ಪೊನ್ನಣ್ಣ ಮಾಹಿತಿ ನೀಡಿದರು.

ಈ ವೇಳೆ ನಗರ ಸಭಾ ಅಧ್ಯಕ್ಷೆ ಅನಿತಾ ಪೂವಯ್ಯ, ಸದಸ್ಯ ರಾಜೇಶ್ ಯಲ್ಲಪ್ಪ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜಾ ಉತ್ತಪ್ಪ, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸುಂದರ ರಾಜ್, ಮಡಿಕೇರಿ ಡಿವೈಎಸ್‌ಪಿ ಜಗದೀಶ್, ವೃತ್ತ ನಿರೀಕ್ಷಕ ಅನೂಪ್ ಮಾದಪ್ಪ, ವಿವಿಧ ಸಂಘ ಸಂಸ್ಥೆಗಳ ಪ್ರಮುಖರು ಹಾಜರಿದ್ದರು.

ಬೆಲೆ ಏರಿಕೆ ನಡುವೆಯೂ ಸಂಭ್ರಮದ ವರಮಹಾಲಕ್ಷ್ಮಿ ಹಬ್ಬ



ಮೈಸೂರಲ್ಲಿ ಮಹಿಳೆಯರು ಭಕ್ತಿ ಭಾವದಿಂದ ವರಮಹಾಲಕ್ಷ್ಮಿ ಹಬ್ಬ ಆಚರಿಸಿದರು



ಮೇಟಗಳ್ಳಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿಗಳಿಂದ ವಿಶೇಷ ಪೂಜೆ

ಮೈಸೂರು,ಆ.25(ಜಿಎ)–ಶ್ರಾವಣ ಮಾಸದ 2ನೇ ಶುಕ್ರವಾರ ಆಚರಿಸಲಾಗುವ ವರಮಹಾಲಕ್ಷ್ಮಿ ಹಬ್ಬವನ್ನು ಮೈಸೂರಿನಲ್ಲಿ ಬೆಲೆ ಏರಿಕೆ ನಡುವೆಯೂ ಶ್ರದ್ಧಾ ಭಕ್ತಿಗಳಿಂದ ಆಚರಿಸಲಾಯಿತು.

ಈ ಬಾರಿ ಹಣ್ಣು-ತರಕಾರಿ ವಸ್ತ್ರಾಭರಣ ಸೇರಿದಂತೆ ದಿನಸಿ ವಸ್ತುಗಳ ಬೆಲೆ ಏರಿಕೆಯಾಗಿದ್ದರೂ ಮಹಿಳೆಯರು ಹಬ್ಬಕ್ಕೆ ಮೂರು ದಿನದ ಮುನ್ನವೇ ನಗರದ ದೇವರಾಜ ಮಾರುಕಟ್ಟೆ ಸೇರಿದಂತೆ ವಿವಿಧ ಮಾರುಕಟ್ಟೆಗಳಿಗೆ ಭೇಟಿ ನೀಡಿ ವರಮಹಾಲಕ್ಷ್ಮೀ ವ್ರತಕ್ಕೆ ಬೇಕಿರುವ ಅಗತ್ಯ ವಸ್ತುಗಳನ್ನು ಖರೀದಿ ಮಾಡಿದ್ದರೆ, ಮತ್ತೆ ಕೆಲವರು ಹಬ್ಬದ ದಿನದ ಮುನ್ನ ಹಾಗೂ ಶುಕ್ರವಾರ ಬೆಳಗ್ಗೆಯೂ ಖರೀದಿ ಮಾಡಿದರು.

ಮನೆ ಮನೆಗಳಲ್ಲಿ ಪೀಠದ ಮೇಲೆ ಕಳಶವಿಟ್ಟು ವರಮಹಾಲಕ್ಷ್ಮಿ ಮುಖವಾಡ ತೊಡಿಸಿ, ಸೀರೆ, ಚಿನ್ನಾಭರಣ, ನೋಟುಗಳಿಂದ ಅಲಂಕರಿಸಿದ್ದರು. ಹೂಗಳಿಂದ ಶೃಂಗರಿಸಿದ್ದರು. ವಿವಿಧ ರೀತಿಯ ಹಣ್ಣುಗಳು ಮತ್ತು ಸಿಹಿ ತಿಂಡಿಗಳನ್ನು ದೇವರಿಗೆ ನೈವೇದ್ಯ ಇಡಲಾಗಿತ್ತು.

ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ದೇವಿಯನ್ನು ಅಲಂಕರಿಸಿದ್ದರು. ದೇವಿಯ ಹಿಂಭಾಗದಲ್ಲಿ ಕೆಲವರು ಬೆಲೆ ಬಾಳುವ ರೇಷ್ಮೆ ಸೀರೆಯ ಹಿಂಪರದೆ ಇಳಿ ಬಿಟ್ಟಿದ್ದರೆ, ಕೆಲವರು ಗುಲಾಬಿ, ಕಮಲದ ಹೂವುಗಳಿಂದ ಕೂಡಿದ ಹಿಂಪರದೆ ಕಟ್ಟಿ, ಅದಕ್ಕೆ ವಿದ್ಯುತ್ ದೀಪಗಳಿಂದ ಜಗಮಗಿಸುವಂತೆ ಮಾಡಿದ್ದರು.

ವರಮಹಾಲಕ್ಷ್ಮಿಯನ್ನು ಶ್ರದ್ಧಾ ಭಕ್ತಿಯಿಂದ ವಿಶೇಷವಾಗಿ ಪೂಜಿಸಿದರೆ, ಲಕ್ಷ್ಮೀದೇವಿಯೂ ಧನ-ಧಾನ್ಯಗಳ ಸಹಿತ ಬಂದು ಮನೆಯಲ್ಲಿ ನೆಲೆಸುತ್ತಾಳೆ ಎಂಬ ನಂಬಿಕೆಯೊಂದಿಗೆ ವ್ರತವನ್ನು ಆಚರಿಸುವುದು ವಾಡಿಕೆ.

ಅದರಂತೆ ಮಹಿಳೆಯರು ಹೊಸ ಸೀರೆ ಉಟ್ಟು ವಿಶೇಷ ಅಲಂಕಾರ ಮಾಡಿಕೊಂಡು ಸಂಭ್ರಮಿಸಿ, ನೆರೆ ಹೊರೆಯ ಮುತ್ತೈದೆಯರನ್ನು ಆಹ್ವಾನಿಸಿ ಅರಿಶಿನ-ಕುಂಕುಮ, ಫಲ-ತಾಂಬೂಲ ನೀಡಿ ಶುಭಾಶಯ ವಿನಿಮಯ ಮಾಡಿಕೊಂಡರು.

ಪೊಲೀಸ್ ಠಾಣೆಯಲ್ಲಿ ಲಕ್ಷ್ಮಿ ಪೂಜೆ: ಮೈಸೂರು ಮೇಟ್ಟಗಳ್ಳಿ ಪೊಲೀಸ್ ಠಾಣೆಯಲ್ಲಿ ಮಹಿಳಾ ಸಿಬ್ಬಂದಿ ಭಕ್ತಿ ಪೂರ್ವಕವಾಗಿ ಪೂಜೆ ಸಲ್ಲಿಸಿದರು. ಹಬ್ಬದ ಅಂಗವಾಗಿ ಮೈಸೂರಿನ ಹಲವು ದೇವಸ್ಥಾನಗಳಲ್ಲಿಯೂ ವಿಶೇಷ ಪೂಜೆ, ಪುನಸ್ಕಾರಗಳು ನೆರವೇರಿದವು.

ಉದ್ಯೋಗ ವಂಚಿಸುತ್ತಿರುವ ಕಾರ್ಖಾನೆಗಳ ವಿರುದ್ಧ ಪ್ರತಿಭಟನೆ



ಮೈಸೂರು,ಆ.25(ಎಂಟಿವೈ)– ವಿವಿಧ ಕಾರ್ಖಾನೆಗಳ ಸ್ಥಾಪನೆಗಾಗಿ ಭೂಮಿ ನೀಡಿದ ರೈತರ ಮಕ್ಕಳಿಗೆ ಉದ್ಯೋಗ ನೀಡದೆ ವಂಚಿಸುತ್ತಿರುವ ಕಾರ್ಖಾನೆಗಳ ವಿರುದ್ಧ ಆ.28ರಂದು ಬೆಳಗ್ಗೆ 11ಕ್ಕೆ ಕಡಕೊಳ ಕೈಗಾರಿಕಾ ಪ್ರದೇಶದ ನೀರು ಸರಬರಾಜು ಕೇಂದ್ರದ ಮುಂದೆ ಅನಿರ್ದಿಷ್ಟಾವಧಿ ಪ್ರತಿಭಟನೆ ಹಮ್ಮಿಕೊಂಡಿರುವುದಾಗಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ರಘು ಇಮ್ಮಾವು ತಿಳಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರು ತಾಲೂಕಿನ ಜಯಪುರ ಹೋಬಳಿಯ ಕಡಕೊಳ ಕೈಗಾರಿಕಾ ಪ್ರದೇಶದಲ್ಲಿರುವ ಹಲವು ಕಾರ್ಖಾನೆಗಳು 10 ವರ್ಷಗಳಿಂದಲೂ ಕಾರ್ಯ ನಿರ್ವಹಿಸುತ್ತಿವೆ. ಈ ಕಾರ್ಖಾನೆಗಳ ಸ್ಥಾಪನೆ, ಕೈಗಾರಿಕಾ ಪ್ರದೇಶದ ರಸ್ತೆಗಳಿಗೆ, ಕಾರ್ಖಾನೆಯ ನೀರು ಪೂರೈಕೆ ಕೇಂದ್ರಕ್ಕೆ ಹಾಗೂ ವಿದ್ಯುತ್ ಸರಬರಾಜು ಕೇಂದ್ರ ಸೇರಿದಂತೆ ಇನ್ನಿತರ ಉದ್ದೇಶಕ್ಕಾಗಿ ಭೂಮಿ ನೀಡಿದ ರೈತರಿಗೆ ಮತ್ತು ರೈತರ ಮಕ್ಕಳಿಗೆ ಖಾಯಂ ಉದ್ಯೋಗ ನೀಡದೆ ವಂಚಿಸಲಾಗುತ್ತಿದೆ. ಇದುವರೆಗೆ ಹಲವು ಬಾರಿ ಮನವಿ ಸಲ್ಲಿಸಿದ್ದರೂ ಕಾರ್ಖಾನೆಗಳ ಆಡಳಿತ ಮಂಡಳಿ ಸಕಾರಾತ್ಮಕವಾಗಿ ಸ್ಪಂದಿಸುತ್ತಿಲ್ಲ ಎಂದು ಆರೋಪಿಸಿದರು.

ಭೂಮಿ ಪಡೆದು ಕಾರ್ಖಾನೆ ಸ್ಥಾಪಿಸಿ, ಲಾಭ ಗಳಿಸುತ್ತಿರುವ ಕಾರ್ಖಾನೆಗಳ ಆಡಳಿತ ಮಂಡಳಿ ರೈತರನ್ನು ನಿರ್ಲಕ್ಷಿಸುತ್ತಿದೆ. ಈ ವಂಚನೆಯ ವಿರುದ್ಧ ಆ.28ರಂದು ಬೆಳಗ್ಗೆ 11ಕ್ಕೆ ಕಡಕೊಳ ಕೈಗಾರಿಕಾ ಪ್ರದೇಶ ನೀರು ಸರಬರಾಜು ಕೇಂದ್ರದ ಮುಂದೆ ಭೂಮಿ ಕಳೆದುಕೊಂಡು ವಂಚಿಸಲ್ಪಟ್ಟಿರುವ ರೈತರೊಂದಿಗೆ ಬೃಹತ್ ಅನಿರ್ದಿಷ್ಟಾವಧಿ ಪ್ರತಿ ಭಟನೆ ನಡೆಸಲಾಗುತ್ತಿದೆ. ಈ ಪ್ರತಿಭಟನೆಯಲ್ಲಿ ಸುತ್ತಮುತ್ತಲ ಗ್ರಾಮಸ್ಥರು ಹಾಗೂ ಇತರ ಸಂಘಟನೆಗಳ ಮುಖಂಡರು ಪಾಲ್ಗೊಳ್ಳಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಾಮೂಹಿಕ ನಾಯಕತ್ವದ ಕರ್ನಾಟಕ ರಾಜ್ಯ ರೈತ ಸಂಘದ ಪದಾಧಿಕಾರಿಗಳಾದ ಶಂಕರ ನಾಯಕ ಹೆಡತಲೆ, ಶ್ರೀಧರ್, ಜಿ. ಮಂಜುನಾಥ್, ಕೆ.ಜಿ. ಶಿವಪ್ರಸಾದ್ ಇದ್ದರು.

ಅರಸು ಜನಾಂಗದ ಚಿಂತನ-ಮಂಥನ ಕಾರ್ಯಕ್ರಮ



ಮೈಸೂರು,ಆ.25(ಎಂಟಿವೈ)– ಮೈಸೂರಿನ ತ್ಯಾಗರಾಜ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದ ಆವರಣದಲ್ಲಿ ಆ.27ರಂದು ಬೆಳಗ್ಗೆ 10.30ಕ್ಕೆ ಮಾಜಿ ಮುಖ್ಯಮಂತ್ರಿ ಡಿ.ದೇವರಾಜ ಅರಸ್ ಅವರ ಜನ್ಮ ದಿನ, ಅರಸು ಜನಾಂಗದ ಚಿಂತನ-ಮಂಥನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಕರ್ನಾಟಕ ಅರಸು ಮಹಾಮಂಡಲಿ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಬಿ.ಎಸ್.ಶ್ರೀಧರರಾಜೇ ಅರಸ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕರ್ನಾಟಕ ಅರಸು ಮಹಾ ಮಂಡಲಿ ಚಾರಿಟಬಲ್ ಟ್ರಸ್ಟ್ ಮತ್ತು ಡಿ. ದೇವರಾಜ ಅರಸ್ ದತ್ತಿ ಸಂಯುಕ್ತಾಶ್ರಯದಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದ್ದು, ಜಯಚಾಮರಾಜೇ ಅರಸ್ ಅವರ ಅನುವಾದಿತ ಕೃತಿ 'ಹೆಣ ಹೊರುವವನ ವೃತ್ತಾಂತ' ಕೃತಿಯನ್ನು ಅಧಿಕಾರಿ ಡಾ. ಕವಿತಾ ಜಯರಾವ್ ಬಿಡುಗಡೆ ಮಾಡಲಿದ್ದಾರೆ. ಕಾರ್ಯಕ್ರಮವನ್ನು ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಉದ್ಘಾಟಿಸಲಿದ್ದಾರೆ. ಸಾಹಿತಿ ಪ್ರೊ.ಸಿ. ನಾಗಣ್ಣ ಕೃತಿ ಪರಿಚಯ ಮಾಡಿಕೊಡಲಿದ್ದಾರೆ ಎಂದರು.

ಅರಸು ಜನಾಂಗದ ಚಿಂತನ ಮಂಥನ ಕಾರ್ಯಕ್ರಮದಲ್ಲಿ ಕೆಯುಎಂಸಿ ಟ್ರಸ್ಟ್ ಗೌರವಾಧ್ಯಕ್ಷ ಎಂ.ಎಲ್. ಬಸವರಾಜೇ ಅರಸ್, ಉಪಾಧ್ಯಕ್ಷರಾದ ಎಂ.ಜಿ.ಆರ್. ಅರಸ್, ಇಂದುಕಲಾ ಅರಸ್, ಕೆ.ವಿ. ಶ್ರೀಧರ್, ಕರ್ನಾಟಕ ಅರಸ್ ಪರಿಷತ್ ಅಧ್ಯಕ್ಷ ಸಿ.ವಿ. ಶ್ರೀಧರ್, ಕ್ಷತ್ರೀಯ ಸಂಘದ ಅಧ್ಯಕ್ಷ ಸಿ.ವಿ.ಶ್ರೀಧರ್ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಎಚ್.ಎಂ.ಟಿ. ಲಿಂಗರಾಜೇ ಅರಸ್, ವೈ.ಎಂ. ಕಿರಣ್ ಹಾಗೂ ಇನ್ನಿತರರು ಇದ್ದರು.

ವನಶ್ರೀ ಪ್ರಾಂತ ಕಾರ್ಯಾಲಯ ಉದ್ಘಾಟನೆ



ಮೈಸೂರು,ಆ.25(ಎಂಟಿವೈ)– ಮೈಸೂರಿನ ಬಸವೇಶ್ವರ ರಸ್ತೆಯಲ್ಲಿ ತೆರೆಯಲಾಗಿರುವ ಬುಡಕಟ್ಟು ಜನರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿರುವ 'ವನವಾಸಿ ಕಲ್ಯಾಣ ಕರ್ನಾಟಕ' ಸಂಸ್ಥೆಯ ಪ್ರಾಂತ ಕಾರ್ಯಾಲಯ 'ವನಶ್ರೀ' ಉದ್ಘಾಟನಾ ಕಾರ್ಯಕ್ರಮ ಆ.28ರಂದು ಬೆಳಗ್ಗೆ 11 ಗಂಟೆಗೆ ನಡೆಯಲಿದೆ ಎಂದು ನಿವೃತ್ತ ತಹಶೀಲ್ದಾರ್ ಡಾ.ರಂಗನಾಥ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1952ರಲ್ಲಿ ಜಸ್ಪುರದಲ್ಲಿ ಸ್ಥಾಪನೆಗೊಂಡ ವನವಾಸಿ ಕಲ್ಯಾಣಾಶ್ರಮ ಸಂಸ್ಥೆ ಬುಡಕಟ್ಟು ಹಾಗೂ ಗಿರಿಜನರ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದೆ. 1989ರಲ್ಲಿ ಕರ್ನಾಟಕದಲ್ಲಿ ವನವಾಸಿ ಕಲ್ಯಾಣ ಕರ್ನಾಟಕ ಸಂಸ್ಥೆ ರಾಜ್ಯದಲ್ಲಿ ಸ್ಥಾಪಿಸಲಾಯಿತು. ರಾಜ್ಯದಾದ್ಯಂತ ಬುಡಕಟ್ಟು ಸಮುದಾಯದ ಪರ ಕಾರ್ಯ ನಿರ್ವಹಿಸುತ್ತಿದೆ. ಇದೀಗ ಮೈಸೂರಲ್ಲಿ ಪ್ರಾಂತೀಯ ಕಚೇರಿ ಆರಂಭಿಸಿ, ಮೈಸೂರು, ಚಾಮರಾಜನಗರದ ಬುಡಕಟ್ಟು ನಿವಾಸಿಗಳ ಹಿತ ಕಾಯಲು ಹೋರಾಟ ನಡೆಸಲಾಗುತ್ತದೆ ಎಂದರು.

ಮೈಸೂರಿನ ಬಸವೇಶ್ವರ ರಸ್ತೆಯ ಅಕ್ಕಮ್ಮಣ್ಣಿ ಆಸ್ಪತ್ರೆ ಹಿಂಭಾಗದಲ್ಲಿ 'ವನಶ್ರೀ' ಕಚೇರಿಯನ್ನು ಆ.28ರಂದು ಬೆಳಗ್ಗೆ 11ಕ್ಕೆ ಆರ್ ಎಸ್‌ಎಸ್‌ನ ಹಿರಿಯರಾದ ಮುಕುಂದ ಉದ್ಘಾಟಿಸಲಿದ್ದಾರೆ. ವನವಾಸಿ ಕಲ್ಯಾಣದ ಅಧ್ಯಕ್ಷ ಮನು ಕಾವೇರಪ್ಪ ಚಕ್ಕೇರ ಅಧ್ಯಕ್ಷತೆ ವಹಿಸುವ ಕಾರ್ಯಕ್ರಮದಲ್ಲಿ ಅಖಿಲ ಭಾರತೀಯ ವನವಾಸಿ ಕಲ್ಯಾಣಾ ಶ್ರಮದ ರಾಷ್ಟ್ರೀಯ ಸಹ ಸಂಘಟನಾ ಕಾರ್ಯದರ್ಶಿ ರಮೇಶ್ ಬಾಬು, ಆರ್ ಎಸ್‌ಎಸ್ ಕ್ಷೇತ್ರಿಯ ಕಾರ್ಯವಾಹ ತಿಪ್ಪೇಸ್ವಾಮಿ, ವಿಧಾನ ಪರಿಷತ್ ಸದಸ್ಯ ಮತ್ತು ವನವಾಸಿ ಕಲ್ಯಾಣದ ರಾಜ್ಯ ಕಾರ್ಯದರ್ಶಿ ಶಾಂತರಾಮ ಸಿದ್ಧಿ, ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷ ಡಾ.ಎಸ್. ಮುರಳಿ, ಕಾರ್ಯಾಧ್ಯಕ್ಷ ರಾಧಾಕೃಷ್ಣ ಮಳವಳ್ಳಿ ಹಾಗೂ ಇನ್ನಿತರರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ವನವಾಸಿ ಕಲ್ಯಾಣ ಸಂಸ್ಥೆಯ ರಾಜ್ಯ ಸಂಘಟನಾ ಕಾರ್ಯದರ್ಶಿ ಶ್ರೀನಿವಾಸ್, ತಮ್ಮಯ್ಯ, ಸತ್ಯಕೀರ್ತಿ ಇದ್ದರು.

ರೋಟರಿ ದತ್ತ ಶಿಕ್ಷಕರ ಪ್ರಶಸ್ತಿ

ಮೈಸೂರು, ಆ. 25– ದತ್ತ ಜ್ಯುವೆಲ್ಲರ್ಸ್ ಮಾಲೀಕರಾದ ರೋ. ಕೆ. ದಿನೇಶ್ ಬಾಬು ಮತ್ತು ಲಕ್ಷ್ಮಿ ದಿನೇಶ್ ಅವರು 1997 ರಿಂದ ಮೈಸೂರಿನ ಶ್ರೇಷ್ಠ ಶಿಕ್ಷಕರಿಗೆ ಸನ್ಮಾನ ಮಾಡುವ ಸಲುವಾಗಿ ರೋಟರಿ ದತ್ತ ಶಿಕ್ಷಕರ ಪ್ರಶಸ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ರೋಟರಿ ಮೈಸೂರು ಸಂಸ್ಥೆಯು ಡಾ. ಸರ್ವಪಲ್ಲಿ ರಾಧಾಕೃಷ್ಣ ಅವರ ಜನ್ಮ ದಿನಾಚರಣೆ ಅಂಗವಾಗಿ ಸೆ. 5 ರಂದು ಶ್ರೇಷ್ಠ ಶಿಕ್ಷಕರಿಗೆ ರೋಟರಿ ದತ್ತ ಶಿಕ್ಷಕರ ಪ್ರಶಸ್ತಿ ನೀಡಿ, ಸನ್ಮಾನಿಸಲಾಗುತ್ತದೆ.

ಅರ್ಹ ಶಿಕ್ಷಕರು ಶಾಲಾ ಮುಖ್ಯಸ್ಥರ ಮೂಲಕ ಅರ್ಜಿಯನ್ನು ಸ್ವವಿವರ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವರ ಸಾಧನೆಯ ವಿವರಗಳನ್ನು ಆ. 28 ರೊಳಗೆ ರೋಟರಿ ಸೆಂಟರ್, ಜೆಎಲ್‌ಬಿ ರಸ್ತೆ, ಮೈಸೂರು, ದೂ. 0821–4247823 ಇಲ್ಲಿಗೆ ಕಳುಹಿಸಲು ಕೋರಲಾಗಿದೆ.

ನಾಳೆ ವಾಯ್ಸ್ ಆಫ್ ಪೀಪಲ್ ಸಂಸ್ಥೆ ಉದ್ಘಾಟನೆ



ಮೈಸೂರು,ಆ.25(ಎಂಟಿವೈ)– ಮೈಸೂರಲ್ಲಿ ನೂತನವಾಗಿ 'ವಾಯ್ಸ್ ಆಫ್ ಪೀಪಲ್' ಹೆಸರಲ್ಲಿ ಸ್ವಯಂಸೇವಾ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದ್ದು, ಆ. 27ರಂದು ಬೆಳಗ್ಗೆ 10ಕ್ಕೆ ವಿಜಯನಗರ ರೈಲ್ವೆ ಬಡಾವಣೆಯ ಇಂದಿರಾ ನರ್ಸಿಂಗ್ ಹೋಂ ಎದುರಿನ ಮೈದಾನದಲ್ಲಿ ಸಂಸ್ಥೆಯ ಉದ್ಘಾಟನಾ ಸಮಾರಂಭ ಏರ್ಪಡಿಸಲಾಗಿದೆ ಎಂದು ಕಾನೂನು ಸಲಹೆಗಾರ ಪ್ರದೀಪ್ ಬಿಡನ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸಲು ಹೋರಾಟ ಮಾಡುವ ಉದ್ದೇಶದಿಂದ ನೂತನವಾಗಿ ಸ್ಥಾಪಿಸಲಾಗುವ ಸಂಸ್ಥೆಯನ್ನು ಶಾಸಕ ಕೆ.ಹರೀಶ್ ಗೌಡ ಉದ್ಘಾಟಿಸಲಿದ್ದಾರೆ. ಅಂದು ಬೆಳಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆವರೆಗೆ ಸಾರ್ವಜನಿಕರಿಗೆ ಲಯನ್ಸ್ ಬ್ಲಡ್ ಸೆಂಟರ್ ಜೀವಧಾರ ಸಂಸ್ಥೆ ಸಹಯೋಗದಲ್ಲಿ ಉಚಿತವಾಗಿ ರಕ್ತದೊತ್ತಡ, ಮಧುಮೇಹ ತಪಾಸಣಾ ಶಿಬಿರ ಹಾಗೂ ರಕ್ತದಾನ ಶಿಬಿರ ಆಯೋಜಿಸಲಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ವಾಯ್ಸ್ ಆಫ್ ಪೀಪಲ್ ಸಂಸ್ಥೆಯ ಶ್ವೇತಾ, ಅಜಯ್ ಸಿಂಗ್, ವಸಂತ್ ರಾವ್ ಚೌಹ್ವಾಣ್, ಪಿ. ರಾಕೇಶ್, ಮಧುಸೂದನ್ ಇದ್ದರು.

ಡಬಲ್ ಇಂಜಿನ್ ಸರ್ಕಾರ ಪರಿಕಲ್ಪನೆ ಕೆಟ್ಟ ಬೆಳವಣಿಗೆ

ಕ್ಷೇತ್ರ ಪುನರ್ ವಿಂಗಡಣೆ; ಅಂತಾರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ಕುರಿತ ಸಮ್ಮೇಳನ

ಮೈಸೂರು,ಆ.25(ಜಿಎ)–ದೇಶದಲ್ಲಿ ಒಂದೇ ಶಕ್ತಿಯು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಮೇಲೆ ಹಿಡಿತ ಸಾಧಿಸಲು ಡಬಲ್ ಇಂಜಿನ್ ಸರ್ಕಾರ ಪರಿಕಲ್ಪನೆಗಳನ್ನು ಹೊಸದಾಗಿ ಬಿತ್ತಲಾಗುತ್ತಿದ್ದು, ಇದು ಕೆಟ್ಟ ಬೆಳವಣಿಗೆ. ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದ ನಡೆಯಾಗಿದೆ ಎಂದು ರಾಷ್ಟ್ರೀಯ ಕಾನೂನು ಶಾಲೆ ಇಂಡಿಯಾ ವಿವಿಯ ವಿಶ್ರಾಂತ ಕುಲಪತಿ ಡಾ.ಜಿ.ಮೋಹನ್‌ಗೋಪಾಲ್ ಟೀಕಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಡಾ.ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಮತ್ತು ಇಂಡಿಯನ್ ಪಾಲಿಟಿ ಫೋರಂ ಸಹಯೋಗದಲ್ಲಿ ಮಾನಸಗಂಗೋತ್ರಿಯ ವಿಶ್ವಜ್ಞಾನಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ 'ಕ್ಷೇತ್ರ ಪುನರ್ ವಿಂಗಡಣೆ; ಅಂತಾರಾಜ್ಯ ಅಸಮತೆ ಮತ್ತು ಅದರ ಪರಿಣಾಮಗಳು' ಕುರಿತ 2 ದಿನಗಳ ರಾಷ್ಟ್ರೀಯ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದರು.

ಕೇಂದ್ರ ಮತ್ತು ರಾಜ್ಯಗಳಲ್ಲಿ ಒಂದೇ ಪಕ್ಷ ಅಧಿಕಾರ ಹಿಡಿಯಬೇಕೆಂಬ ಹುನ್ನಾರ ಇದರಲ್ಲಿ ಅಡಗಿದೆ. ಇದರಿಂದ ರಾಜ್ಯ ಸರ್ಕಾರಕ್ಕೆ ಉತ್ತಮ ಆರ್ಥಿಕ, ಯೋಜನೆಗಳ ಪ್ಯಾಕೇಜ್ ದೊರೆಯಲಿದೆ ಎಂಬ ಆಸೆ ಹುಟ್ಟಿಸಲಾಗುತ್ತಿದ್ದು, ಕೇಂದ್ರ ಸರ್ಕಾರವು ಒಕ್ಕೂಟ ವ್ಯವಸ್ಥೆಯನ್ನು ದುರ್ಬಲಗೊಳಿಸಿ ರಾಜ್ಯ ಸರ್ಕಾರಗಳ ಮೇಲೆ ಹಿಡಿತ ಸಾಧಿಸುತ್ತಿದೆ. ಆರ್ಥಿಕ ಉದ್ದೇಶಕ್ಕಿಂತ ರಾಜಕೀಯ ಉದ್ದೇಶವೇ ಹೆಚ್ಚು ಕೆಲಸ ಮಾಡುತ್ತಿದೆ. ಇದು ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆಗೆ ವಿರುದ್ಧವಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ರಾಜಕೀಯ, ಸರ್ಕಾರಿ ಉನ್ನತ ಸ್ಥಾನ, ಮಾಧ್ಯಮ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲೂ ಮೇಲ್ವರ್ಗದ ಒಂದು ಜಾತಿಯೇ ಏಕಸ್ವಾಮ್ಯತೆ ಸಾಧಿಸಿದೆ. ಸ್ವಾತಂತ್ರ್ಯ ಬಂದು ಇಷ್ಟು ವರ್ಷವಾದರೂ ಇದು ನಿವಾರಣೆಯಾಗಿಲ್ಲ. ಸಮಾಜದ ತಳ ಸಮುದಾಯದವರು ಮುಖ್ಯವಾಹಿನಿಗೆ ಬರಲು ಈಗಲೂ ಕಷ್ಟಪಡುವಂತಾಗಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಾತ್ಯತೀತ ದೇಶದಲ್ಲಿ ಹಿಂದೂ ಪ್ರಾಬಲ್ಯ ಹೆಚ್ಚಾಗುತ್ತಿದ್ದು, ಅಲ್ಪಸಂಖ್ಯಾತರಾದ ಮುಸ್ಲಿಂ, ಕ್ರೈಸ್ತರಿಗೆ ಅವಕಾಶಗಳು ಕಡಿಮೆಯಾಗಿದೆ. ಕೇರಳ ಸರ್ಕಾರದ ಮುಖ್ಯ ಕಾರ್ಯದರ್ಶಿ ಹುದ್ದೆಗೆ ಏರಲು ಈಗಲೂ ಮುಸ್ಲಿಮರಿಗೆ ಸಾಧ್ಯವಾಗಿಲ್ಲ. ದಲಿತರು ಈ ಹುದ್ದೆಗೆ ತಲುಪುವುದು ಹೇಗೆ? ಎಂದು ಪ್ರಶ್ನಿಸಿದರು.

ಹೆಚ್ಚು ಜನಸಂಖ್ಯೆ ಹೊಂದಿರುವ ರಾಜ್ಯ ಕಡಿಮೆ ಅಭಿವೃದ್ಧಿ ರಾಜ್ಯಗಳು ಸಂಸತ್‌ನಲ್ಲಿ ಹೆಚ್ಚು ಪ್ರಾತಿನಿಧ್ಯ ಮತ್ತು ಪ್ರಾಬಲ್ಯ ಪಡೆದುಕೊಂಡಿವೆ. ಕಡಿಮೆ ಪ್ರಾತಿನಿಧ್ಯ ಪಡೆದಿರುವ ರಾಜ್ಯ ಹೆಚ್ಚು ಅಭಿವೃದ್ಧಿ ಹೊಂದಿದ ರಾಜ್ಯಗಳು ಒಕ್ಕೂಟ ವ್ಯವಸ್ಥೆಯಲ್ಲಿ ಕಡಿಮೆ ಪ್ರಭಾವ ಹೊಂದಿವೆ. ಹೆಚ್ಚು ಅಭಿವೃದ್ಧಿ ಪಡೆದ ಕಾರಣಕ್ಕಾಗಿ ಈ ರಾಜ್ಯಗಳು ಅಸಮತೆ ಪರಿಣಾಮಕ್ಕೆ ಒಳಗಾಗಿವೆ ಎಂದು ವಿವರಿಸಿದರು.

ಜನಸಂಖ್ಯಾ ಆಧಾರದ ಮೇಲೆ ಸಂಸತ್‌ನಲ್ಲಿ ಪ್ರಾತಿನಿಧ್ಯ ನಿಗದಿಯಾಗಬೇಕು. ಆ ನಿಟ್ಟಿನಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಆಗಬೇಕು. ಇದುವೇ ಡಾ.ಬಿ. ಆರ್.ಅಂಬೇಡ್ಕರ್ ಆಶಯ ಸಹ ಆಗಿತ್ತು. ಇದರಿಂದ ಕೆಳಹಂತ ಸಮುದಾಯಗಳು ಉನ್ನತ ಹುದ್ದೆಗಳಿಗೆ ಏರಲು ಸಾಧ್ಯವಾಗಲಿದೆ ಎಂದು ತಿಳಿಸಿದರು.



"ಹಿಂದಿಯೇತರ ದಕ್ಷಿಣ ಭಾರತದ ರಾಜ್ಯಗಳಾದ ಕೇರಳ, ತಮಿಳುನಾಡು, ಕರ್ನಾಟಕ, ಆಂಧ್ರಪ್ರದೇಶ, ತೆಲಂಗಾಣ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿವೆ. ಅಂತೆಯೇ ಉತ್ತರ ಭಾರತ ಹಿಂದಿಯೇತರ ರಾಜ್ಯಗಳಾದ ಪಂಜಾಬ್, ಜಮ್ಮು-ಕಾಶ್ಮೀರ ಜನಸಂಖ್ಯೆಯಲ್ಲಿ ಹಿಂದಿವೆ. ಆದರೆ, ಅದೇ ಹಿಂದಿ ಭಾಷಿಕ ರಾಜ್ಯಗಳು ಅಭಿವೃದ್ಧಿಯಲ್ಲಿ ಹಿಂದಿವೆ. ಜನಸಂಖ್ಯೆಯಲ್ಲಿ ಮುಂದಿವೆ ಇದು ರಾಜ್ಯಗಳ ನಡುವೆ ಅಸಮಾನತೆಗೆ ನಾಂದಿ ಹಾಡಿದೆ ಎಂದು ತಿಳಿಸಿದರು.

– ಡಾ.ಜಿ.ಮೋಹನ್‌ಗೋಪಾಲ್, ರಾಷ್ಟ್ರೀಯ ಕಾನೂನು ಶಾಲೆ ಇಂಡಿಯಾ ವಿವಿಯ ವಿಶ್ರಾಂತ ಕುಲಪತಿ

ಈ ವೇಳೆ ವೇದಿಕೆಯ ಅಧ್ಯಕ್ಷ, ನಿವೃತ್ತ ಮೇಜರ್ ಜನರಲ್ ಡಾ.ಎಸ್.ಜಿ.ಒಂಬತ್ ಕೆರೆ ಮಾತನಾಡಿ, ಭಾರತ ದೇಶವನ್ನು ಉತ್ತರ ಮತ್ತು ದಕ್ಷಿಣ ಭಾಗವಾಗಿ ವಿಭಜನೆ ಮಾಡುವ ಷಡ್ಯಂತ್ರ ನಡೆದಿದೆ. ಇದು ಹೊಸ ಸಂಸತ್ ಉದ್ಘಾಟನೆಯೊಂದಿಗೆ ಇಂತಹವೊಂದು ಮುನ್ಸೂಚನೆ ಹೊರಬಿದ್ದಿದೆ ಎಂದರು.

ಕಾರ್ಯಕ್ರಮದಲ್ಲಿ ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿಯ ನಿವೃತ್ತ ಸಂಪಾದಕ ಪ್ರೊ.ಗೋಪಾಲ್ ಗುರು, ನಿವೃತ್ತ ಪ್ರಾಧ್ಯಾಪಕ ಪ್ರೊ.ಆರ್.ಸೋಮ ಶೇಖರ್, ಮೈವಿವಿ ಡಾ.ಬಿ.ಆರ್.ಅಂಬೇಡ್ಕರ್ ಪೀಠದ ಸಂದರ್ಶಕ ಪ್ರಾಧ್ಯಾಪಕಿ ಪ್ರೊ.ಆರ್.ಇಂದಿರಾ, ಅಂಬೇಡ್ಕರ್ ಕೇಂದ್ರ ನಿರ್ದೇಶಕ ಪ್ರೊ.ಎಸ್.ನರೇಂದ್ರಕುಮಾರ್, ಪ್ರಾಧ್ಯಾಪಕ ಪ್ರೊ.ಜೆ.ಸೋಮಶೇಖರ್ ಉಪಸ್ಥಿತರಿದ್ದರು.

ಪ್ರಧಾನಿ ಮೋದಿಗೆ ಗ್ರೀಸ್‌ನ ಅತ್ಯುನ್ನತ ನಾಗರಿಕ ಪ್ರಶಸ್ತಿ ಪ್ರದಾನ



ಅಥೆನ್ಸ್, ಆ.25–ಪ್ರಧಾನಿ ಮೋದಿಯವರಿಗೆ ಗ್ರೀಸ್ ತನ್ನ ಎರಡನೇ ಅತ್ಯುನ್ನತ ನಾಗರಿಕ ಪ್ರಶಸ್ತಿಯನ್ನು ನೀಡಿದೆ. ಅಥೆನ್ಸ್‌ನಲ್ಲಿ ಗ್ರೀಸ್ ಅಧ್ಯಕ್ಷೆ ಕಟರೀನಾ ಸಕೆಲ್ಲರೊಪೌಲೌ ಅವರು ಪ್ರಧಾನಿ ನರೇಂದ್ರ ಮೋದಿಯವರಿಗೆ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ಆರ್ಡರ್ ಆಫ್ ಆನರ್' ಪ್ರಶಸ್ತಿ ಪ್ರಧಾನ ಮಾಡಿದರು.

ಈ ಅತ್ಯುನ್ನತ ಗೌರವಕ್ಕಾಗಿ ಪ್ರಧಾನಿ ಮೋದಿ ಟ್ವೀಟ್ ಮಾಡುವ ಮೂಲಕ ಗ್ರೀಸ್‌ಗೆ ಧನ್ಯವಾದ ತಿಳಿಸಿದ್ದಾರೆ. ನಾನು ಅಧ್ಯಕ್ಷೆ ಕಟರೀನಾ ಅವರಿಗೆ ಧನ್ಯವಾದ ಹೇಳಲು ಬಯಸುತ್ತೇನೆ. ಗ್ರೀಸ್ ಸರ್ಕಾರ ಮತ್ತು ಜನರಿಗೆ ಧನ್ಯವಾದಗಳು. ಇದು ಗ್ರೀಸ್ ಜನತೆಗೆ ಭಾರತದ ಬಗೆಗಿನ ಗೌರವವನ್ನು ತೋರಿಸುತ್ತದೆ ಎಂದು ಟ್ವೀಟಿಸಿದ್ದಾರೆ.

ಸುದೀರ್ಘ 40 ವರ್ಷಗಳ ನಂತರ ಭಾರತದ ಪ್ರಧಾನಿಯೊಬ್ಬರು ಗ್ರೀಸ್‌ಗೆ ಬಂದಿದ್ದಾರೆ. ಅದೇನೇ ಇದ್ದರೂ, ನಮ್ಮ ಸಂಬಂಧಗಳ ಆಳವು ಕಡಿಮೆಯಾಗಿಲ್ಲ ಅಥವಾ ಸಂಬಂಧಗಳ ವಿಶ್ವಾಸ ಸ್ವಲ್ಪವೂ ಕಡಿಮೆಯಾಗಿಲ್ಲ. ಗ್ರೀಸ್ ಮತ್ತು ಭಾರತವು ಪ್ರಪಂಚದ 2 ಅತ್ಯಂತ ಹಳೆಯ ನಾಗರಿಕತೆಗಳು. 2 ಹಳೆಯ ಪ್ರಜಾಪ್ರಭುತ್ವ ಸಿದ್ಧಾಂತಗಳು ಮತ್ತು 2 ಹಳೆಯ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧಗಳ ನಡುವಿನ ನೈಸರ್ಗಿಕ ಹೊಂದಾಣಿಕೆಯಾಗಿದೆ. ನಮ್ಮ ಸಂಬಂಧದ ತಳಹದಿಯು ಪುರಾತನ ಮತ್ತು ಬಲವಾದದ್ದು ಎಂದು ಬರೆದುಕೊಂಡಿದ್ದಾರೆ.

ಗ್ರೀಕ್–ಭಾರತೀಯ ಸ್ನೇಹದ ಕಾರ್ಯತಂತ್ರದ ಪ್ರಚಾರದಲ್ಲಿ ಪ್ರಧಾನಿ ಮೋದಿಯವರ ನಿರ್ಣಾಯಕ ಕೊಡುಗೆಯನ್ನು ಗುರುತಿಸಿ ಗ್ರೀಸ್ ಗೌರವಿಸಿದೆ. ಈ ಭೇಟಿಯ ಸಂದರ್ಭದಲ್ಲಿ ಗ್ರೀಕ್ ರಾಜ್ಯವು ಭಾರತದ ಪ್ರಧಾನಮಂತ್ರಿಯನ್ನು ಗೌರವಿಸುತ್ತದೆ ಎಂದು ಗ್ರೀಸ್ ಹೇಳಿದೆ. ಅವರು ತಮ್ಮ ದೇಶದ ಜಾಗತಿಕ ವ್ಯಾಪ್ತಿಯನ್ನು ಉತ್ತೇಜಿಸಿದ ರಾಜಕಾರಣಿ ಮತ್ತು ಭಾರತದ ಆರ್ಥಿಕ ಪ್ರಗತಿ ಮತ್ತು ಸಮೃದ್ಧಿಗಾಗಿ ವ್ಯವಸ್ಥಿತವಾಗಿ ಕೆಲಸ ಮಾಡುತ್ತಿದ್ದಾರೆ. ದಿಟ್ಟ ಸುಧಾರಣೆಗಳನ್ನು ತರುತ್ತಾರೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಸರ ಸಂರಕ್ಷಣೆ ಮತ್ತು ಹವಾಮಾನ ಬದಲಾವಣೆಯನ್ನು ಪ್ರಮುಖ ಆದ್ಯತೆಗಳಿಗೆ ತಂದ ರಾಜಕಾರಣಿ ಎಂದು ಗ್ರೀಸ್ ಹೇಳಿದೆ.

ಮಳವಳ್ಳಿ ನರ್ಸರಿಯಲ್ಲಿ ಕಳಪೆ ಶ್ರೀಗಂಧ ಸಸಿ: ತನಿಖೆಗೆ ಅರಣ್ಯ ಸಚಿವರ ಕ್ರಮ

ಬೆಂಗಳೂರು ಆ.25–ಮಂಡ್ಯ ಜಿಲ್ಲೆಯ ಮಳವಳ್ಳಿ ಅರಣ್ಯ ಇಲಾಖೆಯ ನರ್ಸರಿಯಲ್ಲಿ ಕಳಪೆ ಗುಣಮಟ್ಟದ ಶ್ರೀಗಂಧದ ಸಸಿ ಬೆಳೆಸಿರುವ ಕುರಿತು ಸಮಗ್ರ ತನಿಖೆ ನಡೆಸಿ ಕ್ರಮ ಕೈಗೊಳ್ಳಲಾಗುವುದು ಎಂದು ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಬೆಂಗಳೂರಿನ ವಿಕಾಸಸೌಧದಲ್ಲಿ ಅಖಿಲ ಕರ್ನಾಟಕ ಶ್ರೀಗಂಧ ಮತ್ತು ವನಕೃಷಿ ಬೆಳೆಗಾರರ ಸಂಘದ ಪ್ರತಿನಿಧಿಗಳ ನಿಯೋಗದ ಅಹವಾಲು ಆಲಿಸಿದ ಸಚಿವರು, ಶ್ರೀಗಂಧ ಬೆಳೆಗಾರರ ಸಮಸ್ಯೆ ಪರಿಹರಿಸಲು ಕಾನೂನು ಚೌಕಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದರು.

ಮಂಡ್ಯ ಜಿಲ್ಲೆ ಮಳವಳ್ಳಿಯ ಅರಣ್ಯ ಇಲಾಖೆಯ ನರ್ಸರಿಗಳಲ್ಲಿ ಕಳಪೆ ಗುಣಮಟ್ಟದ ಶ್ರೀಗಂಧದ ಸಸಿ ಬೆಳೆಸಲಾಗಿದ್ದು, ರೈತರು ಖರೀದಿಸಲು ನಿರಾಕರಿಸಿದರೂ ಬಲವಂತವಾಗಿ ಈ ಸಸಿಗಳನ್ನು ನೀಡಲಾಗುತ್ತಿದೆ ಎಂಬ ದೂರಿಗೆ ಸ್ಪಂದಿಸಿದ ಸಚಿವರು ಈ ಬಗ್ಗೆ ಸಮಗ್ರ ತನಿಖೆ ನಡೆಸಿ ಕ್ರಮ ಜರುಗಿಸುವುದಾಗಿ ತಿಳಿಸಿದರು. ರೈತರು ತಮ್ಮ ಜಮೀನಿನಲ್ಲಿ ಬೆಳೆಯುವ ಶ್ರೀಗಂಧದ ಮರಗಳ ರಕ್ಷಣೆ, ಕಟಾವು ಮತ್ತು ಸಾಗಾಟಕ್ಕೆ ಸಂಬಂಧಿಸಿದಂತೆ ಇರುವ ತೊಡಕು ನಿವಾರಿಸುವ ನಿಟ್ಟಿನಲ್ಲಿ ಶ್ರೀಗಂಧ ನೀತಿಗೆ ಬದಲಾವಣೆ ತರಲು ಶೀಘ್ರ ಸಭೆ ಕರೆಯುವುದಾಗಿ ಈಶ್ವರ ಖಂಡ್ರೆ ತಿಳಿಸಿದ್ದಾರೆ.






ಖಾಸಗಿ ಜಮೀನಿನಲ್ಲಿ ಬೆಳೆದ ಶ್ರೀಗಂಧದ ಮರಗಳ ಕಳವು ಪ್ರಕರಣಗಳು ನಡೆದಾಗ ಅರಣ್ಯ ಇಲಾಖೆಯೇ ದೂರು ದಾಖಲಿಸಿಕೊಳ್ಳುವ ಕುರಿತಂತೆ ಸೂಚನೆ ನೀಡುವುದಾಗಿ ಆಶ್ವಾಸನೆ ನೀಡಿದರು.

ಬಿದಿರು ಬೆಳೆಗೆ ಪ್ರೋತ್ಸಾಹ ಧನ ನೀಡುವ ಯೋಜನೆ ಇದ್ದರೂ ಅರಣ್ಯ ಇಲಾಖೆ ಉತ್ತೇಜನ ನೀಡುತ್ತಿಲ್ಲ ಎಂಬ ದೂರಿಗೆ ಸ್ಪಂದಿಸಿದ ಸಚಿವರು ಈ ಸಂಬಂಧ ವಿಚಾರಣೆ ನಡೆಸಿ ಪರಿಹಾರ ಒದಗಿಸುವುದಾಗಿ ತಿಳಿಸಿದರು. ರೈತರಿಗೆ ವಿವಿಧ ಪ್ರಭೇದದ ಸಸಿಗಳನ್ನು ಏಕ ಗವಾಕ್ಷಿ ಯೋಜನೆ ಅಡಿಯಲ್ಲಿ ವಿತರಿಸಬೇಕು ಎಂಬ ನಿಯೋಗದ ಬೇಡಿಕೆಯ ಕುರಿತಂತೆ ತೋಟಗಾರಿಕೆ ಇಲಾಖೆಯೊಂದಿಗೆ ಚರ್ಚಿಸುವುದಾಗಿ ತಿಳಿಸಿದರು. ಶ್ರೀಗಂಧದ ಬೆಳೆದ ಜಮೀನನ್ನು ಸರ್ಕಾರ ರಸ್ತೆ, ಸೇತುವೆ ಇತ್ಯಾದಿ ಉದ್ದೇಶಕ್ಕೆ ಭೂಸ್ವಾಧೀನ ಮಾಡಿಕೊಳ್ಳುವ ಸಂದರ್ಭದಲ್ಲಿ ಶ್ರೀಗಂಧ ಮರಗಳ ಮೌಲ್ಯೀಕರಣದಲ್ಲೂ ಸಮಸ್ಯೆಗಳಿರುವ ಕುರಿತಂತೆ ರೈತರ ಸಮಸ್ಯೆ ಆಲಿಸಿದ ಸಚಿವರು ಮರು ಮೌಲ್ಯೀಕರಣ ದರ ನಿಗದಿಪಡಿಸುವ ಕುರಿತಂತೆ ಕಾನೂನು ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ರಾಜೀವ್ ರಂಜನ್, ಅರಣ್ಯ ಸಂಪನ್ಮೂಲ ನಿರ್ವಹಣಾ ವಿಭಾಗದ ಎ.ಪಿ.ಸಿ.ಸಿ.ಎಫ್. ವನಶ್ರೀ ವಿಪಿನ್ ಸಿಂಗ್, ಶ್ರೀಗಂಧ ಬೆಳೆಗಾರರ ಸಂಘದ ಅಧ್ಯಕ್ಷ ಅಮರ ನಾರಾಯಣ್ ಮತ್ತಿತರರು ಪಾಲ್ಗೊಂಡಿದ್ದರು.

ಉದಯರವಿ ರಸ್ತೆ ಹೆಸರು ಬದಲಿಸುವ ಪ್ರಸ್ತಾಪಕ್ಕೆ ಆಕ್ಷೇಪ



ಮೈಸೂರು,ಆ.25(ಎಂಟಿವೈ)–ಮೈಸೂರಿನ ಕುವೆಂಪುನಗರದ ಉದಯರವಿ ರಸ್ತೆಗೆ 40ಕ್ಕೂ ಹೆಚ್ಚು ವರ್ಷಗಳ ಇತಿಹಾಸವಿದ್ದು, ನಗರ ಪಾಲಿಕೆ ಸದಸ್ಯರು ನಿಖರ ಮಾಹಿತಿ ಅರಿಯದೇ ರಸ್ತೆ ಹೆಸರು ಬದಲಿಸುವ ಕೆಲಸಕ್ಕೆ ಮುಂದಾಗಿರುವುದು ಖಂಡನೀಯ ಎಂದು ವಿಮರ್ಶಕ, ಚಿಂತಕ ಪ್ರೊ.ಕೆ.ಎಸ್. ಭಗವಾನ್ ವಿಷಾದಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಉದಯರವಿ' ಎಂಬುದು ರಾಷ್ಟ್ರಕವಿ ಕುವೆಂಪು ಅವರ ನಿವಾಸದ ಹೆಸರಾಗಿದೆ. ಈ ರಸ್ತೆಯ ಮೊದಲ ನಿವಾಸಿಯಾದ ನಾನು, ಕಳೆದ 43 ವರ್ಷಗಳಿಂದ ವಾಸಿಸುತ್ತಿದ್ದೇನೆ. 'ಉದಯರವಿ' ಹೆಸರಿನ ಮೈಸೂರಿನ ಮನೆಯಲ್ಲಿಯೇ ಕುವೆಂಪು ಅವರು ಮಹಾಗ್ರಂಥಗಳು ಮತ್ತು ಕಾವ್ಯಗಳಾದ ಮಲೆಗಳಲ್ಲಿ ಮದುಮಗಳು, ಶ್ರೀರಾಮಾಯಣ ದರ್ಶನಂ, ಕಾನೂರು ಹೆಗ್ಗಡಿತಿ ಸೇರಿದಂತೆ ಇನ್ನಿತರ ಕೃತಿಗಳನ್ನು ರಚಿಸಿದ್ದಾರೆ. ಅಂತಹ ಹಿನ್ನೆಲೆ ಆ ಮನೆಗಿದೆ. ಅದರ ಮಹತ್ವವನ್ನು ಅರಿತು ಈ ಹಿಂದೆಯೇ ಉದಯರವಿ ರಸ್ತೆ ಎಂದು ಕರೆಯಲಾಗುತ್ತಿದೆ ಎಂದರು.

ಉದಯರವಿ ರಸ್ತೆಗೆ ಬೇರೊಂದು ಹೆಸರಿಡುವ ಸಂಬಂಧ ಪಾಲಿಕೆಯಲ್ಲಿ ಚರ್ಚೆ ನಡೆದಿರುವುದು ವಿಷಾದನೀಯ. ಕುವೆಂಪು ಅವರ ಹೆಸರಿನ ಕುರಿತು, ರಸ್ತೆ ಮತ್ತು ಉದ್ಯಾನವನಗಳಿಗೆ ನಾಮಕರಣ ಮಾಡಿರುವ ಕುರಿತು ಚರ್ಚಿಸಲಾಗಿದೆ. ಮೊದಲು ಅವರ ಕೊಡುಗೆಯನ್ನು ಅರ್ಥ ಮಾಡಿಕೊಳ್ಳಬೇಕು. ಅನಗತ್ಯವಾಗಿ ಹೆಸರು ಬದಲಿಸುವುದು ಬೇಡ. ಹಾಲಿ ಇರುವ ಹೆಸರು ಸೂಕ್ತವಾಗಿದೆ. ಪಾಲಿಕೆ ಸದಸ್ಯರು ಉದಯರವಿ ರಸ್ತೆ ಮಹತ್ವ ಅರಿತು, ಆ ಹೆಸರನ್ನೇ ಮುಂದುವರೆಸಲು ಒಮ್ಮತದ ನಿರ್ಣಯ ಕೈಗೊಳ್ಳಬೇಕು. ಕುವೆಂಪು ಅವರ ಕೊಡುಗೆಗೆ ಗೌರವ ಕೊಡಬೇಕು. 'ಉದಯರವಿ' ಎಂಬ ಹೆಸರು ಆಕ್ಷೇಪಾರ್ಹ ಹೆಸರಲ್ಲ ಎಂದು ಅಭಿಪ್ರಾಯಪಟ್ಟರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಮುಖಂಡ ಮೆಲ್ಲಹಳ್ಳಿ ಮಹದೇವಸ್ವಾಮಿ, ವಿಶ್ವಮಾನವ ವಿದ್ಯಾರ್ಥಿ ವೇದಿಕೆ ಅಧ್ಯಕ್ಷ ಎಂ.ಜೆ. ಸುರೇಶ್‌ಗೌಡ ಇದ್ದರು.

ರೈಲಿಗೆ ಸಿಲುಕಿ ವಿದ್ಯಾರ್ಥಿ ಆತ್ಮಹತ್ಯೆ

ಮೈಸೂರು, ಆ.25– ವಿದ್ಯಾರ್ಥಿಯೋರ್ವ ಡೆತ್‌ನೋಟ್ ಬರೆದಿಟ್ಟು ರೈಲಿಗೆ ಹಾರಿ ಆತ್ಮಹತ್ಯೆಗೆ ಶರಣಾದ ಘಟನೆ ಮೈಸೂರಿನಲ್ಲಿ ನಡೆದಿದೆ. ಮೈಸೂರಿನ ಶಕ್ತಿನಗರದ ನಿವಾಸಿ ಯತೀಶ್ ಕುಮಾರ್ ಅವರ ಪುತ್ರ ಹೃತ್ವಿಕ್(17), 'ನನ್ನ ಸಾವಿಗೆ ನಾನೇ ಕಾರಣ' ಎಂದು ಡೆತ್‌ನೋಟ್ ಬರೆದಿಟ್ಟು ಕಳೆದ ಸೋಮವಾರ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಖಾಸಗಿ ಕಾಲೇಜಿನಲ್ಲಿ ದ್ವಿತೀಯ ಪಿಯು ವ್ಯಾಸಂಗ ಮಾಡುತ್ತಿದ್ದ ಈತ ಬನ್ನಿಮಂಟಪ ಉನ್ನತಿನಗರದ ಬಳಿ ರೈಲಿಗೆ ಸಿಲುಕಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಈ ಸಂಬಂಧ ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಪಾರ್ಟ್‌ಟೈಮ್ ಜಾಬ್ ಆಮಿಷ ತೋರಿ ಇಂಜಿನಿಯರ್, ಶಿಕ್ಷಕರಿಗೆ ಲಕ್ಷಾಂತರ ರೂ. ವಂಚನೆ

ಕ್ರೈಂ ಬಾಕ್ಸ್

ಮೈಸೂರು, ಆ. 25– ಪಾರ್ಟ್‌ಟೈಮ್ ಜಾಬ್ ಹೆಸರಿನಲ್ಲಿ ಇಂಜಿನಿಯರ್ ಮತ್ತು ಶಿಕ್ಷಕನಿಗೆ ಆನ್‌ಲೈನ್ ಮೂಲಕ ಲಕ್ಷಾಂತರ ರೂ. ವಂಚಿಸಲಾಗಿದೆ. ಮೈಸೂರಿನ ಕೆ.ಸಿ. ಲೇಔಟ್ ನಿವಾಸಿಯಾಗಿರುವ ಇಂಜಿನಿಯರ್ ಕೆ.ಎಸ್. ಗೌತಮ್(35) ಅವರ ಮೊಬೈಲ್‌ಗೆ ಪಾರ್ಟ್‌ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದ್ದು, ಹೋಟೆಲ್ ರಿವ್ಯೂ ಮಾಡಿದರೆ ಕಮಿಷನ್ ನೀಡಲಾಗುವುದು ಎಂದು ನಂಬಿಸಲಾಗಿದೆ. ಆರಂಭದಲ್ಲಿ ಅವರಿಗೆ ಅಲ್ಪ ಪ್ರಮಾಣದ ಕಮಿಷನ್ ನೀಡಿದ್ದು, ನಂತರ ಹಣ ಹೂಡಿಕೆ ಮಾಡಿ ಹೋಟೆಲ್ ರಿವ್ಯೂ ಮಾಡಿದರೆ ಹೆಚ್ಚಿನ ಪ್ರಮಾಣದ ಕಮಿಷನ್ ದೊರೆಯುತ್ತದೆ ಎಂದು ಹೇಳಿದ್ದನ್ನು ನಂಬಿದ ಗೌತಮ್ 13,42,406 ರೂ. ವರ್ಗಾವಣೆ ಮಾಡಿ ವಂಚನೆಗೊಳಗಾಗಿದ್ದಾರೆ. ಮತ್ತೊಂದು ಪ್ರಕರಣದಲ್ಲಿ ಮೈಸೂರಿನ ಹೈಸ್ಕೂಲ್ ಟೀಚರ್ಸ್ ಲೇಔಟ್ ನಿವಾಸಿಯಾಗಿರುವ ಶಿಕ್ಷಕ ಗುರುಗಣೇಶ್ ಕೃಷ್ಣ ಹೆಗ್ಡೆ(25) ಎಂಬುವರಿಗೆ ಟೆಲಿಗ್ರಾಂ ಆಪ್ ಮೂಲಕ ಪಾರ್ಟ್‌ಟೈಮ್ ಜಾಬ್ ಬಗ್ಗೆ ಸಂದೇಶ ಬಂದಿದ್ದು, ಟಾಸ್ಕ್ ನಿರ್ವಹಿಸಿದರೆ ಕಮಿಷನ್ ನೀಡಲಾಗುವುದೆಂದು ನಂಬಿಸಿ 1.10 ಲಕ್ಷ ರೂ. ವರ್ಗಾವಣೆ ಮಾಡಿಸಿಕೊಂಡು ವಂಚಿಸಲಾಗಿದೆ. ಇವರೆಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿವೆ.

ಆಟೋ ಚಾಲಕ ಆತ್ಮಹತ್ಯೆ; ಪತ್ನಿ ಸೇರಿ ಮೂವರ ವಿರುದ್ಧ ಪ್ರಕರಣ ದಾಖಲು

ಪೊನ್ನಂಪೇಟೆ ಆ. 25– ಡೆತ್‌ನೋಟ್ ಬರೆದಿಟ್ಟು ಆಟೋ ಚಾಲಕ ಆತ್ಮಹತ್ಯೆ ಮಾಡಿಕೊಂಡ ಘಟನೆ ಪೊನ್ನಂಪೇಟೆ ತಾಲೂಕು ಬಾಳಾಜಿ ಗ್ರಾಮದಲ್ಲಿ ನಡೆದಿದ್ದು, ಈತನ ಮೊದಲ ಪತ್ನಿ ಸೇರಿದಂತೆ ಮೂವರ ವಿರುದ್ಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಮದ ಆಟೋ ಚಾಲಕ ವಿನಿಲ್ ಕುಮಾರ್(48) ಆತ್ಮಹತ್ಯೆಗೆ ಶರಣಾದವನಾಗಿದ್ದು, ಈತ 15 ವರ್ಷದ ಹಿಂದೆ ಸುಂಟಿಕೊಪ್ಪದ ಆಶಾ ಎಂಬಾಕೆಯನ್ನು ವಿವಾಹವಾಗಿದ್ದ. ಈ ದಂಪತಿಗೆ ಇಬ್ಬರು ಪುತ್ರರಿದ್ದಾರೆ. 2021ರಲ್ಲಿ ಇವರಿಬ್ಬರ ನಡುವೆ ಮನಸ್ತಾಪ ಉಂಟಾಗಿ ಆಶಾ ತನ್ನ ಪತಿಯ ವಿರುದ್ಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದರು. ಈ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಈ ನಡುವೆ ಆಗಸ್ಟ್ 24ರಂದು ಬೆಳಗ್ಗೆ ವಿನಿಲ್ ಕುಮಾರ್, "ನನ್ನ ಸಾವಿಗೆ ಮೊದಲನೇ ಪತ್ನಿ ಆಶಾ, ಆಕೆಯ ತಂಗಿ ನೇತ್ರಾ ಅಲಿಯಾಸ್ ಸೌಮ್ಯ ಮತ್ತು ಪಕ್ಕದ ಮನೆಯ ರಾಮಚಂದ್ರ ಅಲಿಯಾಸ್ ಚಂದ್ರ ಕಾರಣರಾಗಿದ್ದು, ಈ ಮೂವರು ಬೆದರಿಕೆ ಹಾಕಿರುವುದರಿಂದ ನಾನು ಸಾಯುತ್ತಿದ್ದೇನೆ" ಎಂದು ಡೆತ್ ನೋಟ್ ಬರೆದಿಟ್ಟು ನೇಣಿಗೆ ಶರಣಾಗಿದ್ದಾನೆ. ಈ ಸಂಬಂಧ ಗೋಣಿಕೊಪ್ಪ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಮೀನು ಮಾರಾಟ ಮಾಡುವುದಾಗಿ ಗೃಹಿಣಿಗೆ 10 ಲಕ್ಷ ರೂ. ವಂಚನೆ

ಮೈಸೂರು, ಆ. 25– ಜಮೀನು ಮಾರಾಟ ಮಾಡುವುದಾಗಿ ನಂಬಿಸಿ, ಗೃಹಿಣಿಗೆ 10 ಲಕ್ಷ ರೂ. ವಂಚಿಸಿರುವ ಬಗ್ಗೆ ವರದಿಯಾಗಿದೆ. ಮೈಸೂರಿನ ಶಾರದಾದೇವಿ ನಗರ ನಿವಾಸಿ ಎಸ್.ಎಸ್.ಲಕ್ಷ್ಮಿ(55) ವಂಚನೆಗೊಳಗಾದವರಾಗಿದ್ದು, ಇವರಿಗೆ ಪರಿಚಯವಿದ್ದ, ಈ ಹಿಂದೆ ಮೈಸೂರು ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದ ಅಶ್ವಿನಿ, ಪತಿ ಯತೀಶ್ ಮಧು ಮತ್ತು ಸಹೋದರ ಅಮಿತ್‌ರಾಜ್ ಎಂಬುವರು ಗುಂಡ್ಲುಪೇಟೆ ತಾಲೂಕು ಬೇಗೂರು ಹೋಬಳಿ ಸೋಮನಹಳ್ಳಿ ಗ್ರಾಮದ ಸರ್ವೆ ನಂಬರ್ 534/1ರಲ್ಲಿರುವ ತಮ್ಮ 6 ಎಕರೆ 38 ಗುಂಟೆ ಜಮೀನಿನ ಪೈಕಿ 2 ಎಕರೆ ಜಮೀನು ಮಾರಾಟ ಮಾಡುವುದಾಗಿ 14 ಲಕ್ಷ ರೂ. ಬೆಲೆ ಮಾತನಾಡಿ, 2021ರ ಮೇ 25ರಂದು 10 ಲಕ್ಷ ರೂ. ಮುಂಗಡ ಪಡೆದು ಕ್ರಯದ ಕರಾರು ಪತ್ರ ಮಾಡಿಕೊಟ್ಟಿದ್ದಾರೆ. ಆದರೆ, ಉಳಿಕೆ ಹಣ ಕೊಡಲು ಸಿದ್ಧರಿದ್ದರೂ ಈಗ ಜಮೀನನ್ನು ನೋಂದಣಿ ಮಾಡಿಕೊಡಲು ಸತಾಯಿಸುತ್ತಾ ಬಂದಿದ್ದು, ಇತ್ತೀಚೆಗೆ ಲಕ್ಷ್ಮಿ ಅವರು ಈ ಜಮೀನಿನ ಬಗ್ಗೆ ವಿಚಾರಿಸಿದಾಗ, ಅವರಿಗೆ ಕ್ರಯದ ಕರಾರು ಪತ್ರ ಮಾಡಿಕೊಟ್ಟ ಮರು ದಿನವೇ ಸದರಿ ಜಮೀನನ್ನು ಈ ಮೂವರೂ ಸೇರಿ ಬೆಂಗಳೂರಿನ ಕೆ.ಎಂ. ಲೀಲಾವತಿ ಎಂಬುವರಿಗೆ ಮಾರಾಟ ಮಾಡಿರುವುದು ಗೊತ್ತಾಗಿದೆ. ಈ ಸಂಬಂಧ ಸರಸ್ವತಿಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜಲದರ್ಶಿನಿ ಅತಿಥಿಗೃಹದಲ್ಲಿ ಶಾಸಕ ಕೆ.ಹರೀಶ್‌ಗೌಡರ ಕಚೇರಿ ಉದ್ಘಾಟನೆ





ಮೈಸೂರು, ಆ. 25(ಆರ್‌ಕೆ)– ಮೈಸೂರಿನ ಹುಣಸೂರು ರಸ್ತೆಯಲ್ಲಿರುವ ಜಲದರ್ಶಿನಿ ಅತಿಥಿ ಗೃಹದ ಆವರಣದಲ್ಲಿನ ಹೊಸ ಕಟ್ಟಡದ ಮೊದಲ ಮಹಡಿಯಲ್ಲಿ ಚಾಮರಾಜ ವಿಧಾನಸಭಾ ಕ್ಷೇತ್ರದ ಶಾಸಕ ಕೆ. ಹರೀಶ್‌ಗೌಡ ಅವರ ಅಧಿಕೃತ ಕಚೇರಿ ಇಂದು ಆರಂಭವಾಯಿತು.

ಶಾಸಕ ತನ್ವೀರ್ ಸೇಠ್ ಕಚೇರಿ ಉದ್ಘಾಟಿಸಿ ಕೆ.ಹರೀಶ್‌ಗೌಡರಿಗೆ ಶುಭ ಕೋರಿದರು. ಶ್ರೀಮತಿಯೊಂದಿಗೆ ವಿಶೇಷ ಪೂಜೆ ಸಲ್ಲಿಸಿದ ಹರೀಶ್‌ಗೌಡರು, ಕಾರ್ಯಕ್ರಮಕ್ಕೆ ಆಗಮಿಸಿದ್ದ ಜನಪ್ರತಿನಿಧಿಗಳು, ಸ್ನೇಹಿತರು, ಹಿತೈಷಿಗಳಿಗೆ ಸಿಹಿ ವಿತರಿಸಿದರು. ನಂತರ ಮಾತನಾಡಿದ ಅವರು, ಚಾಮರಾಜ ಕ್ಷೇತ್ರದ ಜನರ ಕುಂದು–ಕೊರತೆಗಳನ್ನು ಆಲಿಸಿ, ಇತ್ಯರ್ಥಗೊಳಿಸಲು ತಾವು ಸದಾ ಸಿದ್ಧನಾಗಿದ್ದು, ಪ್ರತಿಯೊಬ್ಬರೂ ತಮ್ಮನ್ನು ಖುದ್ದಾಗಿ ಭೇಟಿ ಮಾಡಲು ಸಾಧ್ಯವಾಗದಿದ್ದರೆ, ಕೆಲಸದ ಅವಧಿಯಲ್ಲಿ ಕಚೇರಿಗೆ ಬಂದು ಅರ್ಜಿ ಸಲ್ಲಿಸಿದರೆ ಸಾಕು, ಅವರ ಸಮಸ್ಯೆ ನೀಗುತ್ತೇನೆ ಎಂದರು. ಕಾಂಗ್ರೆಸ್ ನಗರಾಧ್ಯಕ್ಷ ಆರ್. ಮೂರ್ತಿ, ಜಿಲ್ಲಾಧ್ಯಕ್ಷ ಡಾ. ಬಿ.ಜೆ. ವಿಜಯಕುಮಾರ್, ವಕ್ತಾರ ಎಂ. ಲಕ್ಷ್ಮಣ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್, ಮಾಜಿ ಮೇಯರ್‌ಗಳಾದ ನಾರಾಯಣ, ಮೋದಾಮಣಿ, ಪುಷ್ಪಲತಾ ಚಿಕ್ಕಣ್ಣ, ಪುಷ್ಪಲತಾ ಜಗನ್ನಾಥ್, ಮುಖಂಡರಾದ ಬಿ.ಎಂ. ರಾಮು, ಎಂ.ಶಿವಣ್ಣ ಶ್ರೀನಿವಾಸ ಮೂರ್ತಿ, ಬಾಲರಾಜ್, ಎಂ.ಆರ್. ರವಿಕುಮಾರ್, ಎಸ್.ಆರ್.ರವಿಕುಮಾರ್, ಎಂ.ಜಿ.ಕೊಪ್ಪಲು ರವಿ, ಕಾರ್ಪೊರೇಟರ್ ಗಳಾದ ಗೋಪಿ, ಎಂ.ಡಿ. ನಾಗರಾಜ್ ಸೇರಿದಂತೆ ಹಲವರು ಕಚೇರಿ ಉದ್ಘಾಟನೆ ವೇಳೆ ಉಪಸ್ಥಿತರಿದ್ದು, ಶಾಸಕರಿಗೆ ಶುಭ ಕೋರಿದರು.

ಸಾಮಾಜಿಕ ನ್ಯಾಯ ದೊರಕಿಸಿಕೊಟ್ಟವರು ಶರಣರು



ಮೈಸೂರು, ಆ.25(ಎಸ್‌ಪಿಎನ್)– ಪ್ರಾಮಾಣಿಕ ದುಡಿಮೆಯಿಂದ ಬಂದ ಹಣವನ್ನು ಕೂಡಿಟ್ಟುಕೊಳ್ಳದೇ ತಮ್ಮ ಸುತ್ತಮುತ್ತಲಿನವರಿಗೂ ಹಂಚಿ ತಿನ್ನುವ ಪದ್ಧತಿ ಜಾರಿಗೆ ಬಂದಿದ್ದು ಶರಣರ ಕಾಲದಲ್ಲಿ. ಒಟ್ಟಿನಲ್ಲಿ ತಮ್ಮ ಕಾಯಕ ತತ್ವದ ಮೂಲಕ ಸಾಮಾಜಿಕ ನ್ಯಾಯ ದೊರಕಿಸಿದವರು ಶರಣರು ಎಂದು ಸಹಾಯಕ ಪ್ರಾಧ್ಯಾಪಕ ವಿಜಯಕುಮಾರ್ ಹನೂರ್ ಅಭಿಪ್ರಾಯಪಟ್ಟರು.

ಮೈಸೂರು ಚಾಮರಾಜಪುರಂನ ಆರ್‌ಟಿಓ ಕಚೇರಿ ಪಕ್ಕದಲ್ಲಿರುವ ಜೆಎಸ್‌ಎಸ್ ವಿದ್ಯಾರ್ಥಿ ವಸತಿ ನಿಲಯದಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ವತಿಯಿಂದ ಆಯೋಜಿಸಿದ್ದ ಮನೆಮನೆಗೆ ಶ್ರಾವಣ ಮಾಸದ ಶರಣ ಸಂದೇಶ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬರು ದುಡಿದು ತಿನ್ನಬೇಕು. ಆದರೆ, ಬಡಿದು ತಿನ್ನಬಾರದು. ಕಾಯಕದ ಫಲ ತನಗೆ, ನನಗೆ ಮಾತ್ರ ಅಲ್ಲದೆ, ಇಲ್ಲದವರೆಗೂ ಹಂಚುವ ಶುದ್ಧ ಮನಸು ಬೆಳೆಸಿಕೊಳ್ಳಬೇಕು. ಇಂದಿನ ಸಮಾಜದಲ್ಲಿ ಎಲ್ಲವೂ ತನಗೇ ಬೇಕು ಎಂಬ ಸ್ವಾರ್ಥ ತುಂಬಿರುವುದು ದುರಂತ ಎಂದು ಹೇಳಿದರು. ಕಾಗೆಯೊಂದು ಅನ್ನದ ಅಗುಳು ಕಂಡರೆ ತನ್ನ ಬಳಗವನ್ನು ಕೂಗಿ ಕರೆಯದೇ ಎಂಬ ಬಸವಣ್ಣನವರ ವಚನವನ್ನು ವಿವರಿಸಿದ ಅವರು, ನಿಸರ್ಗ ತಾನೇ ಕೊಡುವ ಗುಣ ಹೊಂದಿದೆ. ಇದನ್ನು ಸಮಾಜದಲ್ಲಿ ನಾವು ಆಚರಿಸುವುದು ಅಗತ್ಯ ಎಂದು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ನಗರ ಘಟಕದ ಅಧ್ಯಕ್ಷ ಮ.ಗು. ಸದಾನಂದಯ್ಯ ಮಾತನಾಡಿ, ಸಾಹಿತಿಗಳು, ವಿದ್ವಾಂಸರ ಅಧ್ಯಯನಗಳು ಕೇವಲ ಸಾಹಿತಿಯ ಇತಿಮಿತಿಗೆ ಸೀಮಿತವಾಗದೆ ಈ ಸಮಾಜಕ್ಕೂ ಆ ಜ್ಞಾನದಾಸೋಹ ತಲುಪಿಸುವ ಕೆಲಸವಾಗಬೇಕು ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಉಪ ಕಾರ್ಯದರ್ಶಿ ಕುಮಾರಸ್ವಾಮಿ ಶಿವಮೂರ್ತಿ, ನಟರಾಜ್, ಟಿ.ಎಸ್. ಕುಮಾರಸ್ವಾಮಿ, ಪ್ರೊ.ಮಾದೇವಸ್ವಾಮಿ ಡಾ.ಮುದ್ದು ಮಲ್ಲೇಶ್, ಚನ್ನಬಸಪ್ಪ, ಲೋಕೇಶ್, ಶಿವಕುಮಾರ್ ಮುಂತಾದವರು ಭಾಗವಹಿಸಿದ್ದರು.

ತಂದೆ–ತಾಯಿಗಳಿಗೆ ಕೊಟ್ಟ ಮಾತನ್ನು ಈಡೇರಿಸುವ ಹೊಣೆ ಮಕ್ಕಳದ್ದು

ಮೈಸೂರು, ಆ.25 (ಎಸ್‌ಪಿಎನ್)– ತಂದೆ–ತಾಯಿಗಳಿಗೆ ಕೊಟ್ಟ ಮಾತನ್ನು ಈಡೇರಿಸುವ ಹೊಣೆ ಮಕ್ಕಳದ್ದು. ಇದಕ್ಕೆ ಶ್ರೀರಾಮಪ್ರಭು ಪಟ್ಟಾಭಿಷೇಕ ಸಂದರ್ಭದಲ್ಲಿ ಯಾವ ರೀತಿ ವರ್ತಿಸುತ್ತಾನೆ ಎಂಬುದೇ ಸಾಕ್ಷಿ ಎಂದು ಉಡುಪಿ ಪೇಜಾವರ ಅಧೋಕ್ಷಜ ತೀರ್ಥ ಪೀಠದ ಶ್ರೀ ವಿಶ್ವ ಪ್ರಸನ್ನ ತೀರ್ಥ ಶ್ರೀಪಾದಂಗಳವರು ಮನೋಜ್ಞವಾಗಿ ವಿವರಿಸಿದರು.



ಮೈಸೂರು ಸಾಹುಕಾರ್ ಚನ್ನಯ್ಯ ರಸ್ತೆಯ ಟಿ.ಕೆ.ಬಡಾವಣೆಯಲ್ಲಿರುವ ಶ್ರೀ ಕೃಷ್ಣಧಾಮದಲ್ಲಿ ಚಾತುರ್ಮಾಸ್ಯ ಸಮಿತಿಯಿಂದ ಉಡುಪಿಯ ಪೇಜಾವರ ಮಠದ ಪೀಠಾಧ್ಯಕ್ಷರಾದ ಶ್ರೀ ವಿಶ್ವ ಪ್ರಸನ್ನ ತೀರ್ಥ ಸ್ವಾಮೀಜಿ ಅವರ 36ನೇ ಚಾತುರ್ಮಾಸ್ಯ ವ್ರತ ಸಂಕಲ್ಪ ಅಂಗವಾಗಿ ನಡೆದ 'ಶ್ರೀಮದ್ರಾಮಾಯಣ' ಪ್ರವಚನ ಮಾಲೆಯಲ್ಲಿ ಶ್ರೀಗಳು ತಿಳಿಸಿದರು.

ದಶರಥ ಹೇಳಿದಂತೆ ಶ್ರೀ ರಾಮ ತನ್ನ ತಮ್ಮನಾದ ಭರತನಿಗೆ ಪಟ್ಟಕಟ್ಟಿ, ಅಯೋಧ್ಯೆಯನ್ನು ತೊರೆದು 14 ವರ್ಷ ವನವಾಸಕ್ಕೆ ತೆರಳಿದ ಪ್ರಸಂಗವನ್ನು ಭಕ್ತ ಪ್ರಧಾನವಾಗಿ ವಿವರಿಸಿದರಲ್ಲದೆ, ಇಂದಿನ ಯುವ ಪೀಳಿಗೆ ಶ್ರೀರಾಮನ ಆದರ್ಶವನ್ನು ಮೈಗೂಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಸಮಯ ಪರಿಪಾಲನೆ ಮುಖ್ಯ: ಇದಕ್ಕೂ ಮುನ್ನ ವಿದ್ವಾನ್ ವೆಂಕಟೇಶ್ ನರಸಿಂಹ ಆಚಾರ್ಯ ಅವರು, ಭಕ್ತ ಪ್ರಹ್ಲಾದ ಕುರಿತು ಪ್ರವಚನ ನೀಡುತ್ತ, ಪ್ರತಿಯೊಬ್ಬರ ಜೀವನದಲ್ಲೂ ಸಮಯ ಪರಿಪಾಲನೆ ಅತ್ಯವಶ್ಯಕ. ಇಲ್ಲದಿದ್ದರೆ ಜೀವನದ ಕೆಲಸ ಕಾರ್ಯಗಳಲ್ಲಿ ಏರಿಳಿತವಾಗುತ್ತದೆ ಎಂದರು. ಕಾಮಾಕ್ಷಿ ಹಂಪಿ ಹೋಲಿ ಅವರಿಂದ ಭರತನಾಟ್ಯ ಹಾಗೂ ಡಾ.ತುಳಸಿ ರಾಮಚಂದ್ರ ಇವರ ಶಿಷ್ಯವೃಂದದಿಂದ ನರ್ತನಾಭಿವಾದನ ಕಾರ್ಯ ನಡೆಸಿಕೊಟ್ಟರು.

ಭೇರ್ಯ ಬಳಿ ಮರಿಗಳ ಸಹಾಯದಿಂದ ಚಿರತೆ ಸೆರೆ

ಗ್ರಾಮಸ್ಥರಿಗೆ ಭಾರೀ ಉಪಟಳ ನೀಡುತ್ತಿದ್ದ ಚಿರತೆ, ಕಬ್ಬಿನ ಗದ್ದೆಯಲ್ಲಿ ಬಿಟ್ಟು ಹೋಗಿದ್ದ ಮರಿಗಳನ್ನು ಬೋನಿನಲ್ಲಿ ಬಿಟ್ಟು ಚಿರತೆ ಸೆರೆ ಹಿಡಿದ ಅರಣ್ಯ ಇಲಾಖೆ

ಭೇರ್ಯ,ಆ.25– ಗ್ರಾಮಸ್ಥರಿಗೆ ನಿತ್ಯ ಉಪಟಳ ನೀಡುತ್ತಿದ್ದ ಚಿರತೆಯನ್ನು ಅದು ಬಿಟ್ಟು ಹೋಗಿದ್ದ ಅದರ ಮರಿಗಳ ಸಹಾಯದಿಂದಲೇ ಬೋನಿಗೆ ಬೀಳಿಸುವಲ್ಲಿ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಅಧಿಕಾರಿಗಳು ಯಶಸ್ವಿಯಾಗಿದ್ದಾರೆ.

ಚಿರತೆ ಸೆರೆ ಹಿಡಿಯಲು ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಎಂ.ಆರ್. ರಶ್ಮಿ ಮತ್ತು ಉಪವಲಯ ಅರಣ್ಯಾಧಿಕಾರಿ ಕುಮಾರ್ ತಂಡ ಕಳೆದ ರಾತ್ರಿಯಿಂದಲೇ ಕಾರ್ಯಾಚರಣೆ ಪ್ರಾರಂಭಿಸಿತ್ತು. ಕಬ್ಬಿನ ಗದ್ದೆಯಲ್ಲಿ ಬಿಟ್ಟು ಹೋಗಿದ್ದ ಅದರ ಎರಡು ಮರಿಗಳ ಮೂಲಕ ಕಾಲರ್ ಕ್ಯಾಮರಾ ಸ್ಥಳದಲ್ಲಿ ಇಟ್ಟು ಚಿರತೆಯನ್ನು ಬೋನಿಗೆ ಬೀಳುವಂತೆ ಮಾಡಿದ್ದಾರೆ.

ಕಳೆದ ಒಂದು ತಿಂಗಳಿಂದ ಮಠದ ಕಾವಲ್ ರಕ್ಷಿತ ಅರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಚಿರತೆ ಉಪಟಳ ಹೆಚ್ಚಾಗಿದ್ದು, ಕಾವಲ್



ಹೊಸೂರು, ಬಟಿಗನಹಳ್ಳಿ, ಭೇರ್ಯ, ಗೇರದಡ, ಮುಂಜನಹಳ್ಳಿ, ಹರಂಬಳ್ಳಿ ಹೊಸ ಅಗ್ರಹಾರ, ದೊಡ್ಡವಡ್ಡರಗುಡಿ ಗ್ರಾಮ ಸೇರಿದಂತೆ ಅನೇಕ ಕಡೆಗಳಲ್ಲಿ ಚಿರತೆ ಮೇಕೆ, ಕುರಿ, ಹಸುಗಳನ್ನು ತಿಂದು ಹಾಕಿತ್ತು. ಈ ಬಗ್ಗೆ ಸ್ಥಳೀಯ ಗ್ರಾಮಸ್ಥರು ಅರಣ್ಯ ಇಲಾಖೆಗೆ ಸಾಕಷ್ಟು ಬಾರಿ ದೂರು ನೀಡಿ ಚಿರತೆ ಸೆರೆ ಹಿಡಿಯುವಂತೆ ಆಗ್ರಹಿಸಿದ್ದರು.

ಕಳೆದ ಮೂರ್‍ನಾಲ್ಕು ದಿನಗಳಿಂದ ಚಿರತೆ ಕಾವಲ್ ಹೊಸೂರು, ಬಟಿಗನಹಳ್ಳಿ, ದೊಡ್ಡವಡ್ಡರಗುಡಿ ಗ್ರಾಮದಲ್ಲಿ ಕುರಿ, ಹಸು ತಿಂದಿದ್ದು ಪತ್ತೆಯಾದ ಹಿನ್ನೆಲೆಯಲ್ಲಿ ಇದರ ಜಾಡು ಹಿಡಿದು ಹೊರಟ ಅರಣ್ಯಾಧಿಕಾರಿಗಳಿಗೆ ದೊಡ್ಡವಡ್ಡರಗುಡಿ ಗ್ರಾಮದ

> ಚಿರತೆ ಹಾವಳಿ ಈ ಭಾಗದಲ್ಲಿ ಹೆಚ್ಚಾಗಿದ್ದು ನಾಯಿ, ಹಸು, ಕುರಿಗಳನ್ನು ತಿಂದು ಹಾಕಿತ್ತು. ಈ ಬಗ್ಗೆ ಅರಣ್ಯಾಧಿಕಾರಿಗಳಿಗೆ ಚಿರತೆ ಸೆರೆ ಹಿಡಿಯಲು ಮನವಿ ಮಾಡಲಾಗಿತ್ತು. ಗ್ರಾಮದ ಡಿ.ಎಸ್.ಕುಮಾರ್ ಅವರ ಕಬ್ಬಿನ ಗದ್ದೆಯಲ್ಲಿ ಎರಡು ಚಿರತೆ ಮರಿಗಳು ಇದ್ದವು, ಈ ಬಗ್ಗೆ ಅರಣ್ಯಾಧಿಕಾರಿ ಅವರಿಗೆ ಹೇಳಲಾಗಿ, ಚಿರತೆ ಸೆರೆ ಹಿಡಿಯಲು ಕಾರ್ಯಾಚರಣೆಗೆ ಅನುಕೂಲವಾಯಿತು. ಗ್ರಾಮಸ್ಥರು, ಅಕ್ಕಪಕ್ಕದ ಗ್ರಾಮದವರು ನಿಟ್ಟುಸಿರು ಬಿಟ್ಟಿದ್ದಾರೆ.
>
> **–ಡಿ.ಎಸ್.ಯೋಗೇಶ್, ಗ್ರಾ.ಪಂ.ಸದಸ್ಯ, ದೊಡ್ಡವಡ್ಡರಗುಡಿ ಗ್ರಾಮ.**

ರೈತರಾದ ಡಿ.ಎಸ್.ಕುಮಾರ್ ಎಂಬುವರ ಕಬ್ಬಿನ ಗದ್ದೆಯಲ್ಲಿ ಚಿರತೆಯ ಎರಡು ಮರಿಗಳು ಕಾಣಿಸಿ ಕೊಂಡಿತು.

ಚಿರತೆ ಸೆರೆಗೆ ಅರಣ್ಯ ಇಲಾಖೆಯ ಮುಖ್ಯಸ್ಥರು ಹಾಗೂ ಮೇಲಾಧಿಕಾರಿಗಳ ಜೊತೆ ವಲಯ ಅರಣ್ಯಾಧಿಕಾರಿ ಎಂ.ಆರ್.ರಶ್ಮಿ ತಂಡ ಚರ್ಚಿಸಿ ಆ ಸ್ಥಳದಲ್ಲಿ ಬೋನ್ ಇಟ್ಟು ಒಳಗೆ ಚಿರತೆ ಮರಿಗಳನ್ನು ಬಿಡಲಾಯಿತು. ಚಿರತೆಯ ಚಲನವಲನಗಳ ಪತ್ತೆಗಾಗಿ ಕಾಲರ್ ಕ್ಯಾಮರ ಕೂಡ ಅಲ್ಲಿ ಇಡಲಾಯಿತು.

ಕಳೆದ ರಾತ್ರಿ ಚಿರತೆ ಮರಿಗಳನ್ನು ಹುಡುಕಿಕೊಂಡು ಬಂದ ಚಿರತೆ ಬೋನಿಗೆ ಬಿದ್ದಿದ್ದು, ಕಾಲರ್ ಕ್ಯಾಮರದಲ್ಲಿ ಸೆರೆಯಾಗಿದೆ. ಬೆಳ್ಳಂಬೆಳಗ್ಗೆ ಸಿಬ್ಬಂದಿ ಹಾಗೂ ಚಿರತೆ ಸೆರೆ ಹಿಡಿಯುವ ತಂಡವನ್ನು ಕರೆಸಿ ಬೋನಿಗೆ ಬಿದ್ದ ಚಿರತೆಯನ್ನು ಮೇಲಾಧಿಕಾರಿಗಳ ಆದೇಶದ ಮೇರೆಗೆ ನಾಗರಹೊಳೆ ಅಭಯಾರಣ್ಯಕ್ಕೆ ಬಿಡಲಾಯಿತು ಎಂದು ಕೆ.ಆರ್.ನಗರ ಅರಣ್ಯ ಇಲಾಖೆಯ ವಲಯ ಅರಣ್ಯಾಧಿಕಾರಿ ಎಂ.ಆರ್.ರಶ್ಮಿ ತಿಳಿಸಿದರು.

ಕೆಎಸ್ಆರ್‌ಟಿಸಿ ಬಸ್ ಚಾಲಕ, ನಿರ್ವಾಹಕ ಅಮಾನತು

ಹೆಚ್.ಡಿ.ಕೋಟೆ, ಆ.25– ಕಂಠಪೂರ್ತಿ ಕುಡಿದು ಪ್ರಯಾಣಿಕರಲ್ಲಿ ಆತಂಕ ಉಂಟು





ಮಾಡಿದ್ದ ಕೆಎಸ್ಆರ್‌ಟಿಸಿ ಬಸ್ ಚಾಲಕ ಗೋಪಾಲಕೃಷ್ಣ ಮತ್ತು ನಿರ್ವಾಹಕ ಪ್ರಕಾಶ್ ಅವರನ್ನು ಕೆಎಸ್ಆರ್‌ಟಿಸಿ ಮೇಲಾಧಿಕಾರಿಗಳು ಅಮಾನತುಗೊಳಿಸಿದ್ದಾರೆ ಎಂದು ಹೆಚ್.ಡಿ.ಕೋಟೆ ಘಟಕದ ವ್ಯವಸ್ಥಾಪಕ ತ್ಯಾಗರಾಜ್ ತಿಳಿಸಿದ್ದಾರೆ.

ಹೆಚ್.ಡಿ.ಕೋಟೆಯಿಂದ ಮೈಸೂರಿಗೆ ತೆರಳುವ ಮುನ್ನ ಚಾಲಕ ಗೋಪಾಲಕೃಷ್ಣ ಹಾಗೂ ಕಂಡಕ್ಟರ್ ಪ್ರಕಾಶ್, ಇಬ್ಬರು, ಊಟಕ್ಕೆ ಎಂದು ತೆರಳಿ, ಇಬ್ಬರು ಮದ್ಯ ಸೇವಿಸಿ, ಬಸ್ಸನ್ನು ಅತಿ ವೇಗವಾಗಿ ಓಡಿಸಿ ಆತಂಕ ಉಂಟು ಮಾಡಿದ್ದರು. ಆಗ ಚಾಲಕ ಹಾಗೂ ಕಂಡಕ್ಟರ್ ಇಬ್ಬರನ್ನು ಸಾರ್ವಜನಿಕರು ಠಾಣೆಗೆ ಕರೆತಂದು ದೂರು ನೀಡಿದ್ದರು. ಈ ಸಂಬಂಧ ಚಾಲಕ ಗೋಪಾಲಕೃಷ್ಣ ಮತ್ತು ನಿರ್ವಾಹಕ ಪ್ರಕಾಶ್ ಇಬ್ಬರನ್ನು ಅಮಾನತು ಗೊಳಿಸಲಾಗಿದೆ ತ್ಯಾಗರಾಜ್ ತಿಳಿಸಿದ್ದಾರೆ.



ಹೆಚ್.ಡಿ. ಕೋಟೆ ಮತ್ತು ಸರಗೂರು ಛಾಯಾಗ್ರಹಕರ ಸಂಘದ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಹೊಮ್ಮರಗಳ್ಳಿ ವಾದಿರಾಜ್, ಉಪಾಧ್ಯಕ್ಷರಾಗಿ ಮಠದ ಕಟ್ಟೆ ನಿಂಗರಾಜು, ವೆಂಕಟೇಶ್, ಗೌರವಾಧ್ಯಕ್ಷರಾಗಿ ನೂರಲಕುಪ್ಪೆ ಶಿವಣ್ಣ, ಕಾರ್ಯಾಧ್ಯಕ್ಷರಾಗಿ ರವಿಕುಮಾರ್ ಆರಾಧ್ಯ, ಖಜಾಂಚಿ ಹೆಗ್ಗಡಾಪುರ ಕುಮಾರ್, ಕಾರ್ಯದರ್ಶಿಯಾಗಿ ಮಟಕೆರೆ ರಮೇಶ್, ಸಹ ಕಾರ್ಯದರ್ಶಿಯಾಗಿ ಅಂತರಸಂತೆ ಸೋಮೇಶ್, ಸಂಚಾಲಕರಾಗಿ ನಾಗುಸಾಗರ್, ಸಲಹೆಗಾರರಾಗಿ ಲಕ್ಷ್ಮಿ ಸ್ಟುಡಿಯೋ ಸ್ವಾಮಿ, ವನಸಿರಿ ಶಂಕರ್ ಮತ್ತು ನಿರ್ದೇಶಕರುಗಳಾಗಿ ಮೋಹನಕುಮಾರ್, ಸಿ.ಎಸ್.ರವಿ, ಸಮೀರ್, ನಂಜುಂಡ, ಹರೀಶ್, ಗುರುಮೂರ್ತಿ, ದೇಖಾನವೀನ, ರೇವಣ್ಣ, ಸುರೇಶ್ ಆಯ್ಕೆಯಾದರು.

ಚಿಕ್ಕದೇವಮ್ಮನ ಬೆಟ್ಟದಲ್ಲಿ ವರಮಹಾಲಕ್ಷ್ಮಿ ಪೂಜೆ

ಸರ್ಕಾರದ ಆದೇಶದಂತೆ ಮಹಿಳೆಯರಿಗೆ ಬಳೆ, ಕುಂಕುಮ, ಅರಿಶಿನ, ಪ್ರಸಾದ ವಿತರಣೆ



ಸರಗೂರು, ಆ.25– ತಾಲೂಕಿನ ಅಧಿದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ ಶುಕ್ರವಾರ ತಾಯಿಗೆ ವರಮಹಾಲಕ್ಷ್ಮಿ ವ್ರತದ ವಿಶೇಷ ಪೂಜೆ ಮತ್ತು ರಾಜೋಪಚಾರ ಪೂಜೆ ವಿಜೃಂಭಣೆಯಿಂದ ನಡೆಯಿತು. ಸುಮಂಗಲಿಯರು ತಾಯಿದರ್ಶನ ಪಡೆದು ಹಸಿರು ಬಳೆ, ಕುಂಕುಮ, ಅರಿಶಿನ ಪಡೆದು ಸಂತಸ ಪಟ್ಟರು.

ಬೆಟ್ಟದ ದೇವಿಯನ್ನು ಹೂವಿನಿಂದ ಅಲಂಕಾರಗೊಳಿಸಿ, ಬೆಳಗ್ಗೆ 6 ಗಂಟೆಯಿಂದಲೇ ಪೂಜೆ ನೆರವೇರಿಸಲಾಯಿತು. ಮೊದಲಿಗೆ ಅಭಿಷೇಕದೊಂದಿಗೆ ಪೂಜೆ ಆರಂಭವಾಯಿತು. ರುದ್ರಾಭಿಷೇಕ, ಮಹಾಮಂಗಳಾರತಿ ಸೇರಿದಂತೆ ನಾನಾ ಪೂಜಾ ಕೈಂಕರ್ಯಗಳು ಜರುಗಿದವು. ನಂತರ ಭಕ್ತರ ದರ್ಶನಕ್ಕೆ ಅವಕಾಶ ಮಾಡಿಕೊಡಲಾಯಿತು. ಸರತಿ ಸಾಲಿನಲ್ಲಿ ನಿಂತು ದರ್ಶನ ಪಡೆದ ಭಕ್ತರು ದೇವಿಯ ಕೃಪೆಗೆ ಪಾತ್ರರಾದರು.

ಕೆಲವರು ವಿಶೇಷ ಪೂಜೆ ಸಲ್ಲಿಸಿ, ಹರಕೆ ತೀರಿಸಿ ಪುನೀತರಾದರು. ನಂತರ ಬೆಟ್ಟದ ಪಾರುಪತ್ತೆದಾರ್ ಶಾಂತಿಪುರ ಮಹದೇವಸ್ವಾಮಿ, ಅರ್ಚಕರಾದ ಸಂತೋಷ್, ಚಿಕ್ಕದೇವಣ್ಣ, ಪ್ರಸನ್ನಕುಮಾರ್ ಹಾಗೂ ಸಿಬ್ಬಂದಿ ಹಾಜರಿದ್ದು ಪೂಜಾ ಕೈಕಾರ್ಯ ನೆರವೇರಿಸಿದರು. ಸರ್ಕಾರದ ಆದೇಶದಂತೆ ಕಾರ್ಯನಿರ್ವಾಹಕ ಅಧಿಕಾರಿ ರಘು ನಿರ್ದೇಶನದಂತೆ ಶ್ರೀಕ್ಷೇತ್ರಕ್ಕೆ ಬಂದ ಸುಮಂಗಲಿಯರಿಗೆ ಹಸಿರು ಬಳೆ, ಕುಂಕುಮ, ಅರಿಶಿನ ವಿತರಣೆ ಮಾಡಿ ತೀರ್ಥಪ್ರಸಾದ ನೀಡಲಾಯಿತು, ಚಿಕ್ಕದೇವಮ್ಮನವರ ಬೆಟ್ಟಕ್ಕೆ ಭಕ್ತರು ಹೋಗಿ ಬರಲು ಬಸ್ ಸೌಲಭ್ಯ ಇಲ್ಲದರಿಂದ ಖಾಸಗಿ ವಾಹನಗಳಲ್ಲಿ ಭಕ್ತರು ಬೆಟ್ಟಕ್ಕೆ ಬಂದು ದೇವಿಯ ದರ್ಶನ ಪಡೆಯುತ್ತಿದ್ದರು. ಇದಲ್ಲದೆ ಸರಗೂರು ಪಟ್ಟಣದ ಚೌಡೇಶ್ವರಿ ದೇವಸ್ಥಾನ, ಚಿಕ್ಕದೇವಮ್ಮನವರ ದೇವಸ್ಥಾನ, ಸಂತೆ ಮಾಸ್ತಮ್ಮನ ದೇವಸ್ಥಾನ, ಕಾಳಮ್ಮತಾಯಿ ದೇವಸ್ಥಾನಗಳಲ್ಲಿ ವರಹಮಹಾಲಕ್ಷ್ಮಿ ವ್ರತದ ವಿಶೇಷ ಪೂಜೆ ನೆರವೇರಿತು.

ಕೆಎಸ್ಐಸಿ ವ್ಯವಸ್ಥಾಪಕ ನಿರ್ದೇಶಕರ ಭೇಟಿಗೆ ನಿರಾಕರಿಸಿದ್ದನ್ನು ವಿರೋಧಿಸಿ ಪ್ರತಿಭಟನೆ



ತಿ.ನರಸೀಪುರ, ಆ.25– ಕೆಎಸ್ಐಸಿ ಟಿ.ನರಸೀಪುರ ಘಟಕದ ಹೊರಗುತ್ತಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರಿಗೆ ದೂರು ನೀಡಲು ಅವಕಾಶ ನೀಡದ ಕ್ರಮವನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿ (ಬಣ ರಹಿತ) ಪ್ರತಿಭಟನೆ ನಡೆಸಿತು.

ಸಂಸ್ಥೆಯಲ್ಲಿ ಕೆಲಸ ಹಂಚುವಿಕೆಯಲ್ಲಿ ಪಕ್ಷಪಾತ ದೋರಣೆ, ಕಾರ್ಮಿಕರ ಹಕ್ಕುಗಳ ಉಲ್ಲಂಘನೆ, ಕ್ಷುಲ್ಲಕ ಕಾರಣಕ್ಕೆ ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿರುವುದು, ರಾಷ್ಟ್ರನಾಯಕ ಡಾ. ಬಿ.ಆರ್. ಅಂಬೇಡ್ಕರ್ ಜಯಂತಿ ನಿರ್ಲಕ್ಷ ಕುರಿತು ಕಾರ್ಖಾನೆಗೆ ಭೇಟಿ ನೀಡಿದ್ದ ವ್ಯವಸ್ಥಾಪಕ ನಿರ್ದೇಶಕರಿಗೆ ಮನವಿ ಸಲ್ಲಿಸಲು ಸಮಿತಿ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ ಅವರ ನೇತೃತ್ವದಲ್ಲಿ ಮುಂದಾಯಿತು. ಈ ವೇಳೆ ಒಳಗೆ ಬಿಡಲು ನಿರಾಕರಿಸಿದ್ದನ್ನು ವಿರೋಧಿಸಿ ಪ್ರತಿಭಟಿಸಿದರು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು ಮಧ್ಯಸ್ಥಿಕೆ ವಹಿಸಿ ವ್ಯವಸ್ಥಾಪಕ ನಿರ್ದೇಶಕನ್ನು ಭೇಟಿ ಮಾಡಿಸಿ ಸಮಸ್ಯೆಯನ್ನು ಮನವರಿಕೆ ಮಾಡಿಕೊಡುವ ವ್ಯವಸ್ಥೆ ಮಾಡಿದರು. ವ್ಯವಸ್ಥಾಪಕ ನಿರ್ದೇಶಕರು ಎಲ್ಲಾ ಬೇಡಿಕೆಗಳು ಕಾನೂನು ಬದ್ಧವಾಗಿವೆ. ಖಂಡಿತ ಈ ಬಗ್ಗೆ ಗಮನಹರಿಸಿ ಕ್ರಮ ಜರುಗಿಸುತ್ತೇನೆ ಎಂದು ಭರವಸೆ ನೀಡಿದರು.

ನಿಯೋಗದಲ್ಲಿ ಸಂಚಾಲಕ ಕೇತುಪುರ ಶಿವಪ್ರಕಾಶ್, ಹ್ಯಾಕನೂರು ರಾಚಪ್ಪ ಕೂರಿಸಿದ್ದನಹುಂಡಿ ರಾಜು, ಮರಡೀಪುರ ಮಲ್ಲಿಕಾರ್ಜುನ, ತ್ರಿವೇಣಿ ನಗರ ಮಹೇಶ್, ಕಾರ್ಮಿಕ ನಿಂಗರಾಜು ಮತ್ತಿತರರು ಭಾಗವಹಿಸಿದ್ದರು.

ಹುಣಸೂರು ಕೃಷಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್ ಚುನಾವಣೆಯಲ್ಲಿ ಜೆಡಿಎಸ್ ಜಯಭೇರಿ



ಹುಣಸೂರು,ಅ.25– ತಾಲೂಕು ಕೃಷಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ 2023–28ರ ಅವಧಿಗೆ ನಡೆದ ಆಡಳಿತ ಮಂಡಳಿಯ ನಿರ್ದೇಶಕರ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 14 ನಿರ್ದೇಶಕರು ಶಾಸಕ ಜಿ.ಡಿ.ಹರೀಶ್‌ಗೌಡರ ನೇತೃತ್ವದಲ್ಲಿ ಆಯ್ಕೆಯಾಗುವ ಮೂಲಕ ಭರ್ಜರಿ ಗೆಲುವು ಸಾಧಿಸಿದ್ದಾರೆ.

ತಾಲೂಕಿನ ಕೃಷಿ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಐದು ವರ್ಷದ ಅವಧಿಗೆ ನಡೆದ 14 ಸ್ಥಾನಗಳಿಗೆ ಬಿಳಿಕೆರೆ ದೇವರಾಜು ಚೆಲ್ಲಹಳ್ಳಿ ರುದ್ರೇಗೌಡ, ವಾರಂಚಿ ಚಂದ್ರಶೇಖರ ಅವರು ಚುನಾವಣೆಯಲ್ಲಿ ಗೆಲುವು ಸಾಧಿಸಿದ್ದಾರೆ. ಉಳಿದ 11 ಸ್ಥಾನಗಳು ಅವಿರೋಧವಾಗಿ ಆಯ್ಕೆಯಾಗಿವೆ. ಹಿರಿಕ್ಯಾತನಹಳ್ಳಿ ಗಾಯಿತ್ರಮ್ಮ, ಎಸ್‌ಟಿ ಕ್ಷೇತ್ರದಿಂದ ಚಿಕ್ಕಣ್ಣನಾಯಕ, ದೊಡ್ಡ ಹುಣಸೂರು ಕುಮಾರ, ಧರ್ಮಪುರ ಲಕ್ಷ್ಮಮ್ಮ ರಾಮಕೃಷ್ಣೇಗೌಡ, ಬನ್ನಿಕುಪ್ಪೆ ಉದಯ್ ಕುಮಾರ್, ಗಾವಡಗೆರೆ ರಾಮಕೃಷ್ಣೇಗೌಡ, ರಂಗಯ್ಯನಕೊಪ್ಪಲು ಸತ್ಯನಾರಾಯಣ್, ತೆಂಕಲ ಕೊಪ್ಪಲು ಹೇಮಂತ್ ಕುಮಾರ್, ಕೊಮ್ಮೆಗೌಡನಕೊಪ್ಪಲು ಮಹೇಂದ್ರ ಕುಮಾರ್, ಹೊನ್ನೇನಹಳ್ಳಿ ಶ್ರೀನಿವಾಸ್, ಸಾಲಗಾರರಾಲ್ಲದ ಕ್ಷೇತ್ರದಿಂದ ರವಿಕುಮಾರ್ ಅವರು ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಹರೀಶ್ ಘೋಷಣೆ ಮಾಡಿದ್ದಾರೆ. ನೂತನವಾಗಿ ಆಯ್ಕೆಯಾದ ನಿರ್ದೇಶಕರಿಗೆ ಶಾಸಕ ಜಿ.ಡಿ.ಹರೀಶ್‌ಗೌಡ ಅವರು ಅಭಿನಂದನೆ ಸಲ್ಲಿಸಿದ್ದಾರೆ.

ಹುಲ್ಲಹಳ್ಳಿ ಕಪಿಲ ಸೇತುವೆ ಸಂಚಾರ ಮುಕ್ತ


ಹುಲ್ಲಹಳ್ಳಿ, ಆ.25– ನಂಜನಗೂಡು ತಾಲೂಕಿನ ಹುಲ್ಲಹಳ್ಳಿ ಗ್ರಾಮದ ಹುಲ್ಲಹಳ್ಳಿ– ಮೈಸೂರು ಹೆದ್ದಾರಿಗೆ ಸಂಪರ್ಕ ಕಲ್ಪಿಸುವ ಕಪಿಲಾ ನದಿ ಸೇತುವೆಯ ದುರಸ್ತಿ ಕಾಮಗಾರಿ ಪೂರ್ಣಗೊಂಡಿದ್ದು, ಶುಕ್ರವಾರದಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

1968ರಲ್ಲಿ ನಿರ್ಮಾಣಗೊಂಡ ಕಪಿಲ ಸೇತುವೆ ಸರಿಯಾದ ನಿರ್ವಹಣೆ ಇಲ್ಲದೆ ತುಂಬಾ ಶಿಥಿಲಗೊಂಡಿದ್ದು, ಸೇತುವೆ ಹಳ್ಳ ಕೊಳ್ಳಗಳಿಂದ ಕೂಡಿ, ಸೇತುವೆಗೆ ಬಳಸಿದ್ದ ಕಬ್ಬಿಣ ಎದ್ದು ಕಾಣುತ್ತಿದ್ದವು. ವಾಹನ ಸವಾರರು ಸೇತುವೆ ಮೇಲೆ



ಸಂಚರಿಸಲು ತೊಂದರೆ ಉಂಟಾಗಿತ್ತು.

ಸಂಘ–ಸಂಸ್ಥೆಗಳು ಸೇತುವೆ ದುರಸ್ತಿ ಕಾರ್ಯ ನಡೆಸುವಂತೆ ಪ್ರತಿಭಟನೆ ನಡೆಸಿದ್ದವು, ಎಚ್ಚೆತ್ತ ಅಧಿಕಾರಿಗಳು ಮೂರು ತಿಂಗಳ ಕಾಲ ಸೇತುವೆ ಮೇಲೆ ವಾಹನ ಸಂಚಾರವನ್ನು ಸ್ಥಗಿತಗೊಳಿಸಿ ದುರಸ್ತಿ ಕಾರ್ಯ ನಡೆಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ.



ಕಾರ್ಯ ಗ್ರಾಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಭಿಮಾನಿ ಬಳಗದ ವತಿಯಿಂದ ಶ್ರೀ ವರಮಹಾಲಕ್ಷ್ಮಿ ಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಬಸವರಾಜು, ತಗಡೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಂಗಸ್ವಾಮಿ, ಕಾಂಗ್ರೆಸ್ ಮುಖಂಡ ಕಾರ್ಯ ಕುಮಾರ್, ಸಿದ್ದಯ್ಯ, ಸ್ವಾಮಿ, ಗ್ರಾಪಂ ಅಧ್ಯಕ್ಷೆ ಮಹೇಶ್ವರಿ ಲಿಂಗರಾಜು, ಉಪಾಧ್ಯಕ್ಷ ಕಾವ್ಯ ಶೇಷಾದ್ರಿ, ಗ್ರಾಪಂ ಮಾಜಿ ಅಧ್ಯಕ್ಷ ಮರಿಸ್ವಾಮಿ ನಾಯ್ಕ, ಕಾರ್ಯ ಗ್ರಾಪಂ ವ್ಯಾಪ್ತಿಯ ಸಿದ್ದರಾಮಯ್ಯನವರ ಅಭಿಮಾನಿ ಹಾಜರಿದ್ದರು.

ಮುದ್ದಹಳ್ಳಿಯಲ್ಲಿ ಗಣಿಗಾರಿಕೆಯಿಂದ ಬೆಳೆಗಳಿಗೆ, ಜಾನುವಾರುಗಳಿಗೆ ತೊಂದರೆ

ರೈತ ಸಂಘದ ನೇತೃತ್ವದಲ್ಲಿ ಗ್ರಾಮಸ್ಥರ ಪ್ರತಿಭಟನೆ

ನಂಜನಗೂಡು, ಆ.25– ತಾಲೂಕಿನ ಮುದ್ದಹಳ್ಳಿ ಗ್ರಾಮದಲ್ಲಿ ಕಳೆದ 6 ತಿಂಗಳಿನಿಂದ ಎಮ್ ಸ್ಯಾಂಡ್ ಗಣಿಗಾರಿಕೆ ನಡೆಯುತ್ತಿದ್ದು, ಇದರಿಂದಾಗಿ ಪರಿಸರ ನಾಶವಾಗುವುದರ ಜೊತೆಗೆ ಅಕ್ಕ ಪಕ್ಕದ ರೈತರ ಜಮೀನುಗಳಲ್ಲಿ ಬೆಳೆದ ಬೆಳೆಗಳಿಗೆ ಹಾಗೂ ಜಾನುವಾರುಗಳಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಗ್ರಾಮದ ರೈತರು ರೈತ ಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದರು.



ಜಿಲ್ಲಾ ರೈತ ಸಂಘದ ಅಧ್ಯಕ್ಷ ವಿದ್ಯಾಸಾಗರ್ ಮಾತನಾಡಿ, ಗ್ರಾಮದ ಸರ್ವೆ ನಂ. 105/4,5 ರಲ್ಲಿ ಕಳೆದ 6 ತಿಂಗಳಿನಿಂದ ಕ್ರಷರ್ ಆರಂಭಿಸಲಾಗಿದೆ. ಕ್ರಷರ್‌ನಿಂದ ಹೊರ ಹೊಮ್ಮುವ ಅತಿಯಾದ ಧೂಳು ಅಕ್ಕಪಕ್ಕದ ಜಮೀನುಗಳಲ್ಲಿ ರೈತರು ಬೆಳೆದ ಬೆಳೆಗಳ ಮೇಲೆ ಬೀಳುತ್ತಿದ್ದು, ಇಳುವರಿ ಮೇಲೆ ಪರಿಣಾಮ ಉಂಟಾಗುತ್ತಿದೆ ಮತ್ತು ಕರ್ಕಶ ಶಬ್ದದಿಂದ ಜಾನುವಾರುಗಳಿಗೆ ಆರೋಗ್ಯದ ಸಮಸ್ಯೆ ಉಂಟಾಗುತ್ತಿದೆ ಎಂದು ಆಪಾದಿಸಿದರು.

ಗಣಿಗಾರಿಕೆಯ ಧೂಳಿನಿಂದ ಮಣ್ಣಿನ ಫಲವತ್ತತೆ ಹಾಳಾಗುತ್ತಿದೆ, ಗ್ರಾಮದಲ್ಲಿ ಕೃಷಿಯಲ್ಲಿ ತೊಡಗಿರುವ ಸಣ್ಣ ಮತ್ತು ಅತಿ ಸಣ್ಣ ರೈತರ ಬದುಕಿಗೆ ತೊಂದರೆಯಾಗಿದೆ, ತಾಲೂಕು ಆಡಳಿತ ಕ್ರಷರ್ ಅನ್ನು ಮುಚ್ಚಿಸಿ ಅಥವಾ ಸ್ಥಳಾಂತರಿಸಿ ರೈತರ ಹಾಗೂ ಪರಿಸರದ ಮೇಲೆ ಉಂಟಾಗುತ್ತಿರುವ ತೊಂದರೆಯನ್ನು ನಿವಾರಿಸಬೇಕು ಎಂದು ಆಗ್ರಹಿಸಿದರು. ವಿಜಯಲಕ್ಷ್ಮಿ ಮಾತನಾಡಿ ಕ್ರಷರ್ ನಿಯಮಗಳನ್ನು ಗಾಳಿಗೆ ತೂರಿ ಸ್ಥಾಪನೆಯಾಗಿದೆ. ಕ್ರಷರ್ ಸುತ್ತಮುತ್ತ ಮರಗಿಡಗಳು ಇರಬೇಕೆಂಬ ನಿಯಮವಿದ್ದರೂ ಅದನ್ನು ಪಾಲಿಸಿಲ್ಲ, ಇದರಿಂದ ಹೆಚ್ಚಿನ ಧೂಳು ಮತ್ತು ಕರ್ಕಶ ಶಬ್ದ ಉಂಟಾಗಿ ಮಣ್ಣಿನ ಫಲವತ್ತತೆ ಹಾಳಾಗುತ್ತಿದೆ ಎಂದು ಆರೋಪಿಸಿದರು.

ಪ್ರತಿಭಟನೆಯ ನಂತರ ರೈತರು ತಹಶೀಲ್ದಾರ್ ಶಿವಕುಮಾರ್ ಕಾಸ್ನೂರು ಅವರಿಗೆ ಮನವಿ ಪತ್ರ ಸಲ್ಲಿಸಿದರು. ಪ್ರತಿಭಟನೆಯಲ್ಲಿ ಮುದ್ದಹಳ್ಳಿ ಪ್ರಕಾಶ್, ಪುಟ್ಟಣ್ಣ, ಚಂದ್ರಶೇಖರ್, ಚಿಕ್ಕಂಡಯ್ಯ, ಸಿದ್ದರಾಜು, ರವಿ, ದೇವಯ್ಯ, ಸುರೇಶ್, ಮಹೇಶ್, ಬಸವರಾಜು, ನಾಗಣ್ಣ, ಶಿವಕುಮಾರ್, ನಾಗರಾಜು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	**(ದೂ: 2521923)**
ಬೆದುರುಲಂಕ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	**(ದೂ: 2422871)**
ಜೈಲರ್(ತ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	**(ದೂ: 2497199)**
ಗದರ್–2 (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	**(ಮೊ:9900820093)**
ಬೇಬಿ (ತೆ)	4 ಪ್ರದರ್ಶನಗಳು
ಗಾಯಿತ್ರಿ	
ಜೈಲರ್ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಕಿಂಗ್ ಆಫ್ ಕೋತ (ತ)	4 ಪ್ರದರ್ಶನಗಳು
ಸಂಗಂ	
ಟೋಬಿ (ಕ)	4 ಪ್ರದರ್ಶನಗಳು
ಲಿಡೋ	
ಕೌಸಲ್ಯ ಸುಪ್ರಜಾ ರಾಮ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಗಾಂಡೀವಧಾರಿ ಅರ್ಜುನ (ತೆ)	4 ಪ್ರದರ್ಶನಗಳು
ಪ್ರಭಾ	
ನಮೋ ಭೂತಾತ್ಮ–2 (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10ಕ್ಕೆ, ಜೈಲರ್ (ತ): ಮ.12.50ಕ್ಕೆ, ಸಂ.4ಕ್ಕೆ, ರಾ.7.10ಕ್ಕೆ, ಕಿಂಗ್ ಆಫ್ ಕೋಥಾ (ಮ): ರಾ.10.25ಕ್ಕೆ.
ಸ್ಕ್ರೀನ್ 2	ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಬೆ.9.50ಕ್ಕೆ, ಜೈಲರ್ (ಕ): ಮ.1ಕ್ಕೆ, ಗದರ್ 2 (ಹಿಂ): ಸಂ.4.10ಕ್ಕೆ, ಡ್ರೀಂ ಗರ್ಲ್ (ಹಿಂ): ರಾ.7.25ಕ್ಕೆ, ರಾ.10.05ಕ್ಕೆ.
ಸ್ಕ್ರೀನ್ 3	ರಾಮಚಂದ್ರ ಬಾಸ್ & ಕೋ (ಮ): ಬೆ.10ಕ್ಕೆ, ಗ್ರ್ಯಾನ್ ಟುರಿಸ್ಮೋ (ಇಂ): ಮ.1.30ಕ್ಕೆ, ರಾ.7.20ಕ್ಕೆ, ಗಾಂಢೀವಧಾರಿ ಅರ್ಜುನ (ತೆ): ಸಂ.4.30ಕ್ಕೆ, ಅಖೇಲಿ (ಹಿಂ): ರಾ.10ಕ್ಕೆ.
ಸ್ಕ್ರೀನ್ 4	ಟೋಬಿ (ಕ): ಬೆ.10ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಜೈಲರ್ (ಕ): ಬೆ.11.20ಕ್ಕೆ, ರಾ.9.50ಕ್ಕೆ, ಜೈಲರ್ (ತ): ಮ.2.50ಕ್ಕೆ, ಸಂ.6.20ಕ್ಕೆ.
ಸ್ಕ್ರೀನ್ 2	ಗೂಮರ್ (ಹಿಂ): ಬೆ.9.55ಕ್ಕೆ, ಓಎಂಜಿ 2 (ಹಿಂ): ಮ.12.55ಕ್ಕೆ, ರಾ.7.15ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಸಂ.4.10ಕ್ಕೆ, ಬ್ಲೂ ಬೀಟಲ್ (ಇಂ): ರಾ.10.30ಕ್ಕೆ.
ಸ್ಕ್ರೀನ್ 3	ಗದರ್ 2 (ಹಿಂ): ಬೆ.9.55ಕ್ಕೆ, ರಾಖಿ ಔರ್ ರಾಣಿ ಕೀ ಪ್ರೇಮ್ ಕಹಾನಿ (ಹಿಂ): ಮ.1.25ಕ್ಕೆ, ಬ್ಲೂ ಬೀಟಲ್ (ಇಂ): ಸಂ.4.55ಕ್ಕೆ, ಆಚಾರ್ & ಕೋ (ಕ): ರಾ.7.45ಕ್ಕೆ, ಗೂಮರ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಜೈಲರ್ (ತ): ಬೆ.10.30ಕ್ಕೆ, ಗದರ್ 2(ಹಿಂ): ಮ.2ಕ್ಕೆ, ಸಂ.6.10ಕ್ಕೆ, ಓಎಂಜಿ 2 (ಹಿಂ): ರಾ.9.40ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಈ ಪಟ್ಟಣಕ್ಕೆ ಏನಾಗಿದೆ (ಕ): ಬೆ.10.45ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಮ.1.15ಕ್ಕೆ, ಶೀಲಾ (ಕ): ಸಂ.4.15ಕ್ಕೆ, ಡಿಡಿ ರಿಟರ್ನ್ಸ್ (ತ): ಸಂ.6.30ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕೌಸಲ್ಯ ಸುಪ್ರಜಾ ರಾಮ (ಕ): ಬೆ.1.15ಕ್ಕೆ, ರಾ.7ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ) ಸಂ.4.15ಕ್ಕೆ.
ಸ್ಕ್ರೀನ್ 3	ಕೌಸಲ್ಯ ಸುಪ್ರಜಾ ರಾಮ (ಕ): ಬೆ.10.30ಕ್ಕೆ, ಸಂ.4ಕ್ಕೆ, ಮೆಗ್ 2 ದಿ ಟ್ರೆಂಚ್ (3ಡಿ) (ಇಂ): ಮ.1.20ಕ್ಕೆ, ಸಂ.6.55ಕ್ಕೆ, ರಾ.9.15ಕ್ಕೆ.
ಸ್ಕ್ರೀನ್ 4	ಮೆಗ್ 2 ದಿ ಟ್ರೆಂಚ್ (3ಡಿ)(ಇಂ): ಬೆ.10.45ಕ್ಕೆ, ನಮೋ ಭೂತಾತ್ಮ (ಕ): ಮ.1.10ಕ್ಕೆ, ಮ.3.50ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ಸಂ.6.30ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ರಾ.9.15ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಜೈಲರ್ (ತ): ಬೆ.8.35ಕ್ಕೆ, ಬೆ.11.40ಕ್ಕೆ, ಮ.3.40ಕ್ಕೆ, ಸಂ.6.45ಕ್ಕೆ, ರಾ.10.30ಕ್ಕೆ, ಜೈಲರ್ (ಕ): ಬೆ.8.25ಕ್ಕೆ, ಮ.3.10ಕ್ಕೆ, ಓಎಂಜಿ 2 (ಹಿಂ): ಬೆ.8.20ಕ್ಕೆ, ಬೆ.11.50ಕ್ಕೆ, ಸಂ.6.40ಕ್ಕೆ, ರಾ.10.15ಕ್ಕೆ, ಗದರ್ 2 (ಹಿಂ): ಮ.12.05ಕ್ಕೆ, ಮ.3.10ಕ್ಕೆ, ರಾ.7.10ಕ್ಕೆ, ರಾ.10ಕ್ಕೆ, ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ (ಕ): ರಾ.9.45ಕ್ಕೆ, ಆಚಾರ್ & ಕೋ (ಕ): ಮ.3.55ಕ್ಕೆ, ಕೌಸಲ್ಯ ಸುಪ್ರಜಾ ರಾಮ (ಕ): ಮ.3.25ಕ್ಕೆ, ರಾ.10.30ಕ್ಕೆ, ನಮೋ ಭೂತಾತ್ಮ (ಕ): ಬೆ.11.55ಕ್ಕೆ, ರಾಖಿ ಔರ್ ರಾಣಿ (ಹಿಂ): ಬೆ.9.20ಕ್ಕೆ, ಸಂ.6.20ಕ್ಕೆ, ರಾ.9.50ಕ್ಕೆ, ಓಪನ್‌ಹೈಮರ್ (ಇಂ): ಸಂ.6.35ಕ್ಕೆ, ಭೋಳಾ ಶಂಕರ್ (ತೆ): ಬೆ.9.05ಕ್ಕೆ, ಮ.12.30ಕ್ಕೆ, ಮ.2.55ಕ್ಕೆ, ಸಂ.6.20ಕ್ಕೆ, ಮೆಗ್ 2 (ಇಂ): ಮ.12.50ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



ಉತ್ತರ ಪ್ರದೇಶದ ಶ್ರೀ ಕರೋಲಿ ಶಂಕರ್ ಮಹಾದೇವ್ ಬಾಬಾರವರು ಸುತ್ತೂರು ಶ್ರೀಕ್ಷೇತ್ರಕ್ಕೆ ಭೇಟಿ ನೀಡಿ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರಿಂದ ಆಶೀರ್ವಾದ ಪಡೆದರು.



ಟಿ.ನರಸೀಪುರ ಪಟ್ಟಣದ ಇತಿಹಾಸ ಪ್ರಸಿದ್ಧ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಾಲಯದಲ್ಲಿ ಸರ್ಕಾರದ ಆದೇಶದಂತೆ ಶ್ರೀ ಮಹಾಲಕ್ಷ್ಮಿ ಅಮ್ಮನವರ ಗುಡಿಯಲ್ಲಿ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಮಹಿಳೆಯರಿಗೆ ಬಳೆ, ಪ್ರಸಾದ, ಅರಿಶಿನ–ಕುಂಕುಮ ನೀಡಲಾಯಿತು. ಆಗಮಿಕರಾದ ಶ್ರೀಧರ್ ಭಟ್, ಪಾರುಪತ್ತೆಗಾರು ತಿರುಮಕೂಡಲು ದೀಪು ಮತ್ತಿತರಿದ್ದಾರೆ.

ಅಭಿವೃದ್ಧಿ ಅಂದಕ್ಕೆ ಮರಗಳ ಸಂತತಿಗೆ ಸಂಚಕಾರ ತಂದಿರುವ ಮೈಸೂರು ಪಾಲಿಕೆ




ಮೈಸೂರಿನ ಹಲವು ರಸ್ತೆಗಳ ಅಭಿವೃದ್ಧಿ ಹೆಸರಲ್ಲಿ ಅಲ್ಲಿದ್ದ ಮರಗಳ ನೆಲಸಮ ಮಾಡಲಾಗಿದೆ. ಇನ್ನು ವಾಣಿಜ್ಯ ಮಳಿಗೆಗಳವರು ತಮ್ಮ ವ್ಯಾಪಾರ ವಹಿವಾಟಿಗೆ ಅಡ್ಡಿಯಾಗಿವೆ ಎಂದು ಹೇಳಿ ಯಾವ ಚಿಂತೆಯೂ ಇಲ್ಲದೆ ಮರಗಳ 'ಹತ್ಯಾಕಾಂಡ' ಮಾಡಿದ್ದಾರೆ. ಅರಣ್ಯ ಇಲಾಖೆಯ ಬುದ್ಧಿವಂತ ವರ್ಗ ವಿದ್ಯುತ್ ಲೈನ್ ಅಡಿ ಸಸಿಗಳನ್ನು ಬೆಳೆಸಿ, ಅವುಗಳು ವಿದ್ಯುತ್ ತಂತಿ ತಾಗುತ್ತವೆ ಅನ್ನುವಾಗ ಸುಳಿಯನ್ನೇ ಕತ್ತರಿಸಿ ಅದರ ಬೆಳವಣಿಗೆಗೆ ಕಂಟಕವಾಗುತ್ತಿದ್ದಾರೆ. ಇದರ ಬಗ್ಗೆ ಗಮನಹರಿಸು ವಂತಹ ಬುದ್ಧಿಜೀವಿ ಪರಿಸರವಾದಿಗಳ ನಾಕಾಣೆ. ಒಂದೆಡೆ ರಘುಲಾಲ್ ರಾಘವನ್ ಅವರು ಇಡೀ ಮೈಸೂರು ಹಸಿರಾಗಿಸಲು ಪರಿಶ್ರಮ ಪಡುತ್ತಿದ್ದಾರೆ. ಮತ್ತೊಂದೆಡೆ ಬೇಜವಾಬ್ದಾರಿ ಜನ ಮೈಸೂರಿನ ಸಸ್ಯ ಸಂಕುಲಕ್ಕೆ ಕಂಟಕವಾಗಿದ್ದಾರೆ.

-ಪ್ರಭುಸ್ವಾಮಿ, ದೇವರಾಜ ಮೊಹಲಾ

ಮಹಾರಾಜರು ವ್ಯವಸ್ಥಿತವಾಗಿ ನಿರ್ಮಿಸಿರುವ ಮೈಸೂರು ನಗರವನ್ನು ಅಭಿವೃದ್ಧಿ ನೆಪದಲ್ಲಿ ಹಾಳು ಮಾಡುತ್ತಿದ್ದಾರೆ. ಯಾವುದೇ ಯೋಜನೆಗಳಲ್ಲಿ ದೂರದೃಷ್ಟಿತ್ವ ಕಾಣುತ್ತಿಲ್ಲ. ಬೇಕಾಬಿಟ್ಟಿ ಕೆಲಸ ಮಾಡಿ, ಹಣ ಮಾಡುವುದಷ್ಟೇ ಮುಖ್ಯವಾಗಿದೆ. ಜನಪ್ರತಿನಿಧಿಗಳು, ಅಧಿಕಾರಿಗಳಲ್ಲಿ ಬದ್ಧತೆ ಇಲ್ಲವಾಗಿದೆ. ಯಾವ ಕಾರಣಕ್ಕೋ ಏನೋ ಒಮ್ಮೊಮ್ಮೆ ಭಾರೀ ಪ್ರತಿಭಟನೆ ನಡೆಸುವ ಪರಿಸರವಾದಿಗಳು ಇಂತಹ ಸೂಕ್ಷ್ಮ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಸಾರ್ವಜನಿಕರದ್ದೂ ಜಾಣಕುರುಡು. ಫುಟ್‌ಪಾತ್ ಸೌಂದರ್ಯೀಕರಣಕ್ಕಾಗಿ ಗಿಡ–ಮರಗಳ ಜೀವ ತೆಗೆಯುವುದು ಎಷ್ಟು ಸರಿ? ಇದು ಗಂಭೀರ ವಿಚಾರ.

- ಪ್ರತಾಪ್ ಗೌಡ, ಮೈಸೂರು





ಮೈಸೂರು, ಆ.25(ಎಸ್‌ಬಿಡಿ)– ಹೆಚ್ಚು ಹೆಚ್ಚು ಮರಗಳನ್ನು ಬೆಳೆಸಿ, ಮೈಸೂರಿನ ಪರಿಸರ ಸಂರಕ್ಷಿಸಬೇಕಿರುವ ಮಹಾನಗರ ಪಾಲಿಕೆಯೇ ಬೆಳೆದು ನಿಂತಿರುವ ಮರಗಳ ಹನನಕ್ಕೆ ಅವಕಾಶ ನೀಡಿದೆ.

ಅಭಿವೃದ್ಧಿ ನೆಪದಲ್ಲಿ ಮರಗಳ ಸುತ್ತ ಕಾಂಕ್ರೀಟ್ ಅಥವಾ ಡಾಂಬರು ಸುರಿದು ಮರಗಳನ್ನು ಉಸಿರುಗಟ್ಟಿಸಲಾಗುತ್ತಿದೆ. ಇದರಿಂದ ನೀರು ಮತ್ತು ಪೋಷಕಾಂಶದ ಕೊರತೆಯುಂಟಾಗಿ ಕೆಲವೇ ವರ್ಷಗಳಲ್ಲಿ ಅವು ನೆಲಕ್ಕುರುಳುತ್ತವೆ. ಈ ವೇಳೆ ಮನುಷ್ಯ ಹಾಗೂ ಇತರೆ ಪ್ರಾಣಿಗಳು ಸಾವು–ನೋವಿಗೆ ತುತ್ತಾಗಬಹುದು. ಆಸ್ತಿ–ಪಾಸ್ತಿಗೂ ಹಾನಿಯಾಗಬಹುದು. ಇದಕ್ಕೆಲ್ಲಾ ಮಹಾನಗರ ಪಾಲಿಕೆ ನಿರ್ಲಕ್ಷ್ಯವೇ ಕಾರಣವಾಗಲಿದೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸುತ್ತಿರುವುದಲ್ಲದೆ, ಪಾಲಿಕೆ ಪರವಾನಗಿ ಪಡೆದುಕೊಂಡೇ ಕಾಸಿಗಾಗಿ ಕಾಮಗಾರಿ ನಡೆಸಲಾಗುತ್ತಿದೆಯೇ? ಪರಿಸರ ವಾದಿಗಳೆನಿಸಿಕೊಂಡವರ ಕಣ್ಣಿಗೆ ಇದೆಲ್ಲಾ ಕಾಣಿಸುತ್ತಿಲ್ಲವೇ? ಎಂದು ತೀಕ್ಷ್ಣವಾಗಿ ಪ್ರಶ್ನಿಸಿದ್ದಾರೆ.

'ಗಿಡ ಬೆಳೆಸಿ, ಮರ ಉಳಿಸಿ' ಘೋಷಣೆಗಷ್ಟೇ ಸೀಮಿತವಾಗಿದೆ. ಗಿಡ ನೆಟ್ಟು ಅದಕ್ಕೆ ನೀರೆರೆದು ಬೆಳೆಸುವ ಸಾಮರ್ಥ್ಯವಿಲ್ಲವಾದರೂ ತನ್ನಿಂತಾನೆ ಬೆಳೆದು ಆಸರೆಯಾಗಿರುವ ಮರಗಳನ್ನು ಹನನ ಮಾಡುವುದು ಎಷ್ಟು ಸರಿ. ಬಹುತೇಕ ರಸ್ತೆಯ ಇಕ್ಕೆಲದ ಫುಟ್‌ಪಾತ್‌ನಲ್ಲಿ ಮರಗಳಿವೆ. ಅವುಗಳಿಗೆ ಯಾರೂ ನೀರು–ಗೊಬ್ಬರ ಹಾಕಿ ಬೆಳೆಸಿಲ್ಲ. ತಮ್ಮ ಬೇರುಗಳ ಮೂಲಕ ಭೂಮಿಯಿಂದ ನೀರು ಹಾಗೂ ಪೋಷಕಾಂಶ ಹೀರಿಕೊಂಡು ಬೆಳೆದು, ಹಸಿರಿನಿಂದ ಕಂಗೊಳಿಸುತ್ತಿವೆ. ಕೊಡಲಿ ಹಾಕುವ ಮನುಷ್ಯನ ಉಸಿರಾಟಕ್ಕೆ ಆಮ್ಲಜನಕ, ನೆರಳು ನೀಡುತ್ತಿವೆ. ಪ್ರಾಣಿ–ಪಕ್ಷಿಗಳಿಗೆ ಆಸರೆಯಾಗಿವೆ. ಸೌಂದರ್ಯದ ಭಾಗವಾಗುವುದರ ಜೊತೆಗೆ ನಗರದ ವಾತಾವರಣವನ್ನು ತಂಪುಗೊಳಿಸಿವೆ ಆದರೆ ಅಭಿವೃದ್ಧಿ ನೆಪದಲ್ಲಿ ಮರಗಳ ಬೇರುಗಳಿಗೆ ಕೊಡಲಿ ಹಾಕಲಾಗುತ್ತಿದೆ.

ನಗರದ ಹಲವೆಡೆ ರಸ್ತೆ ಅಭಿವೃದ್ಧಿ ಹಾಗೂ ಸೌಂದರ್ಯೀಕರಣ ಕಾಮಗಾರಿ ಪ್ರಗತಿಯಲ್ಲಿದೆ. ಫುಟ್‌ಪಾತ್‌ಗೆ ಇಂಟರ್ ಲಾಕ್ ಟೈಲ್ಸ್ ಅಳವಡಿಸಲಾಗುತ್ತಿದೆ. ಆದರೆ ಅನೇಕ ಕಡೆಗಳಲ್ಲಿ ಈ ಕಾಮಗಾರಿಯೇ ಮರಗಳಿಗೆ ಸಂಚಕಾರವಾಗುತ್ತಿದೆ. ಸಮತಟ್ಟು ಮಾಡುವಾಗ ಮರಗಳ ಸುತ್ತ ಮೇಲ್ಮೈನಲ್ಲಿರುವ ಬೇರುಗಳನ್ನು ಕತ್ತರಿಸಿ, ಕಾಂಕ್ರೀಟ್ ಪ್ಯಾಕ್ ಮಾಡಿ, ಅದರ ಮೇಲೆ ಇಂಟರ್‌ಲಾಕ್ ಹಾಕಲಾಗುತ್ತಿದೆ. ಇದರಿಂದ ಒಂದು ಹನಿ ಮಳೆ ನೀರೂ ಕೂಡ ಮರದ ಬುಡ ಸೇರುವುದಿಲ್ಲ. ಇಂಟರ್‌ಲಾಕ್ ಮೇಲಿಂದ ನೀರು ರಸ್ತೆ ಅಥವಾ ಚರಂಡಿಗೆ ಹರಿಯುತ್ತದೆ. ಕಾಲಕ್ರಮೇಣ ಭೂಮಿಯೊಳಗಿನ ನೀರಿನ ಅಂಶವೂ ಬರಿದಾಗಿ ಮರಗಳು ಅಶಕ್ತಗೊಂಡು ನೆಲಕ್ಕುರುಳುತ್ತವೆ. ಇನ್ನು ರಸ್ತೆ ಬದಿಯಲ್ಲಿರುವ ಮರಗಳ ಸುತ್ತ ಡಾಂಬರ್ ಹಾಕಲಾಗಿದೆ. ಹೀಗೆ ಮಾಡಲಾಗಿರುವ ಮರಗಳ ಸ್ಥಿತಿಯೂ ಭಿನ್ನವಾಗಿಲ್ಲ. ಇವು ಕೂಡ ಯಾವಾಗಲಾದರೂ ನೆಲಕ್ಕುರುಳಬಹುದು.

ಯಾದವಗಿರಿಯ ವಿವೇಕಾನಂದ ರಸ್ತೆ, ಚದುರಂಗ ರಸ್ತೆ ಆಯಿಷ್ ಸಂಸ್ಥೆ ಸಮೀಪ, ಸರಸ್ವತಿಪುರಂ ಈಜುಕೊಳದ ಬಳಿ, ಮಹಾರಾಜ ಕಾಲೇಜು ಮೈದಾನದ ಬಳಿ, ಹೀಗೆ ನಗರದ ಹಲವೆಡೆ ಮರದ ಸುತ್ತ ಅಗೆದು, ಬೇರುಗಳನ್ನು ಕತ್ತರಿಸಿ, ಕಾಂಕ್ರೀಟ್ ತುಂಬಿ ಸಮತಟ್ಟು ಮಾಡಿದ ಬಳಿಕ ಇಂಟರ್‌ಲಾಕ್ ಅಳವಡಿಸಲಾಗುತ್ತಿದೆ. ಫುಟ್‌ಪಾತ್ ಸೌಂದರ್ಯೀಕರಣಕ್ಕಾಗಿ ಬೆಳೆದು ನಿಂತಿರುವ ಮರಗಳ ಬುಡಕ್ಕೆ ಕೊಡಲಿ ಹಾಕಿ, ಅವುಗಳ ಆಯಸ್ಸು ಕಸಿಯಲಾಗುತ್ತಿದೆ. ಈ ಕೃತ್ಯ ಮುಂದುವರೆದರೆ ಮುಂದಿನ ದಿನಗಳಲ್ಲಿ ಸಾಧಾರಣ ಗಾಳಿ–ಮಳೆಗೂ ಮರಗಳು ನೆಲಕ್ಕುರುಳಬಹುದೆಂಬ ಆತಂಕ ಸೃಷ್ಟಿಯಾಗಿದೆ.

ಕೆಲ ತಿಂಗಳ ಹಿಂದೆ ಸರಸ್ವತಿಪುರಂ ಅಗ್ನಿಶಾಮಕ ಠಾಣೆ ರಸ್ತೆಯ ಫುಟ್‌ಪಾತ್‌ಗೆ ಇಂಟರ್‌ಲಾಕ್ ಅಳವಡಿಸಲಾಗುತ್ತಿತ್ತು ಮರಗಳ ಸುತ್ತ ಸ್ವಲ್ಪ ಜಾಗವನ್ನೂ ಬಿಡದೆ ಇಂಟರ್‌ಲಾಕ್ ಹಾಕುವುದನ್ನು 'ಟೀಂ ಮೈಸೂರು' ಸದಸ್ಯರು, ಅವೈಜ್ಞಾನಿಕ ಕಾಮಗಾರಿ ನಿಲ್ಲಿಸಿ, ಆ ಬಗ್ಗೆ ಮೇಯರ್ ಶಿವಕುಮಾರ್ ಗಮನಕ್ಕೆ ತಂದಿದ್ದರು. ಕೂಡಲೇ ಮೇಯರ್ ಸಂಬಂಧಪಟ್ಟ ಗುತ್ತಿಗೆದಾರನಿಗೆ ಕರೆ ಮಾಡಿ, ಫುಟ್‌ಪಾತ್ ಹಾಗೂ ರಸ್ತೆ ಬದಿಯಲ್ಲಿರುವ ಗಿಡ–ಮರಗಳು ಹಾಳಾಗದಂತೆ ಎಚ್ಚರವಹಿಸಿ ಕಾಮಗಾರಿ ಮುಂದುವರೆಸುವಂತೆ ಎಚ್ಚರಿಕೆ ನೀಡಿದ್ದರು. ಆದರೂ ಅವೈಜ್ಞಾನಿಕ ಕಾಮಗಾರಿ ಮುಂದುವರೆದಿದೆ.

ಅಧಿಕಾರಿ ವರ್ಗ, ಜನಪ್ರತಿನಿಧಿಗಳು, ಗುತ್ತಿಗೆದಾರರಲ್ಲಿ ಪರಿಸರ ಕಾಳಜಿ ಇರಬೇಕು. ಗಿಡ–ಮರಗಳ ಬುಡಕ್ಕೆ ನೀರು ಹೋಗದಂತೆ ಕಾಂಕ್ರೀಟ್, ಎಂ ಸ್ಯಾಂಡ್ ಹಾಕುವುದು ಸರಿಯಲ್ಲ. ಸುಲಭವಾಗಿ ಕೆಲಸ ಮುಗಿಸಬೇಕೆಂದು ಗಿಡ–ಮರಗಳ ಸುತ್ತ ಜಾಗ ಬಿಡದೆ ಇಂಟರ್‌ಲಾಕ್ ಅಳವಡಿಸುತ್ತಾರೆ. ಪಾಲಿಕೆ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಕಾಮಗಾರಿಯನ್ನು ಗಮನಿಸಬೇಕು. ಅವೈಜ್ಞಾನಿಕ ಕೆಲಸಗಳು ಕಂಡು ಬಂದರೆ ಕೂಡಲೇ ಸರಿಪಡಿಸಲು ಕ್ರಮ ವಹಿಸಬೇಕು. ಕಾಮಗಾರಿ ಪೂರ್ಣವಾದ ಬಳಿಕ ಪರಸ್ಪರ ದೂರಿದರೆ ಯಾವುದೇ ಪ್ರಯೋಜನವಿಲ್ಲ. ಸಾರ್ವಜನಿಕರ ತೆರಿಗೆ ಹಣವೂ ವ್ಯರ್ಥವಾದುತಾಗುತ್ತದೆ ಚೆಲುವಾಂಬ ಪಾರ್ಕ್ ಬಳಿ ಸೇರಿದಂತೆ ಕೆಲವೆಡೆ ಗಿಡ–ಮರಗಳ ಸುತ್ತಲೂ ಜಾಗ ಬಿಟ್ಟು, ಇಂಟರ್‌ಲಾಕ್ ಅಳವಡಿಸಲಾಗಿದೆ. ಮಳೆಯಾದಾಗ ಬುಡಕ್ಕೆ ನೀರು ಹರಿಯುವಂತೆ ಕ್ರಮ ವಹಿಸಲಾಗಿದೆ. ಇದು ಮೈಸೂರಿನ ಪರಿಸರದ ವಿಚಾರ. ನಿರ್ಲಕ್ಷಿಸದೆ ಕೂಡಲೇ ಕ್ರಮ ವಹಿಸಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

'ಗೃಹಲಕ್ಷ್ಮಿ' ಎಫೆಕ್ಟ್: ಮೈಸೂರು ಪೊಲೀಸರಿಗೆ ಮೂರು ದಿನ ರಜೆ ಇಲ್ಲ

ಮೈಸೂರು, ಆ. 25– ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆ 'ಗೃಹಲಕ್ಷ್ಮಿ'ಗೆ ಆಗಸ್ಟ್ 30ರಂದು ಮೈಸೂರಿನಲ್ಲಿ ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ಮೈಸೂರು ನಗರದ ಎಲ್ಲಾ ಪೊಲೀಸರು ಆಗಸ್ಟ್ 27ರಿಂದ 30ರವರೆಗೆ ಕಡ್ಡಾಯವಾಗಿ ಕರ್ತವ್ಯದಲ್ಲಿರಬೇಕೆಂದು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ಸೂಚಿಸಿದ್ದಾರೆ.

ಈ ಸಂಬಂಧ ಜ್ಞಾಪನಾ ಪತ್ರ ಹೊರಡಿಸಿರುವ ಅವರು, ಆಗಸ್ಟ್ 27ರಿಂದ 30ರವರೆಗೆ ಮುಖ್ಯಮಂತ್ರಿಗಳು ಮೈಸೂರು ಪ್ರವಾಸ ಕೈಗೊಂಡಿರುವುದರಿಂದ ನಗರದ ಎಲ್ಲಾ ಪೊಲೀಸ್ ಅಧಿಕಾರಿ ಹಾಗೂ ಸಿಬ್ಬಂದಿಗಳು ಹಾಜರಿರಬೇಕು. ಹಾಲಿ ರಜೆಯಲ್ಲಿರುವವರೂ ಕೂಡ ಆಗಸ್ಟ್ 27ರ ಸಂಜೆಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ.

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

PUBLIC NOTICE

Our clients, 1. Sri. RAGHURAM. D.S. aged about 65 years, son of Late. Srinivasaiah. D., and 2. Smt. VEENA. U., aged about 63 years, wife of Raghuram. D.S., both are residing at # 73, 4th Main, N Block, Kuvempunagar, Mysuru - 570023 are intending to purchase the schedule properties and as such, they have entered into an agreement of sale with Smt. SHRUTHI. H.Y., aged about 41 years, wife of Ravishankar. H.P., residing at # 783, 1st Main Road, Aadhyatma Prakasha Karyalaya Extn., Behind Aadhyatma Prakasha Karyalaya, Holenarasipura, Hassan-573211.

If anybody has got any claim over the schedule properties, they can file their objection with authentic documents in support of their objection and claims if any, within 7 days from the date of this publication, failing which, our clients will go ahead with the transaction with respect to the schedule properties. Any objections received afterwards will not bind our clients.

SCHEDULE: ITEM No.1: All that piece and parcel of Landed Property bearing Sy. No.25/2, measuring 2 Acres 19 Guntas, situated at Dasanuru Village, Doddakavalande Hobli, Nanjangud Taluk, Mysuru District, which is **bounded on:** East by:Land of Basavarajappa, son of Subbappa, West by: Water Course and pathway, North by: Item No.2 and lands of Ranganatha; South by: Lands of Naganna, Ningaiah, Siddaraju.

ITEM No.2: All that piece and parcel of Landed Property bearing Sy. No.25/4, measuring 1 Acre 10.08 Guntas, situated at Dasanuru Village, Doddakavalande Hobli, Nanjangud Taluk, Mysuru District, which is bounded on: East by:Land of D.K. Ranganatha son of Krishnaswamy Iyyengar, West by : Land of D.K. Ranganatha son of Krishnaswamy Iyyengar, North by : Road, South by: Item No. 1.

TOTAL 3 ACRE 29.08 GUNTAS OF LANDS IS THE SUBJECT MATTER OF THIS AGREEMENT OF SALE.

Sd/-O. SHAMA BHAT, B.A.LL.B.. Reg No. KAR 417/77, O. SATHISHA, B.Sc. LL.B..Reg No :KAR 721/89
ADVOCATES , No. 20/c, 2 Floor, Near Airlines Hotel, Jayalakshmi Vilas Road, Chamarajapuram, Mysuru-570004.
Phone : 0821-2429851
Date: 23-08-2023

ಚೆಸ್ ಆಟ ಮಕ್ಕಳ ಬುದ್ಧಿ ಶಕ್ತಿ ಉತ್ತೇಜನಕ್ಕೆ ಸಹಕಾರಿ



ಮೈಸೂರು, ಆ.25(ಎಸ್‌ಪಿಎನ್)– ಚೆಸ್ ಆಟ ಮಕ್ಕಳ ಬುದ್ಧಿಶಕ್ತಿಯನ್ನು ಉತ್ತೇಜಿಸುವ ಆಟ. ಈ ಪಂದ್ಯಾವಳಿಯಲ್ಲಿ ಪ್ರತಿಯೊಬ್ಬರು ಭಾಗವಹಿಸುವಂತೆ ಕರ್ನಾಟಕ ರಾಜ್ಯ ಚೆಸ್ ಸಂಘದ ಕಾರ್ಯದರ್ಶಿ ಅರವಿಂದ್ ಶಾಸ್ತ್ರಿ ತಿಳಿಸಿದರು.

ಮೈಸೂರು ವಿಜಯ ವಿಠಲ ವಿದ್ಯಾಸಂಸ್ಥೆ ಆವರಣದಲ್ಲಿ ವಿಜಯ ವಿಠಲ ವಿದ್ಯಾಸಂಸ್ಥೆ ಹಾಗೂ ಫಸ್ಟ್ ಮೂವ್ ಟ್ರಸ್ಟ್ ಸಹಯೋಗದೊಂದಿಗೆ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸ್ಕೂಲ್ಸ್ ಚೆಸ್ ಚಾಂಪಿಯನ್ ಶಿಪ್ ಪಂದ್ಯಾವಳಿಯನ್ನು ಉದ್ಘಾಟಿಸಿ ಮಾತನಾಡಿದರು.

ವಿವಿಧ ವಯೋಮಾನದ 400ಕ್ಕೂ ವಿದ್ಯಾರ್ಥಿಗಳು ಈ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿದ್ದು, ಈ ಆಟದಲ್ಲಿ ಪ್ರತಿಯೊಬ್ಬರು ಭಾಗಿಯಾಗುವುದರಿಂದ ಮಕ್ಕಳ ಬೌದ್ಧಿಕ ವಿಕಾಸಕ್ಕೆ ನಾಂದಿಯಾಗುತ್ತದೆ ಎಂದರು.

ವಿಜಯ ವಿಠಲ ವಿದ್ಯಾಸಂಸ್ಥೆಯ ಗೌರವ ಕಾರ್ಯದರ್ಶಿ ಆರ್. ವಾಸುದೇವ್ ಭಟ್ ಮಾತನಾಡಿ, ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ಶಿಕ್ಷಣ ಮಾತ್ರವಲ್ಲ. ಸಹಪಠ್ಯ ಚಟುವಟಿಕೆಗಳು ಅಷ್ಟೇ ಮುಖ್ಯ. ನಮ್ಮ ಶಾಲೆಯಲ್ಲಿ ಶಿಕ್ಷಣದ ಜೊತೆ ಜೊತೆಯಲ್ಲೇ ಚೆಸ್ ಸೇರಿದಂತೆ ಇತರೆ ಕ್ರೀಡೆಗೂ ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಚೆಸ್‌ನಲ್ಲಿ ಸಾಧನೆ ಮಾಡಿದ ಇಬ್ಬರೂ ಸಾಧಕರನ್ನು ಸನ್ಮಾನಿಸಲಾಯಿತು. ಮೊದಲಿಗೆ ಎನ್.ಜೆ. ಅನಿಲ್ ಕರ್ನಾಟಕದ ಆರನೇ ಇಂಟರ್ ನ್ಯಾಷನಲ್ ಆರ್ಬಿಟರ್ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಇದೇ ಆಗಸ್ಟ್‌ನಲ್ಲಿ ವರ್ಲ್ಡ್ ಚೆಸ್ ಅಸೋಸಿಯೇಷನ್ ವತಿಯಿಂದ ಇಂಟರ್ ನ್ಯಾಷನಲ್ ಆರ್ಬಿಟರ್ ಎಂಬ ಬಿರುದಿಗೆ ಪಾತ್ರರಾಗಿದ್ದಾರೆ. ಮತ್ತೊಬ್ಬ ಸಾಧಕಿ ಪ್ರಸಿದ್ಧಿ ಭಟ್ ಅವರು 2016, 2018, 2019, 2020ರಲ್ಲಿ ನಡೆದ ಕರ್ನಾಟಕ ರಾಜ್ಯ ಹುಡುಗಿಯರ ಚೆಸ್ ವಿಭಾಗದಲ್ಲಿ ಸತತವಾಗಿ ಗೆದ್ದು ಉತ್ತಮ ಕ್ರೀಡಾಪಟುವಾಗಿ ಹೊರಹೊಮ್ಮಿದ್ದಾರೆ. 2018ರಲ್ಲಿ ನಡೆದ ಕಾಮನ್ ವೆಲ್ತ್ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಭಾರತವನ್ನು ಪ್ರತಿನಿಧಿಸಿದ್ದಾರೆ. 2018ರಲ್ಲಿ ರಾಷ್ಟ್ರೀಯ ಐಸಿಎಸ್‌ಇ ಸ್ಕೂಲ್ಸ್ ಚೆಸ್ ಚಾಂಪಿಯನ್ ಶಿಪ್‌ನಲ್ಲಿ ಚಿನ್ನದ ಪದಕ ಪಡೆದಿದ್ದಾರೆ. 2023ರಲ್ಲಿ ಸೆಪ್ಟೆಂಬರ್ ತಿಂಗಳಲ್ಲಿ ಗುಜರಾತ್ ನಲ್ಲಿ ನಡೆಯುವ ರಾಷ್ಟ್ರೀಯ ಮಟ್ಟದ ಚೆಸ್ ಚಾಂಪಿಯನ್‌ಶಿಪ್‌ನಲ್ಲಿ ಕರ್ನಾಟಕವನ್ನು ಪ್ರತಿನಿಧಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಈ ವೇಳೆ ಕಾರ್ಯಕ್ರಮದ ಮೈಸೂರು ಜಿಲ್ಲಾ ಚೆಸ್ ಸಂಘದ ಕಾರ್ಯದರ್ಶಿ ನಾಗೇಂದ್ರ ಮುರಳೀಧರ್, ವಿಜಯ ವಿಠಲ ವಿದ್ಯಾಶಾಲೆಯ ಪ್ರಾಂಶುಪಾಲರಾದ ವೀಣಾ.ಎಸ್.ಎ.ರವರು, ವಿಜಯ ವಿಠಲ ಸಂಯುಕ್ತ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಸತ್ಯಪ್ರಸಾದ್, ಫಸ್ಟ್ ಮೂವ್ ಟ್ರಸ್ಟ್‌ನ ಅಧ್ಯಕ್ಷ ರವಿಕಿರಣ್ ಹಾಗೂ ಕಾರ್ಯದರ್ಶಿ ಎಂ.ಭರತ್ ಪೋಷಕರು, ವಿದ್ಯಾರ್ಥಿಗಳು, ಶಿಕ್ಷಕರು ಉಪಸ್ಥಿತರಿದ್ದರು.

ಆಸ್ತಿ ಮೌಲ್ಯ ಪರಿಷ್ಕರಣೆ ಕರಡು ಪ್ರತಿ ಪ್ರಕಟಣೆ

ಮೈಸೂರು,ಆ.25– ಕೆ.ಆರ್.ನಗರ ಮತ್ತು ಮಿರ್ಲೆ ಉಪ ನೋಂದಣಾಧಿಕಾರಿ ಕಾರ್ಯವ್ಯಾಪ್ತಿಯ ಜಮೀನು ಮತ್ತು ನಿವೇಶನಗಳ ಮಾರುಕಟ್ಟೆ ಮೌಲ್ಯದ ಪರಿಷ್ಕರಣೆ ಕರಡು ಪ್ರತಿಯನ್ನು ಉಪ ನೋಂದಣಾಧಿಕಾರಿಯ ಕಚೇರಿ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿದೆ. ಸಾರ್ವಜನಿಕ ಆಕ್ಷೇಪಣೆ ಇದ್ದಲ್ಲಿ, ಕಚೇರಿಯ ಸೂಕ್ತ ದಾಖಲಾತಿಗಳೊಂದಿಗೆ 15 ದಿನಗಳ ಒಳಗಾಗಿ ಸಂಬಂಧಪಟ್ಟ ಕಾರ್ಯದರ್ಶಿ ಮತ್ತು ಉಪ ನೋಂದಣಾಧಿಕಾರಿಗಳಿಗೆ ಅವರಿಗೆ ಸಲ್ಲಿಸಬಹುದು ಎಂದು ಹಿರಿಯ ಉಪನೋಂದಣಾಧಿಕಾರಿ ಕೆ.ಆರ್.ಅನಿತಾ ತಿಳಿಸಿದ್ದಾರೆ.

ಕುಂಚಿಟಿಗರ ಸಂಘ (ರಿ.)

ದಿವಾನ್ಸ್ ರಸ್ತೆ, ದೇವರಾಜ ಮೊಹಲ್ಲಾ, ಮೈಸೂರು

ಪ್ರಕಟಣೆ

ಸಂಘದ ಕಾರ್ಯಕಾರಿ ಪರಿಷತ್ ಚುನಾವಣೆಗೆ ಸಂಬಂಧಿಸಿದಂತೆ ಮತದಾನದ ಹಕ್ಕುಳ್ಳ ಅರ್ಹ ಸದಸ್ಯರು, ಮತದಾನದ ಹಕ್ಕನ್ನು ಹೊಂದಿಲ್ಲದೇ ಇರುವ ಅನರ್ಹ ಸದಸ್ಯರು ಹಾಗೂ ಮರಣ ಹೊಂದಿರುವ ಸದಸ್ಯರ ಕರಡು ಪಟ್ಟಿಗಳನ್ನು ಸಂಘದ ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ. ಈ ಕರಡು ಪಟ್ಟಿಗಳಿಗೆ ಸಂಬಂಧಿಸಿದಂತೆ ಸಂಘದ ಸದಸ್ಯರು ಆಕ್ಷೇಪಣೆಗಳನ್ನು ಅಥವಾ ವಿಳಾಸ ತಿದ್ದುಪಡಿಗೆ ಮನವಿಗಳನ್ನು ಪೂರಕ ದಾಖಲೆಗಳೊಂದಿಗೆ ಸಂಘಕ್ಕೆ ಸಲ್ಲಿಸಲು ದಿನಾಂಕ: 04.09.2023ರ ಸಂಜೆ 5.30ರವರೆಗೆ ಕಾಲಾವಕಾಶ ನೀಡಲಾಗಿದೆ. ನಂತರ ಬರುವ ಮನವಿ / ಆಕ್ಷೇಪಣೆಗಳನ್ನು ಸ್ವೀಕರಿಸಲಾಗುವುದಿಲ್ಲ.

ದಿನಾಂಕ: 25.08.2023, ಸ್ಥಳ: ಮೈಸೂರು
ಸಹಿ/– ಆಡಳಿತಾಧಿಕಾರಿ, ಕುಂಚಿಟಿಗರ ಸಂಘ (ರಿ), ಮೈಸೂರು